ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 30 ಭಾನುವಾರ 2023

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 15 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

₹4





80 ವರ್ಷ ಮೇಲ್ಪಟ್ಟವರಿಂದ ಮನೆಯಲ್ಲೇ ಮತದಾನ ಆರಂಭ

ಮೈಸೂರು,ಏ.29(ಆರ್‌ಕೆ)–80 ವರ್ಷ ಮೇಲ್ಪಟ್ಟವರು, ಅನಾರೋಗ್ಯದಿಂದ ಹಾಸಿಗೆ ಹಿಡಿದಿರುವ ವೃದ್ಧರು, ಅಂಗವಿಕಲರು ಇಂದಿನಿಂದ ಏ.6ರವರೆಗೆ ಮನೆಯಿಂದಲೇ ಮತದಾನ ಮಾಡುವ ವ್ಯವಸ್ಥೆಯನ್ನು ಭಾರತ ಚುನಾವಣಾ ಆಯೋಗವು ಇದೇ ಮೊದಲ ಬಾರಿ ಆರಂಭಿಸಿದೆ.

ಅದರಂತೆ ಬೂತ್ ಮಟ್ಟದ ಅಧಿಕಾರಿ (BLO)ಗಳು ಮತಪತ್ರದೊಂದಿಗೆ ಈಗಾಗಲೇ ಗುರ್ತಿಸಿ 12–ಡಿ ನಮೂನೆ ಸಲ್ಲಿಸಿರುವ ಹಿರಿಯರ ಮನೆಗಳಿಗೆ ತೆರಳಿ ಗುಪ್ತ ಮತದಾನ ನಡೆಸಿ ಪ್ರಕ್ರಿಯೆಯನ್ನು ವೀಡಿಯೋ ರೆಕಾರ್ಡ್ ಮಾಡಿಕೊಂಡು ಆಯಾ ಕ್ಷೇತ್ರದ ಚುನಾವಣಾ ಧಿಕಾರಿಗೆ ತಲುಪಿಸುತ್ತಿದ್ದಾರೆ. ಏ.6ರವರೆಗೂ ಈ ಪ್ರಕ್ರಿಯೆ ನಡೆಯಲಿದ್ದು ಮತಪತ್ರಗಳನ್ನು ಭದ್ರತೆಯಲ್ಲಿರಿಸಿ ಮೇ13ರಂದು ಮತ ಎಣಿಕೆ ವೇಳೆ ಅವುಗಳನ್ನು ಎಣಿಕೆ ಮಾಡಿ ಫಲಿತಾಂಶಕ್ಕೆ ಸೇರಿಸಿಕೊಳ್ಳಲಾಗುವುದು ಎಂದು ಜಿಲ್ಲಾ ಚುನಾವಣಾಧಿಕಾರಿ ತಿಳಿಸಿದ್ದಾರೆ.

ಮೈಸೂರು ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳಲ್ಲಿ 85,514 ಎಂಭತ್ತು ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು, 30,883 ಅಂಗವಿಕಲರಿದ್ದಾರೆ. ಆ ಪೈಕಿ ಕೇವಲ 2,407 ಮಂದಿ ಹಿರಿಯರು, 402 ಮಂದಿ ಅಂಗವಿಕಲರು ಮಾತ್ರ ಮನೆಯಿಂದಲೇ ಮತ ಚಲಾಯಿಸಲು ಬಯಸಿದ್ದು, ಉಳಿದವರು ತಾವೇ ಮತಗಟ್ಟೆಗಳಿಗೆ ಬಂದು ಹಕ್ಕು ಚಲಾಯಿಸುವುದಾಗಿ ಹೇಳಿದ್ದಾರೆ ಎಂದು ಜಿಲ್ಲಾಧಿಕಾರಿ ಡಾ.ರಾಜೇಂದ್ರ ತಿಳಿಸಿದ್ದಾರೆ.





ವರುಣ ಕ್ಷೇತ್ರದ ಕೋಣನಪುರ ಪಾಳ್ಯ ಗ್ರಾಮದಲ್ಲಿ ವೃದ್ಧೆಯೊಬ್ಬರು ಮತದಾನ ಮಾಡಿದರು. ಅಲಗೂಡು ಗ್ರಾಮದಲ್ಲಿ ಮತದಾನದ ವೀಡಿಯೋ ಮಾಡುತ್ತಿರುವ ಬೂತ್ ಮಟ್ಟದ ಅಧಿಕಾರಿಗಳನ್ನು ಚಿತ್ರದಲ್ಲಿ ಕಾಣಬಹುದು.

135 ತಂಡಗಳು 158 ಮಾರ್ಗಗಳಲ್ಲಿ ಜಿಲ್ಲೆಯಾದ್ಯಂತ ಎಲ್ಲಾ 11 ಕ್ಷೇತ್ರಗಳ ಹಿರಿಯ ನಾಗರಿಕರು, ಅಂಗವಿಕಲರ ಮನೆಗಳಿಗೆ ತೆರಳಿ ಮತ ಹಾಕಿಸಿಕೊಂಡು ಬರುವ ವ್ಯವಸ್ಥೆ ಕಲ್ಪಿಸಲಾಗಿದೆ. ಮನೆಗಳಿಗೆ ತೆರಳಿ ಮತದಾರರ ಗುರುತಿನ ಚೀಟಿ, ಮತದಾರರ ಪಟ್ಟಿಯಲ್ಲಿ ಹೆಸರಿರುವುದನ್ನು ದೃಢಪಡಿಸಿಕೊಂಡು ನಂತರ ಬ್ಯಾಲೆಟ್ ಪೇಪರ್ ಕೊಟ್ಟು ಮತ ಹಾಕಲು ಅವಕಾಶ ನೀಡುವರು. ಮನೆಯವರ ಸಹಾಯದಿಂದ ವೃದ್ಧರು ಮತ ಹಾಕಿದ ಬಳಿಕ ಡಬ್ಬದಲ್ಲಿ ಹಾಕಿಸಿ ಸುರಕ್ಷಿತವಾಗಿ ತಂದು ಕ್ಷೇತ್ರದ ಚುನಾವಣಾಧಿಕಾರಿಗಳಿಗೆ ಪ್ರತೀದಿನ ಒಪ್ಪಿಸಲಾಗುತ್ತಿದೆ. ಬಿಎಲ್‌ಓಗಳು ಈ ಪ್ರಕ್ರಿಯೆ ಸಂಪೂರ್ಣವಾಗಿ ವೀಡಿಯೋ ರೆಕಾರ್ಡಿಂಗ್ ಮಾಡಿ ದಾಖಲೆಗಾಗಿ ಸುರಕ್ಷಿಸಿಡಲು ವ್ಯವಸ್ಥೆ ಮಾಡಲಾಗಿದೆ. ಉಳಿದಂತೆ ಮೇ 10ರಂದು ಬೆಳಗ್ಗೆ 7ರಿಂದ ಸಂಜೆ 6ರವರೆಗೆ ಎಲ್ಲಾ ಮತಗಟ್ಟೆಗಳಲ್ಲಿ ವಿದ್ಯುನ್ಮಾನ ಮತಯಂತ್ರಗಳ ಮೂಲಕ ಮತದಾರರು ತಮ್ಮ ಹಕ್ಕು ಚಲಾಯಿಸಲಿದ್ದು, ಮೇ 13ರಂದು ಮತ ಎಣಿಕೆ ನಡೆಯಲಿದೆ.

954 ಮಂದಿ ಮತದಾನ

ಮೈಸೂರು, ಏ.29(ಎಸ್‌ಪಿಎನ್)– 2023ರ ವಿಧಾನಸಭಾ ಚುನಾವಣೆಯಲ್ಲಿ 80 ವರ್ಷ ಮೇಲ್ಪಟ್ಟ ಹಾಗೂ ವಿಕಲಚೇತನರ ಮತದಾನಕ್ಕೆ ಸಂಬಂಧಿಸಿದಂತೆ 12ಡಿ ಅಡಿ ಅರ್ಜಿ ಪಡೆದ ಒಟ್ಟು 954 ಮಂದಿ ಶನಿವಾರ ಮತದಾನ ಮಾಡಿದ್ದಾರೆ.

ಇದರಲ್ಲಿ 80 ವರ್ಷ ಮೇಲ್ಪಟ್ಟವರು 787 ಮಂದಿ ಹಾಗೂ ವಿಶೇಷಚೇತನರು 167 ಮಂದಿ ಒಟ್ಟು 954 ಮಂದಿ ಮತದಾನ ಮಾಡಿದ್ದಾರೆ. ನಂಜನಗೂಡಿನಲ್ಲಿ 80 ವರ್ಷ ಮೇಲ್ಪಟ್ಟವರು 286, ವಿಶೇಷ ಚೇತನರು 55 ಒಟ್ಟು 341 ಮಂದಿ ಮತದಾನ ಮಾಡಿದ್ದಾರೆ. ಚಾಮುಂಡೇಶ್ವರಿಯಲ್ಲಿ 80 ವರ್ಷ ಮೇಲ್ಪಟ್ಟವರು 116 ಮಂದಿ, ವಿಶೇಷ ಚೇತನರು 22 ಒಟ್ಟು 138 ಮಂದಿ ಮತದಾನ ಮಾಡಿದ್ದಾರೆ. ಪಿರಿಯಾಪಟ್ಟಣದಲ್ಲಿ 80 ವರ್ಷ ಮೇಲ್ಪಟ್ಟವರು 143ಮಂದಿ, ವಿಶೇಷ ಚೇತನರು 40 ಮಂದಿ ಸೇರಿದಂತೆ ಒಟ್ಟು 183 ಮಂದಿ ಮತದಾನ ಮಾಡಿದ್ದಾರೆ.

ಅಲ್ಲದೆ, ವರುಣಾದಲ್ಲಿ 80 ವರ್ಷ ಮೇಲ್ಪಟ್ಟವರು 99 ಮಂದಿ, 30 ಮಂದಿ ವಿಶೇಷ ಚೇತನರು ಸೇರಿದಂತೆ ಒಟ್ಟು 119 ಮಂದಿ, ತಿ.ನರಸೀಪುರದಲ್ಲಿ 80 ವರ್ಷ ಮೇಲ್ಪಟ್ಟವರು 143 ಮಂದಿ, ವಿಶೇಷ ಚೇತನರು 30 ಮಂದಿ ಸೇರಿದಂತೆ ಒಟ್ಟು 173 ಮಂದಿ ಮತದಾನ ಮಾಡುವ 12 ಡಿ ಅರ್ಜಿಯಲ್ಲಿ ಮತದಾನ ಮಾಡಿದ್ದಾರೆರಂದು ಜಿಲ್ಲಾ ಚುನಾವಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮತ ಚಲಾಯಿಸಲು ನೋಂದಣಿ ಮಾಡಿಸಿದ್ದ 80 ವರ್ಷ ಮೇಲ್ಪಟ್ಟ ಮತದಾರರು ಮತದಾನಕ್ಕೂ ಮುಂಚೆಯೇ ತಮ್ಮ ಹಕ್ಕ ಚಲಾಯಿಸದೇ 26 ಮಂದಿ ಮೃತಪಟ್ಟಿದ್ದಾರೆ. ಪಿರಿಯಾಪಟ್ಟಣ 2, ನಂಜನಗೂಡು 11, ಚಾಮುಂಡೇಶ್ವರಿ 7, ವರುಣಾ 2 ತಿ.ನರಸೀಪುರ 4 ಮಂದಿ ಸೇರಿದಂತೆ ಒಟ್ಟು 26 ಮಂದಿ ಮೃತಪಟ್ಟಿದ್ದಾರೆ.

ಬ್ರೆಜಿಲ್‌ನ ಅಂತರರಾಷ್ಟ್ರೀಯ ಸಮ್ಮೇಳನಕ್ಕೆ ಕೃಷಿ ವಿಜ್ಞಾನಿ ಡಾ.ವಸಂತಕುಮಾರ್ ತಿಮಕಾಪುರ



ಮೈಸೂರು,ಏ.29–ನಾಡಿನ ಹೆಸರಾಂತ ಕೃಷಿ ವಿಜ್ಞಾನಿ ಡಾ.ವಸಂತಕುಮಾರ್ ತಿಮಕಾಪುರ, ಇದೇ ಮೇ 2ರಿಂದ 5ರವರೆಗೆ ಬ್ರೆಜಿಲ್‌ನ ರಿಯೊ ಡಿ ಜನ್ಯೆರೋದಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಜೈವಿಕ ಕೃಷಿ ವಿಶ್ವ ಕಾಂಗ್ರೆಸ್‌ನಲ್ಲಿ ಭಾಗವಹಿಸಲಿದ್ದಾರೆ. ಇದುವರೆವಿಗೆ ಬೆಳೆಗಳಿಗೆ ವೈರಸ್ ರೋಗ ಬಾರದಂತೆ ತಡೆಗಟ್ಟುವುದೊಂದೇ ವಿಧಾನವಿದ್ದು ರೋಗ ಬಂದ ನಂತರ ಗುಣಪಡಿಸುವ ಔಷಧ ಯಾವುದೂ ಇರಲಿಲ್ಲ. ವಿಶ್ವದಲ್ಲಿ ಮೊದಲ ಬಾರಿಗೆ ವೈರಸ್ ತಗುಲಿದ ಬೆಳೆಯನ್ನು ಗುಣಪಡಿಸುವ ಔಷಧವನ್ನು ಡಾ.ತಿಮಕಾಪುರ ಆವಿಷ್ಕರಿಸಿದ್ದು, ಈ ವಿಷಯವನ್ನು ಇವರು ಮಂಡಿಸಲಿದ್ದಾರೆ.

ವೈರಸ್ ರೋಗಗಳು ವಿಶ್ವದಾದ್ಯಂತ ಪ್ರತಿ ವರ್ಷ 30 ಬಿಲಿಯನ್ ಡಾಲರ್‌ಗಿಂತಲೂ ಹೆಚ್ಚು ಮೌಲ್ಯದ ಬೆಳೆಗಳನ್ನು ನಾಶಪಡಿಸುತ್ತಿದ್ದು, ವಿಶ್ವದ ಆಹಾರ ಮತ್ತು ಪೌಷ್ಟಿಕತೆಯ ಭದ್ರತೆಗೆ ಕಂಟಕಕಾರಿಗಳಾಗಿವೆ. ಆದರೂ ಇವುಗಳ ನಿಯಂತ್ರಣಕ್ಕೆ ಇದುವರೆವಿಗೂ ಯಾವುದೇ ಔಷಧ ಇಲ್ಲದಿದ್ದುದರಿಂದ ಬೆಳೆಗಾರರು ಪ್ರತಿ ವರ್ಷ ನಷ್ಟ ಅನುಭವಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಡಾ.ತಿಮಕಾಪುರ ಅವರ ಆವಿಷ್ಕಾರ ಹೊಸ ಭರವಸೆ ಬೆಳಕನ್ನು ಚೆಲ್ಲಲಿದೆ. ಇತರ ಬೆಳೆಗಳ ವೈರಸ್ ರೋಗಗಳ ನಿಯಂತ್ರಣಕ್ಕೆ ಪರಿಹಾರವನ್ನು ಕಂಡುಹಿಡಿಯಲು ಹೊಸ ದಿಕ್ಕನ್ನೇ ತೋರಿದೆ. ವಿಶ್ವದ ವಿವಿಧ ದೇಶಗಳ ಕೃಷಿ ಸಂಬಂಧಿತ ಕಂಪನಿಗಳ 500ಕ್ಕೂ ಹೆಚ್ಚು ವಿಜ್ಞಾನಿಗಳು, ಆಡಳಿತ ಮಂಡಳಿ ಸದಸ್ಯರು, ಮಾಲೀಕರು ಭಾಗವಹಿಸು ತ್ತಿರುವ ಈ ಸಮ್ಮೇಳನದಲ್ಲಿ ವಿಷಯ ಮಂಡನೆಗೆ ಆಯ್ಕೆಯಾಗಿರುವ ಮೂವರು ವಿಜ್ಞಾನಿಗಳಲ್ಲಿ ಡಾ.ತಿಮಕಾಪುರ ಒಬ್ಬರಾಗಿದ್ದಾರೆ.

ಮೈಸೂರಿನಲ್ಲಿ ಮೋದಿ ಆಟ ನಡೆಯಲ್ಲ: ಕೆ.ಹರೀಶ್‌ಗೌಡ



ಮೈಸೂರು, ಏ. 29– ಮೈಸೂರಿನ ಮೂರು ಕ್ಷೇತ್ರಗಳಲ್ಲೂ ಕಾಂಗ್ರೆಸ್ ಅಭ್ಯರ್ಥಿಗಳು ಗೆಲ್ಲಲಿದ್ದು, ಮೈಸೂರಿನಲ್ಲಿ ಪ್ರಧಾನಿ ಮೋದಿ ಆಟ ನಡೆಯುವುದಿಲ್ಲ ಎಂದು ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ. ಹರೀಶ್‌ಗೌಡ ತಿಳಿಸಿದರು.

ಚಾಮರಾಜ ಕ್ಷೇತ್ರದ ಮೇದರ ಬ್ಲಾಕ್‌ನಲ್ಲಿ ಪಾದಯಾತ್ರೆ ಮೂಲಕ ಮತಯಾಚಿಸಿ ಮಾತನಾಡಿದ ಅವರು, ರಾಜ್ಯದ ಬಿಜೆಪಿ ನಾಯಕರಿಗೆ ಜನರ ಬಳಿ ಮತ ಕೇಳಲು ಅರ್ಹತೆಯಿಲ್ಲ. ಏಕೆಂದರೆ ಸಾಕಷ್ಟು ಭ್ರಷ್ಟಾಚಾರ, ಹಗರಣಗಳ ಮಾಡಿದ್ದಾರೆ. ಗ್ಯಾಸ್ ಸಿಲಿಂಡರ್, ಪೆಟ್ರೋಲ್, ಡೀಸೆಲ್, ಅಡುಗೆ ಎಣ್ಣೆಯು ಸೇರಿದಂತೆ ದಿನ ಬಳಕೆ ವಸ್ತುಗಳಲ್ಲದೆ ಮಜ್ಜಿಗೆ, ಮೊಸರು, ಹಾಲಿಗೂ ಜಿಎಸ್‌ಟಿ ಹಾಕಿ ಜನರ ಆಕ್ರೋಶಕ್ಕೆ ತುತ್ತಾಗಿದ್ದಾರೆ. ಈಗ ನೋಡಿದರೆ ಮೋದಿಯನ್ನು ಕರೆ ತಂದು ಬಂದು ರೋಡ್ ಶೋ ಮಾಡುತ್ತಿದ್ದಾರೆ. ಆದರೆ ಮೋದಿಯು ಕೊಟ್ಟ ಭರವಸೆಗಳಲ್ಲಿ ಒಂದನ್ನು ಈಡೇರಿಸಿಲ್ಲ. ಪ್ರತಿಯೊಬ್ಬರ ಖಾತೆಗೆ 15 ಲಕ್ಷ ಹಾಕುತ್ತೇನೆಂದರೂ ಹಾಕಿಲ್ಲ. ಪ್ರತಿ ವರ್ಷ 2 ಕೋಟಿ ಉದ್ಯೋಗ ಸೃಷ್ಟಿ ಮಾಡುತ್ತೇವೆಂದರು ಅದೂ ಆಗಿಲ್ಲ. ಎಲ್ಲಾ ಬೆಲೆಗಳನ್ನು ಇಳಿಸುತ್ತೇವೆಂದು ಬೊಬ್ಬೆ ಹೊಡೆದು, ಈಗ ಯಾವ ಮುಖ ಹೊತ್ತುಕೊಂಡು ಮತ ಕೇಳಲು ಬರುತ್ತಿದ್ದಾರೆ. ಆದ್ದರಿಂದ ಬಿಜೆಪಿ ಈ ಬಾರಿ ಸೋತು, ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ. ಸಿದ್ದರಾಮಯ್ಯನವರು ಮುಖ್ಯಮಂತ್ರಿ ಆಗುತ್ತಾರೆ. ಆದ್ದರಿಂದ ನೀವೆಲ್ಲರೂ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುವ ಮೂಲಕ ನನಗೆ ಅಧಿಕ ಮತಗಳನ್ನು ಕೊಟ್ಟು ಆಶೀರ್ವದಿಸಬೇಕೆಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ನಗರಪಾಲಿಕೆ ಮಾಜಿ ಸದಸ್ಯ ಡಿ.ನಾಗಭೂಷಣ್, ಸುನಂದಕುಮಾರ್, ಎಸ್.ಆರ್. ರವಿಕುಮಾರ್, ಮೋಹನ್, ತಂಬಿ, ದರ್ಶನ್, ರಮೇಶ್ ಹಾಜರಿದ್ದರು.



ಮೈಸೂರಿನ ಹೆಬ್ಬಾಳ 1ನೇ ವಾರ್ಡಿನ ಸಂಕ್ರಾಂತಿ ಸರ್ಕಲ್ ಬಳಿ ಕಾಂಗ್ರೆಸ್ ಹಿರಿಯ ಮುಖಂಡ ರಾಜೇಂದ್ರ ಅವರು ಅನೇಕ ಲಿಂಗಾಯತ ಮುಖಂಡರೊಂದಿಗೆ ಬಿಜೆಪಿಗೆ ಸೇರ್ಪಡೆಗೊಂಡರು. ಈ ಸಂದರ್ಭದಲ್ಲಿ ಶಾಸಕ ಎಲ್.ನಾಗೇಂದ್ರ, ಬಿಜೆಪಿ ಯುವ ಮೋರ್ಚಾ ನಗರ ಅಧ್ಯಕ್ಷ ಎಂ.ಜೆ.ಕಿರಣ್‌ಗೌಡ, ಮುಖಂಡರಾದ ಕಿರಣ್ ಸುಖಧರೆ, ಅಯ್ಯಪ್ಪ, ಆದರ್ಶ, ಕಾಮತ್, ಕಾರ್ತಿಕ್, ಗುರುಸ್ವಾಮಿ, ಚಂದ್ರು, ಕುಮಾರ್, ವೇದಮೂರ್ತಿ, ಹರೀಶ್‌ಕುಮಾರ್, ಗುರು ಚಕ್ರೆ ಇದ್ದರು.



ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಾವಿನಹಳ್ಳಿ ಸಿದ್ದೇಗೌಡರ ಪರವಾಗಿ ಅವರ ಪತ್ನಿ ಶ್ರೀಮತಿ ಕಮಲ ಸಿದ್ದೇಗೌಡ, ಸೋದರಿ ಶ್ರೀಮತಿ ಸವಿತಾ ಮರಿನಿಂಗಪ್ಪ, ಪುತ್ರಿ ಶಿಲ್ಪ ಶರತ್, ಸೊಸೆ ಪವಿತ್ರ ಸಂದೀಪ, ಕುಟುಂಬ ಸದಸ್ಯರಾದ ಗೌರಮ್ಮ ಶಿವ ಜೋಗೇಗೌಡ, ಪೂರ್ಣಿಮಾ ಶಿವು, ಸಿಂಧು ರಮೇಶ್, ಸುಷ್ಮಾ ಸಂದೀಪ್, ಕಿರಣ್ ಗೌಡ, ಮಹಿಳಾ ಅಧ್ಯಕ್ಷೆ ನಾಗಮ್ಮ, ರೇಖಾ, ಕಸ್ತೂರಿ, ಲಕ್ಷ್ಮಿ, ಪ್ರಚಾರ ಸಮಿತಿ ಅಧ್ಯಕ್ಷ ಕುಮಾರ್, ಬಸಪ್ಪ, ಸಾಮಾಜಿಕ ತಾಣದ ಅಧ್ಯಕ್ಷ ಶಂಕರ್, 58ನೇ ವಾರ್ಡಿನ ಅಧ್ಯಕ್ಷ ರಾಜೇಂದ್ರ ಪ್ರಸಾದ್ ಇನ್ನಿತರರು ಪ್ರಚಾರ ಮಾಡಿದರು.



ವರುಣಾ ಕ್ಷೇತ್ರದ ಪಾಳ್ಯ, ಚಟ್ನಳ್ಳಿ, ಚಟ್ನಳ್ಳಿ ಪಾಳ್ಯ ಗ್ರಾಮಗಳಲ್ಲಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಅವರು ಮಾಜಿ ಸಿಎಂ ಸಿದ್ದರಾಮಯ್ಯ ಅವರ ಪರ ಮತಯಾಚನೆ ಮಾಡಿದರು. ಕೆಪಿಸಿಸಿ ಕಾರ್ಯದರ್ಶಿ ವರುಣ ಮಹೇಶ್, ಮಾನವ ಹಕ್ಕುಗಳ ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಪಾಳ್ಯ ಸುರೇಶ್, ಕೆಪಿಸಿಸಿ ಕಾನೂನು ಘಟಕದ ಕಾರ್ಯದರ್ಶಿ ಕವಿತ ಕಾಳೆ, ಪ್ರಚಾರ ಸಮಿತಿ ಪ್ರಧಾನ ಕಾರ್ಯದರ್ಶಿ ಚಿಕ್ಕಳ್ಳಿ ಗುರುಮೂರ್ತಿ, ಕೀಳನಪುರ ಮಹದೇವಪ್ಪ, ದುದ್ದಗೆರೆ ಬೀರೇಗೌಡ, ಪಾಳ್ಯ ಗುರುಪಾದಸ್ವಾಮಿ ಇನ್ನಿತರರಿದ್ದರು.

ನಾಳೆಯಿಂದ ಯೋಗ ತರಬೇತಿ

ಮೈಸೂರು, ಏ. 29– ಮೈಸೂರಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಮೇ 1ರಿಂದ ಪ್ರತಿದಿನ 7ರಿಂದ 8ರವರೆಗೆ ಯೋಗ ತರಬೇತಿ ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿ ಹಾಗೂ ನೋಂದಣಿಗೆ ಮೊ. 9916483919, 9632000697 ಸಂಪರ್ಕಿಸಬಹುದು.

ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ: ಮೈಸೂರಿನ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಮೇ 1ರಿಂದ 15ರವರೆಗೆ ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ತಜ್ಞ ವೈದ್ಯರಿಂದ ಬೊಜ್ಜು ನಿವಾರಣಾ ಸೂತ್ರಗಳು, ಪಂಚಕರ್ಮ, ಆಯುರ್ವೇದ ಮತ್ತು ಪ್ರಕೃತಿ ಚಿಕಿತ್ಸೆಯ ಜೀವನ ಶೈಲಿ, ಆಯುರ್ವೇದ ಚಿಕಿತ್ಸೆ, ಪ್ರಕೃತಿ ಚಿಕಿತ್ಸೆ, ಯೋಗ, ಪ್ರಾಣಾಯಾಮ ಮತ್ತು ಧ್ಯಾನ, ಪಥ್ಯಾಹಾರದ ಬಗ್ಗೆ ಮಾಹಿತಿ ನೀಡಲಾಗುವುದು. ಪ್ರತಿದಿನ 7ರಿಂದ 8ರವರೆಗೆ ಯೋಗ ತರಬೇತಿ ಆಯೋಜಿಸಲಾಗಿದೆ. ಮಾಹಿತಿ ಹಾಗೂ ನೋಂದಣಿಗೆ ಮೊ. 9844136277, 9886485005 ಸಂಪರ್ಕಿಸಿ.

ರ್‍ಯಾಲಿಗೆ ಸರಕು ವಾಹನದಲ್ಲಿ ಜನರ ಕರೆದೊಯ್ದರೆ ಕೇಸ್



ಮೈಸೂರು, ಏ.29–ಲಘು ಸರಕು ವಾಹನಗಳಲ್ಲಿ ಜನರನ್ನು ಚುನಾವಣಾ ಪ್ರಚಾರಕ್ಕೆ ಹಾಗೂ ರ್‍ಯಾಲಿಗಳಿಗೆ ಬಳಸುವಂತಿಲ್ಲ. ಒಂದು ವೇಳೆ ಬಳಸಿದ್ದಲ್ಲಿ ಇಂಡಿಯನ್ ಮೋಟರ್ ವೆಹಿಕಲ್ ಆಕ್ಟ್ ಅಡಿ ಕಾನೂನಿನ ರೀತಿಯ ಕ್ರಮ ಕೈಗೊಳ್ಳಲಾಗುವುದು ಎಂದು ಚಾಮುಂಡೇಶ್ವರಿ ಕ್ಷೇತ್ರದ ಚುನಾವಣಾ ಸಾಮಾನ್ಯ ವೀಕ್ಷಕರಾದ ಅರ್ಶ ದೀಪ್ ಸಿಂಗ್ ತಿಳಿಸಿದರು.

ಚಾಮುಂಡೇಶ್ವರಿ ಕ್ಷೇತ್ರದ 2ನೇ ಹಂತದ ಇವಿಎಂ ಮತ್ತು ವಿವಿ ಪ್ಯಾಟ್ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 337 ಮತಗಟ್ಟೆಗಳಿದ್ದು ಬಿಯು–405, ಸಿ ಯು–405 ಹಾಗೂ ವಿವಿ ಪ್ಯಾಟ್–439 ಲಭ್ಯವಿರುತ್ತದೆ ಎಂದರು.

ಉಪವಿಭಾಗಾಧಿಕಾರಿ ಕಮಲಾಭಾಯಿ ಮಾತನಾಡಿ, ಅಂಚೆ ಮತದಾನದಲ್ಲಿ ಅಂಗವಿಕಲರು ಮತ್ತು 80 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕ ಮತದಾರರಲ್ಲಿ ಒಟ್ಟು 242 ಮತದಾರರನ್ನು ಗುರುತಿಸಲಾಗಿದ್ದು, ಅವರಿಗೆ ಏ.29,30ರಂದು ಮನೆಯಿಂದಲೇ ಮತದಾನ ಮಾಡಲು ವ್ಯವಸ್ಥೆ ಕಲ್ಪಿಸಲಾಗಿದೆ. ಈ ಕಾರ್ಯಕ್ಕೆ ಅಗತ್ಯ ತಂಡಗಳನ್ನು ರಚಿಸಿ ಗುಪ್ತ ಮತದಾನ ನಡೆಸಲು ಕ್ರಮ ವಹಿಸಲಾಗಿದೆ. ಇಟಿಪಿಬಿಎಸ್‌ನಲ್ಲಿ ಒಟ್ಟು 82 ಸೇವಾ ಮತದಾರರಿದ್ದು, ಇವರಿಗೆ ಈಗಾಗಲೇ ಆನ್‌ಲೈನ್ ಮೂಲಕ ಸಂಬಂಧಪಟ್ಟ ಕಚೇರಿಗೆ ಮತಪತ್ರಗಳನ್ನು ಕಳುಹಿಸಲಾಗಿದೆ ಎಂದು ತಿಳಿಸಿದರು. ಚುನಾವಣೆಗೆ ಸಂಬಂಧಿಸಿದಂತೆ ಸಾರ್ವಜನಿಕರು ತಮ್ಮ ಕುಂದು ಕೊರತೆಗಳು ಇದ್ದಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಚುನಾವಣಾ ಸಾಮಾನ್ಯ ವೀಕ್ಷಕ ಅರ್ಶದೀಪ್ ಸಿಂಗ್ (ಮೊ.ನಂ. 636126 8244) ಅವರನ್ನು ಸಂಪರ್ಕಿಸಬಹುದು ಎಂದರು. ಸಭೆಯಲ್ಲಿ ಮೈಸೂರು ತಾಲೂಕಿನ ತಹಶೀಲ್ದಾರ್ ಗಿರೀಶ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಪಕ್ಷದ ಅಭ್ಯರ್ಥಿ ಮತ್ತು ಪಕ್ಷೇತರ ಅಭ್ಯರ್ಥಿಗಳು ಹಾಗೂ ಏಜೆಂಟ್‌ಗಳು ಉಪಸ್ಥಿತರಿದ್ದರು.



ಚಾಮರಾಜ ಕ್ಷೇತ್ರ ವ್ಯಾಪ್ತಿಯ ಪಡುವಾರಹಳ್ಳಿಯಲ್ಲಿ ಶಾಸಕ ಎಲ್.ನಾಗೇಂದ್ರ ಅವರು ಹಿರಿಯ ಸಾಹಿತಿ ಸಿ.ಪಿ.ಕೃಷ್ಣಕುಮಾರ್ ದಂಪತಿಯನ್ನು ಭೇಟಿ ಮಾಡಿ ಆಶೀರ್ವಾದ ಪಡೆದು, ಮತಯಾಚನೆ ಮಾಡಿದರು. ಈ ಸಂದರ್ಭದಲ್ಲಿ ಕ್ಷೇತ್ರದ ಅಧ್ಯಕ್ಷ ಸೋಮಶೇಖರ ರಾಜು, ನಗರಪಾಲಿಕೆ ಸದಸ್ಯ ಚಿಕ್ಕವೆಂಕಟು, ಬಿಜೆಪಿ ಯುವ ಮುಖಂಡ ಯೋಗನರಸಿಂಹೇಗೌಡ, ಬ್ಯಾಂಕ್ ನಿರ್ದೇಶಕ ಕೇಬಲ್ ಶಿವು, ಸಿಡಿ ಕುಮಾರ್, ರಾಘವ್‌ಗೌಡ, ಗುರುದತ್, ಬಾಬು ಆಚಾರ್ ಇನ್ನಿತರರು ಉಪಸ್ಥಿತರಿದ್ದರು.

ಮತದಾರರಿಗೆ ಅರಿಶಿನ-ಕುಂಕುಮದ ಆಹ್ವಾನ



ಮೈಸೂರು, ಏ. 29–ವಿಧಾನಸಭೆಗೆ 2018ರಲ್ಲಿ ನಡೆದ ಚುನಾವಣೆಯಲ್ಲಿ ಕಡಿಮೆ ಮತದಾನ ದಾಖಲಾದ ಪ್ರದೇಶಗಳ ಮಹಿಳಾ ಮತದಾರರಿಗೆ ಅಂಬಾಭವಾನಿ ಮಹಿಳಾ ಸಮಾಜ ಅರಿಶಿನ–ಕುಂಕುಮ ಹಾಗೂ ಕಡ್ಡಾಯ ಮತದಾನದ ಜಾಗೃತಿ ಕರಪತ್ರ ನೀಡಿ ಮತದಾನಕ್ಕೆ ಆಹ್ವಾನ ನೀಡಲಾಯಿತು.


ನಗರದ ವಿದ್ಯಾರಣ್ಯಪುರಂನಲ್ಲಿರುವ ಪಿಕೆ ಕಾಲೋನಿಯಲ್ಲಿ ಶನಿವಾರ ಅಂಬಾಭವಾನಿ ಮಹಿಳಾ ಸಮಾಜದ ಅಧ್ಯಕ್ಷೆ ಸವಿತಾ ಘಾಟ್ಕೆ ಇಂತಹ ವಿನೂತನ ಕಾರ್ಯಕ್ಕೆ ಚಾಲನೆ ನೀಡಿದರು.

ನಗರ ವ್ಯಾಪ್ತಿಯ ಮನೆ ಮನೆಗೆ ತೆರಳಿ, ಮಹಿಳೆಯರಿಗೆ ಅರಿಶಿನ ಕುಂಕುಮ ನೀಡಿ ಮೇ 10ರಂದು ನಡೆಯುವ ಮತದಾನ ಪ್ರಕ್ರಿಯೆಯಲ್ಲಿ ಕಡ್ಡಾಯವಾಗಿ ಭಾಗವಹಿಸಿ ನಿಮ್ಮ ಹಕ್ಕು ಚಲಾಯಿಸಿ ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ವಕೀಲರಾದ ಜಯಶ್ರೀ ಹಾಗೂ ಮಹಿಳಾ ಸಮಾಜದ ರೂಪ, ರಾಘವೇಂದ್ರ, ವನಿತಾ ಚೌವಾನ್ ಇನ್ನಿತರರು ಹಾಜರಿದ್ದರು.



ಬೋಗಾದಿ ಗ್ರಾಮದಲ್ಲಿ ಜಿಪಂ ಮಾಜಿ ಸದಸ್ಯ ರಾಕೇಶ್ ಪಾಪಣ್ಣ, ಮಾದೇಗೌಡ ಹಾಗೂ ಕೆಂಪನಾಯಕ ನೇತೃತ್ವದಲ್ಲಿ ಜೆಡಿಎಸ್, ಬಿಜೆಪಿ ಮುಖಂಡರು, ಗ್ರಾಪಂ ಮಾಜಿ ಸದಸ್ಯರು, ಯಜಮಾನರು, ಯುವಕರು ಕಾಂಗ್ರೆಸ್ ಸೇರ್ಪಡೆಯಾದರು. ಚಿತ್ರದಲ್ಲಿ ಬೋಗಾದಿಯ ತ್ಯಾಗರಾಜು, ಚಂದ್ರಶೇಖರ್, ಹರ್ಷ, ಮಹದೇವಸ್ವಾಮಿ, ಸೋಮಶೇಖರ್, ಶಿವಪ್ಪ, ಮಾದೇಗೌಡ, ಮಂಜು, ಮಹದೇವ, ಪ್ರೇಮ್‌ಸಾಗರ್, ಕಿರಣ್, ಶಿವು, ಶಶಿ, ಸೋಮಶೇಖರ್, ನವೀನ್, ಪಾಪಿ, ಚೇತನ್, ಜಯ, ಜಗ್ಗ, ಈಶ್ವರ್, ಜಗದೀಶ, ಜವರೇಗೌಡ, ಸತೀಶ್, ಶ್ರೀನಿವಾಸ್, ರಮೇಶ್ , ಯೋಗೇಶ್, ರವಿ, ತೇಜಸ್, ಪುನೀತ್, ಅರುಣ್, ಸಂತೋಷ್ ಇದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

30.4.2023 ಭಾನುವಾರ, ಮಳೆ ನಕ್ಷತ್ರ: ಭರಣಿ, 28.04.2023 ರಿಂದ 10.05.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ದಶಮಿ, ನಕ್ಷತ್ರ: ಮಖ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಶ್ರೀ ರೇಣುಕಾದೇವಿ ಕರಗ ದೇವಸ್ಥಾನ ಟ್ರಸ್ಟ್ :** ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಮಾರಿಯಮ್ಮನವರ 99ನೇ ವರ್ಷದ ಮೈಸೂರು ಕರಗ ಮಹೋತ್ಸವ, ಮಧ್ಯಾಹ್ನ 12 ಗಂಟೆಗೆ ಅಂಬಲಿ ಪೂಜೆ, ಅರಿಶಿನ ನೀರಿನ ಓಕುಳಿ, ಸಂಜೆ 4 ಗಂಟೆಗೆ ಭಕ್ತಾದಿಗಳಿಂದ ತಂಬಿಟ್ಟು ಆರತಿ, ರಾತ್ರಿ 7 ಗಂಟೆಗೆ ಇಟ್ಟಿಗೆಗೂಡಿನ ಬೀದಿಗಳಲ್ಲಿ ಕರಗ ಉತ್ಸವ, ರಾತ್ರಿ 12 ಗಂಟೆಗೆ ಮಹಾಮಂಗಳಾರತಿ, ಸ್ಥಳ: ಶ್ರೀ ರೇಣುಕಾದೇವಿ ದೇವಸ್ಥಾನ, ಇಟ್ಟಿಗೆಗೂಡು.

■ **ಶ್ರೀ ಬಸವೇಶ್ವರ ಸೇವಾ ಸಮಿತಿ :** ಬಸವ ಜಯಂತಿ ಹಾಗೂ ಸಮಿತಿಯ ಆರನೆಯ ವಾರ್ಷಿಕೋತ್ಸವ, ಸಾನ್ನಿಧ್ಯ : ಶ್ರೀ ಗುರುಲಿಂಗ ಜಂಗಮ ದೇವರ ಮಠ ಪೀಠಾಧ್ಯಕ್ಷ ಶ್ರೀ ನಟರಾಜ ಸ್ವಾಮೀಜಿ, ಅಧ್ಯಕ್ಷತೆ : ಶ್ರೀ ಬಸವೇಶ್ವರ ಸೇವಾ ಸಮಿತಿ ಅಧ್ಯಕ್ಷ ಡಾ. ಹೆಚ್.ಎನ್. ಲೋಕೇಶಪ್ಪ, ಉಪಸ್ಥಿತರು : ಬಸವ ಚರಿತಾಮೃತ ಕಾವ್ಯ ರಚನಾಕಾರ ಎಂ. ಗುರುಮಲ್ಲಪ್ಪ, ರಾಜ್ಯ ಪ್ರಶಸ್ತಿ ಪುರಸ್ಕೃತ ಎಂ.ವೈ. ಪುಟ್ಟಣ್ಣಯ್ಯ, ಉದ್ಘಾಟನೆ : ಶರಣ ಸಾಹಿತ್ಯ ಪರಿಷತ್, ಮೈಸೂರು ನಗರ ಘಟಕ ಅಧ್ಯಕ್ಷ ಮ.ಗು. ಸದಾನಂದಯ್ಯ, ಉಪನ್ಯಾಸ : ಮಹಾರಾಣಿ ಕಲಾ ಕಾಲೇಜು ಪ್ರಾಚಾರ್ಯ ಡಾ. ಬಿ.ವಿ. ವಸಂತಕುಮಾರ್ ಅವರಿಂದ ಬಸವಣ್ಣನವರ ವ್ಯಕ್ತಿತ್ವದ ಆಯಾಮಗಳು ಕುರಿತು ಉಪನ್ಯಾಸ, ಸ್ಥಳ: ರಮಾಗೋವಿಂದ ರಂಗಮಂದಿರ ಸಭಾಂಗಣ, ನೃಪತುಂಗ ಕನ್ನಡ ಶಾಲೆ, ರಾಮಕೃಷ್ಣನಗರ, ಬೆಳಗ್ಗೆ 10ಕ್ಕೆ.

■ **ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ, ಮೈಸೂರು:** ಬಸವ ಜಯಂತಿ ಹಾಗೂ ಬಸವ ಭೂಷಣ–ಬಸವ ವಿಭೂಷಣ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ: ಬಂಡಳ್ಳಿ ದೊಡ್ಡಮಠದ ಮಠಾಧ್ಯಕ್ಷ ಶ್ರೀ ಫಲಹಾರ ಪ್ರಭುದೇವ ಸ್ವಾಮೀಜಿ, ಉದ್ಘಾಟನೆ: ಜಿಲ್ಲಾ ಸರ್ಕಾರಿ ನೌಕರರ ಸಂಘದ ಹಿರಿಯ ಉಪಾಧ್ಯಕ್ಷ ಮಾಲಂಗಿ ಸುರೇಶ್, ಅಧ್ಯಕ್ಷತೆ: ಸಾಹಿತಿ ಬನ್ನೂರು ಕೆ.ರಾಜು, ವಿಶೇಷ ಆಹ್ವಾನಿತರು: ಚಲನಚಿತ್ರ ನಟ ಸುಪ್ರೀತ್, ಮುಖ್ಯ ಅತಿಥಿಗಳು: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ನಗರ ಕಸಾಪ ಅಧ್ಯಕ್ಷ ಕೆ.ಎಸ್. ಶಿವರಾಮು, ಜಿ.ಮಹೇಂದ್ರ, ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ.ಚಂದ್ರಶೇಖರ್, ಅಂ.ಸಿ. ಚೇತನ್, ಎನ್.ಅನಂತ್, ಬಿ.ಬಿ.ರಾಜಶೇಖರ್, ಸ್ಥಳ: ಅಕ್ಕನ ಬಳಗ ಶಾಲೆ, ತ್ಯಾಗರಾಜ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಶ್ರೀ ವೇಂಕಟಾಚಲಧಾಮ, ಮಾಧ್ವರಾದ್ಧಾಂತ ಸಂವರ್ಧಕ ಸಭಾ:** ಶ್ರೀ ವೇದವ್ಯಾಸ ಜಯಂತಿ, ಶ್ರೀ ವಿದ್ಯಾಮಾನ್ಯ ತೀರ್ಥ ಶ್ರೀಪಾದರ ಆರಾಧನೆ ಮತ್ತು ನರಸಿಂಹ ಜಯಂತಿ ಮಹೋತ್ಸವ, ಸಂಜೆ 5ಕ್ಕೆ ಶ್ರೀನಿವಾಸ ಕಲ್ಯಾಣ ಮಹೋತ್ಸವ, ಸ್ಥಳ:ವೇಂಕಟಾಚಲಧಾಮ, ಚಾಮರಾಜ ಜೋಡಿ ರಸ್ತೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ವಿದ್ವಾಂಸ ಮುರಳೀಧರದಾಸ್ ಅವರಿಂದ ಶ್ರೀನಿವಾಸ ಕಲ್ಯಾಣ ಕುರಿತು ಪ್ರವಚನ, ಸ್ಥಳ: ಶ್ರೀರಾಯರ ಮಠ, ಜಯಲಕ್ಷ್ಮಿಪುರಂ, ಸಂಜೆ 5ಕ್ಕೆ.

■ **ಗಾನ ವೈದ್ಯಲೋಕ :** ಡಾ. ರಾಜ್‌ಕುಮಾರ್ ಜಯಂತಿ ಅಂಗವಾಗಿ ಡಾ. ರಾಜ್–ಗಾನ ಸವಿಸಂಜೆ ಎಂದೂ ಮರೆಯದ ಹಾಡು–5 ಕಾರ್ಯಕ್ರಮ, ಉದ್ಘಾಟನೆ : ಮಹಾಕವಿಯತ್ರಿ ಡಾ. ಲತಾ ರಾಜಶೇಖರ್, ಅಧ್ಯಕ್ಷತೆ : ಗಾನ ವೈದ್ಯಲೋಕ ಗೌರವಾಧ್ಯಕ್ಷ ಡಾ. ವೈ.ಡಿ. ರಾಜಣ್ಣ, ಪ್ರಾಸ್ತಾವಿಕ ನುಡಿ : ಗಾನ ವೈದ್ಯಲೋಕ ಅಧ್ಯಕ್ಷ ಡಾ. ಟಿ. ರವಿಕುಮಾರ್, ಮುಖ್ಯ ಅತಿಥಿಗಳು : ವಿಶ್ರಾಂತ ಪ್ರಾಂಶುಪಾಲ ಬಿ. ಮನೋಹರ್, ಸ್ಥಳ: ಜಿಲ್ಲಾ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಸಂಜೆ 5ಕ್ಕೆ

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಸರ್ವಜಯಾನಂದ ಅವರಿಂದ ಶ್ರೀ ಶ್ರೀ ರಾಮಕೃಷ್ಣ ಚರಿತೆ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಕಾವ್ಯರಂಜನಿ ಸಭಾ :** ಗಮಕ ವಿದುಷಿ ಗೌರಮ್ಮ ನಾಗರಾಜ್ ಅವರ ಸಂಸ್ಮರಣೆ, ಸನ್ಮಾನ : ಕುಮಾರವ್ಯಾಸ ಪ್ರಶಸ್ತಿ ಪುರಸ್ಕೃತರಾದ ಕರ್ನಾಟಕ ಕಲಾಶ್ರೀ ಡಾ. ಎನ್.ಕೆ. ರಾಮಶೇಷನ್, ಕಾವ್ಯವಾಚನ–ವ್ಯಾಖ್ಯಾನ, ವಿದುಷಿ ವಸಂತ ವೆಂಕಟೇಶ್ ಅವರಿಂದ ನಿತ್ಯಾತ್ಮ ಶುಕಯೋಗಿ ವಿರಚಿತ ಕನ್ನಡ ಭಾಗವತ ದಶಮ ಸ್ಕಂಧ–ಶ್ರೀ ಕೃಷ್ಣ ಜನನ, ವ್ಯಾಖ್ಯಾನ : ಡಾ. ಎನ್.ಕೆ. ರಾಮಶೇಷನ್, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಸಂಜೆ 6ಕ್ಕೆ

■ **ನವೋದಯ ತಂಡ:** ನವೋದಯ ತಂಡದಿಂದ ವಾಲ್ಮೀಕಿ ರಾಮಾಯಣ ಆಧಾರಿತ ಸರಣಿಯ 2ನೇ ಭಾಗ 'ಅರಣ್ಯಕಾಂಡ' ನಾಟಕದ ಮರು ಪ್ರದರ್ಶನ, ರಚನೆ: ಹಿರಿಯ ರಂಗಕರ್ಮಿ ಪ್ರಸನ್ನ, ನಿರ್ದೇಶನ: ಶ್ರೀಪಾದ ಭಟ್, ಸಂಗೀತ: ಅನುಷ್ ಶೆಟ್ಟಿ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ, ಸಂಜೆ 7ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ದೊಡ್ಡ ಬಾಣಗೆರೆ ಪ್ರಕಾಶ ಮೂರ್ತಿ, 6.15 ಗೀತಾರಾಧನ, 6.35 ಬದುಕು ಮಣ್ಣಿನೊಂದಿಗೆ–ಬಾನುಲಿ ಸರಣಿ, ಲೇಖನ ಮತ್ತು ಪ್ರಸ್ತುತಿ–ಎ.ಪಿ.ಚಂದ್ರಶೇಖರ್, 6.45 ಅರಿವಿನ ಶಿಖರ, ಗಾಯನ– ನಿತಿನ್ ರಾಜಾರಾಂ ಶಾಸ್ತ್ರಿ, ಎಂ.ಡಿ. ಸುಮತಿ ಮುರಾರಿ, ವ್ಯಾಖ್ಯಾನ– ಡಾ.ಜ್ಯೋತಿ ಶಂಕರ್, 8.30 ವಿಶಿಷ್ಟ ವ್ಯಕ್ತಿ ವಿಶಿಷ್ಟ ಯತ್ನ–ನಿವೃತ್ತ ಶಿಕ್ಷಕ ಶ್ರೀಧರ್ ಚಕ್ರವರ್ತಿ ಅವರೊಂದಿಗೆ ಸಂವಾದ, ಇವರೊಂದಿಗೆ ಭಾಗವಹಿಸುತ್ತಾರೆ– ದಿವಾಕರ ಹೆಗಡೆ, 9.30 ಚುನಾವಣೆ 2023–ಮತ ಕ್ಷೇತ್ರ ದರ್ಶನ, ಸಮಗ್ರ ಚಿತ್ರಣ, 9.45 ನಮ್ಮ ಆರೋಗ್ಯ "ಮಕ್ಕಳಲ್ಲಿ ಮೂತ್ರನಾಳದ ಸೋಂಕು ಮತ್ತು ಚಿಕಿತ್ಸೆ ಕುರಿತು ಡಾ. ಕೆ.ಬಿ.ಶಶಿಕಿರಣ್ ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ಶಾರದಾ ಕಲಾ ಕೇಂದ್ರದ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 10.30 ಮಕ್ಕಳ ಮಂಟಪ – ಪ್ರತಿಭಾ ಪಲ್ಲವ–ಕಥಾ ಪುಸ್ತಕಗಳನ್ನು ಓದುವ ಹಾಗೂ ಗೋಳದಲ್ಲಿ ದೇಶಗಳನ್ನು ಗುರುತಿಸುವ ಪ್ರತಿಭೆ ಬಾಲಕೃಷ್ಣ ಎಸ್ ಪರಿಚಯ, 11.00 ಮನ್ ಕಿ ಬಾತ್–ದೇಶದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತು, ನಂತರ ಮನ್ ಕಿ ಬಾತ್ –ದೇಶದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತಿನ ಕನ್ನಡ ಅನುವಾದ

ಮಧ್ಯಾಹ್ನ: 12.30 ದೇವರನಾಮ–ವೃಂದಗಾನ, 12.45 ಜನಪದ ಸಂಗೀತ–ನಿಂಗಶೆಟ್ಟಿ ಮತ್ತು ತಂಡ, 1.00 ರಂಗಗೀತೆಗಳು, 1.20 ಭಾವಗೀತೆಗಳು–ರತ್ನಮಾಲಾ ಪ್ರಕಾಶ್, ಸಿ.ಅಶ್ವಥ್, 3.45 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ– ಗರುಡ ಗರ್ವಭಂಗ, ಪ್ರಸ್ತುತಿ– ಬಂಟ್ವಾಳ ತಾಲೂಕು ಕೋಡಪದವಿನ ಚಣಿಲ ಸುಬ್ರಹ್ಮಣ್ಯ ಭಟ್ ಮತ್ತು ಸಂಗಡಿಗರು, 5.05 ಮಿಶ್ರ ಮಾಧುರ್ಯ, 6.55 ಕೃಷಿರಂಗ–ಕೃಷಿ ಬದುಕಿನ ಸಾರ್ಥಕತೆ ಕುರಿತು ಕೆ.ಎಸ್. ಲಕ್ಷ್ಮೀಕಾಂತ ಹಾಗೂ ಕೆ.ಎಸ್. ಬೋರೇಗೌಡ ಅವರೊಂದಿಗೆ ಮಾತುಕತೆ, 8.00 ಮನ್ ಕಿ ಬಾತ್–ದೇಶದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತಿನ ಕನ್ನಡ ಅನುವಾದದ ಮರುಪ್ರಸಾರ, 9.15 ರಂಗಗೀತೆಗಳು, 9.30 ಸವಿನೆನಪು, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 30 ಭಾನುವಾರ 2023

ಸಂಪುಟ: 44 | ಸಂಚಿಕೆ: 15 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871


ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*


₹4



ಇಂದು ಮೈಸೂರಲ್ಲಿ ರೋಡ್ ಶೋ ಮೂಲಕ
ಮೋದಿ ಮೋಡಿ

● ರಾಜಮಾರ್ಗದಲ್ಲಿ ಭರ್ಜರಿ ರೋಡ್ ಶೋ, ಇನ್ನಿಲ್ಲದ ಭಾರೀ ಭದ್ರತೆ, ಸಿದ್ಧತಾ ಕಾರ್ಯ ಪೂರ್ಣ ● ಪ್ರಧಾನಿಗಳು ತೆರಳುವ ಮಾರ್ಗ, ಓವಲ್ ಮೈದಾನದ ಹೆಲಿಪ್ಯಾಡ್, ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಹೆಚ್ಚುವರಿ ಸಿಸಿ ಕ್ಯಾಮರಾ, ವಿಶೇಷ ದೀಪ ಅಳವಡಿಕೆ, ಜನರೇಟರ್ ವ್ಯವಸ್ಥೆ ● ಎಸ್‌ಪಿಜಿ ಅಧಿಕಾರಿಗಳ ಸೂಚನೆಯಂತೆ ಸರ್ವ ಸಿದ್ಧತೆ, ಪ್ರಧಾನಿಗಳ ರೋಡ್ ಶೋ ಬಂದೋಬಸ್ತ್ ತಾಲೀಮು ನಡೆಸಿದ ಪೊಲೀಸರು, ಅಲ್ಲಲ್ಲಿ ವಾಹನ ಸಂಚಾರ ನಿರ್ಬಂಧದಿಂದಾಗಿ ಸಾರ್ವಜನಿಕರಿಗೆ ತೀವ್ರ ತೊಂದರೆ





ಸಿದ್ಧತೆಗಳು ಪೂರ್ಣ



ಮೈಸೂರು, ಏ.29(ಆರ್‌ಕೆ)–ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಭಾನುವಾರ (ಏ.30) ಮೈಸೂರಿಗೆ ಆಗಮಿಸುವರು. ಹಾಸನ ಜಿಲ್ಲೆ ಬೇಲೂರಿನಿಂದ ವಿಶೇಷ ಹೆಲಿಕಾಪ್ಟರ್‌ನಲ್ಲಿ ಭಾನುವಾರ ಸಂಜೆ 5.30 ಗಂಟೆಗೆ ಮೈಸೂರಿನ ಕ್ರಾಫರ್ಡ್ ಹಾಲ್ ಎದುರಿನಲ್ಲಿರುವ ಓವಲ್ ಮೈದಾನದ ತಾತ್ಕಾಲಿಕ ಹೆಲಿಪ್ಯಾಡ್‌ಗೆ ಆಗಮಿಸುವ ಪ್ರಧಾನಿಗಳು, ಕಾರಿನಲ್ಲಿ ಮುಡಾ ಸರ್ಕಲ್, ಜೆಎಲ್‌ಬಿ ರಸ್ತೆ, ರಾಮಸ್ವಾಮಿ ಸರ್ಕಲ್, ಚಾಮರಾಜ ಜೋಡಿ ರಸ್ತೆ ಮಾರ್ಗವಾಗಿ **ಸಂಜೆ 5.40 ಗಂಟೆಗೆ ಗನ್‌ಹೌಸ್ ಸರ್ಕಲ್‌ಗೆ ತೆರಳುವರು.**

ಸಂಜೆ 5.50 ಗಂಟೆಗೆ ತೆರೆದ ಅಲಂಕೃತ ವಾಹನ ವೇರಿ ಭರ್ಜರಿ ರೋಡ್ ಶೋ ನಡೆಸುವ ಅವರು, ಬಿಜೆಪಿ ಅಭ್ಯರ್ಥಿಗಳ ಪರ ಪ್ರಚಾರ ನಡೆಸುವರು. ಗನ್‌ಹೌಸ್ ಸರ್ಕಲ್‌ನಿಂದ ಆರಂಭವಾಗುವ ರೋಡ್ ಶೋ ಸಂಸ್ಕೃತ ಪಾಠಶಾಲೆ ಸರ್ಕಲ್, ಸಯ್ಯಾಜಿ ರಾವ್ ರಸ್ತೆ, ಕೆ.ಆರ್.ಸರ್ಕಲ್, ಸರ್ಕಾರಿ ಆಯುರ್ವೇದ ಕಾಲೇಜು ಸರ್ಕಲ್, ಓಲ್ಡ್ ಆರ್‌ಎಂಸಿ ಸರ್ಕಲ್, ಹೈವೇ ಸರ್ಕಲ್ ಮೂಲಕ ಬನ್ನಿಮಂಟಪದ ಮಿಲೇನಿಯಂ ಸರ್ಕಲ್ (ಎಲ್‌ಐಸಿ ಸರ್ಕಲ್) ವರೆಗೆ ರಾಜಮಾರ್ಗದಲ್ಲಿ ರೋಡ್ ಶೋ ನಡೆಸುವ ಮೋದಿ ಅವರು, ರಾತ್ರಿ 7 ಗಂಟೆಗೆ ಎಲ್‌ಐಸಿ ಸರ್ಕಲ್‌ನಿಂದ ಕಾರಿನಲ್ಲಿ ಮೈಸೂರು–ಬೆಂಗಳೂರು ರಸ್ತೆಯಲ್ಲಿ ತೆರಳಿ ಮಣಿಪಾಲ್ ಆಸ್ಪತ್ರೆ ಜಂಕ್ಷನ್, ರಿಂಗ್ ರಸ್ತೆಯ ಹಂಚ್ಯಾ–ಸಾತಗಳ್ಳಿ ಮಾರ್ಗವಾಗಿ ನಂಜನಗೂಡು ರಸ್ತೆ ಮೂಲಕ ಮಂಡಕಳ್ಳಿ ವಿಮಾನ ನಿಲ್ದಾಣ ತಲುಪುವರು. ರಾತ್ರಿ 7.15 ಗಂಟೆ ವೇಳೆಗೆ ವಿಶೇಷ ವಿಮಾನದಲ್ಲಿ ನರೇಂದ್ರ ಮೋದಿ ಅವರು ಹುಬ್ಬಳ್ಳಿಗೆ ಪ್ರಯಾಣ ಬೆಳೆಸುವರು ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಪ್ರಧಾನಿಗಳ ಆಗಮನದ ಹಿನ್ನೆಲೆಯಲ್ಲಿ ಮೈಸೂರಿನ ಓವಲ್ ಮೈದಾನದಲ್ಲಿ ತಾತ್ಕಾಲಿಕ ಹೆಲಿಪ್ಯಾಡ್ ವ್ಯವಸ್ಥೆ ಮಾಡಲಾಗಿದ್ದು, ಭಾರಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆಯೊಂದಿಗೆ ಕಟ್ಟೆಚ್ಚರ ವಹಿಸಲಾಗಿದೆ. ಅವರು ಸಂಚರಿಸುವ ಮಾರ್ಗಗಳ ಇಕ್ಕೆಲಗಳಲ್ಲಿ ಬ್ಯಾರಿಕೇಡ್ ಹಾಕಿ ಯಾರೂ ನುಸುಳದಂತೆ ಎಚ್ಚರ ವಹಿಸಲಾಗಿದೆ. ನರೇಂದ್ರ ಮೋದಿ ಅವರು ರೋಡ್ ಶೋ ನಡೆಸುವ ರಾಜಮಾರ್ಗದುದ್ದಕ್ಕೂ ಎರಡೂ ಕಡೆ ಬ್ಯಾರಿಕೇಡ್ ಮತ್ತು ಎತ್ತರದ ಜಾಲರಿ ಹಾಕಿದ್ದು, ಹೆಚ್ಚುವರಿ ಸಿಸಿ ಕ್ಯಾಮರಾ, ಬೀದಿದೀಪ, ಜನರೇಟರ್‌ಗಳು, ಧ್ವನಿವರ್ಧಕಗಳನ್ನು ಅಳವಡಿಸಲಾಗಿದೆ. ಭದ್ರತೆ ದೃಷ್ಟಿಯಿಂದ ರಾಜಮಾರ್ಗದ ● 9ನೇ ಪುಟಕ್ಕೆ

80 ವರ್ಷ ಮೇಲ್ಪಟ್ಟ ಹಿರಿಯರು, ವಿಶೇಷಚೇತನರಿಗೆ ಮನೆಯಲ್ಲೇ ಮತದಾನ ಆರಂಭ

■ ಆಯಾಯ ಪಕ್ಷಗಳ ಏಜೆಂಟರೊಂದಿಗೆ ಮನೆ ಮನೆಗೆ ಹೋಗಿ ಮತದಾನ ಮಾಡಿಸಿದ ಅಧಿಕಾರಿಗಳು ■ ರಹಸ್ಯ ಕಾಯ್ದುಕೊಳ್ಳುವುದಕ್ಕೆ ಆದ್ಯತೆ; ಮೇ 6 ರವರೆಗೆ ಪ್ರಕ್ರಿಯೆ



ಬೆಂಗಳೂರು, ಏ. 29 (ಕೆಎಂಶಿ)–ರಾಜ್ಯದಲ್ಲಿ ವಿಧಾನಸಭಾ ಚುನಾವಣೆ ಕಾವು ಜೋರಾಗಿಯೇ ಇದೆ. ಇದೇ ವೇಳೆ ದೇಶದಲ್ಲಿಯೇ ಪ್ರಥಮ ಬಾರಿಗೆ ಪರಿಚಯಿಸಲಾಗಿರುವ 80 ವರ್ಷ ಮೇಲ್ಪಟ್ಟ ನಾಗರಿಕರು ಮತ್ತು ವಿಶೇಷ ಚೇತನರಿಗೆ ಮನೆಯಲ್ಲೇ ಮತದಾನ ಪ್ರಕ್ರಿಯೆ ಇಂದಿನಿಂದ ಆರಂಭಗೊಂಡಿದ್ದು, ಚುನಾವಣಾ ಅಧಿಕಾರಿಗಳು ನೋಂದಾಯಿಸಲ್ಪಟ್ಟವರ ಮನೆಗಳಿಗೆ ತೆರಳಿ ಮತದಾನಕ್ಕೆ ಚಾಲನೆ ನೀಡಿದರು. ಕರ್ನಾಟಕ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ದೇಶದಲ್ಲಿಯೇ ಮೊದಲ ಬಾರಿಗೆ ರಾಜ್ಯದಲ್ಲಿ ● 6ನೇ ಪುಟಕ್ಕೆ

ಮೈಸೂರಲ್ಲಿ ಬಿರುಸಿನ ಮಳೆ




ಮೈಸೂರು, ಏ.29(ಎಸ್‌ಬಿಡಿ)– ಬಿಸಿಲ ತಾಪದಿಂದ ಬೆಂದಿದ್ದ ಮೈಸೂರಿಗೆ ಶನಿವಾರ ವರ್ಷಧಾರೆ ತಂಪೆರೆಯಿತು. ರಾತ್ರಿ ಸುಮಾರು 10.15ರ ಸಮಯದಲ್ಲಿ ಗುಡುಗು–ಮಿಂಚು ಸಹಿತ ಆರಂಭವಾದ ಮಳೆ, ಗಂಟೆಗೂ ಹೆಚ್ಚು ಕಾಲ ಬಿರುಸಾಗಿ ಸುರಿಯಿತು. ನಂತರ ತಡರಾತ್ರಿವರೆಗೂ ಜಡಿ ಹಿಡಿದಿದ್ದರಿಂದ ವಾತಾವರಣ ಹಿತವಾಗಿಸಿತು. ಹಲವು ದಿನಗಳಿಂದ ಮೋಡ ಕಟ್ಟಿ ಮುನ್ಸೂಚನೆ ಇತ್ತಾದರೂ ಮಳೆ ಬಾರದ ಕಾರಣ ಸೆಕೆ ವಿಪರೀತವಾಗಿತ್ತು. ಪರಿಣಾಮ ಎಲ್ಲರೂ ಅನುಕೂಲಕ್ಕೆ ತಕ್ಕಂತೆ ಫ್ಯಾನ್, ಕೂಲರ್, ಎಸಿ ಆಶ್ರಯಿಸಿದ್ದರು. ಹಾಗೆಯೇ ಶನಿವಾರ ಸಂಜೆಯೇ ಮೋಡ ಕವಿದಿತ್ತು. ಆದರೆ ಜೋರು ಗಾಳಿಯಿಂದಾಗಿ ಮಳೆ ಬಂದಿರಲಿಲ್ಲ. ರಾತ್ರಿ ಗುಡುಗು–ಮಿಂಚು ಸಹಿತ ಮಳೆಯಾಗಿದ್ದರಿಂದ ವಾತಾವರಣ ಕೊಂಚ ತಂಪಾಗಿದೆ. ಗಿಡ–ಮರಗಳಿಗೂ ಜೀವ ಜಲ ಸಿಕ್ಕಂತಾಗಿದೆ.

ರೋಡ್ ಶೋ ಸಿದ್ಧತೆಗೆ ಅಡ್ಡಿ: ಭಾನುವಾರ ಪ್ರಧಾನಿ ಮೋದಿ ಅವರ ಬೃಹತ್ ರೋಡ್ ಶೋ ಹಿನ್ನೆಲೆಯಲ್ಲಿ ಇಂದು ಅಂತಿಮ ಸಿದ್ಧತೆ ● 9ನೇ ಪುಟಕ್ಕೆ

ಒಳಪುಟಗಳಲ್ಲಿ

ಬಿಜೆಪಿಯವರು ಬೆಲೆ ಏರಿಕೆ ಮಾಡಿ ಜನರಿಗೆ ತೊಂದರೆ ಕೊಡ್ತಿದ್ದಾರೆ

● ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಾಗ್ದಾಳಿ ● ಸಂವಿಧಾನ, ಪ್ರಜಾಪ್ರಭುತ್ವ ಉಳಿವಿಗೆ ಕಾಂಗ್ರೆಸ್ ಗೆಲ್ಲಿಸಿ



ಮಳವಳ್ಳಿ, ಏ.29(ಮೋಹನ್‌ರಾಜು)– ಈ ಬಾರಿಯ ಚುನಾವಣೆ ಬಹಳ ಮಹತ್ವ ಪಡೆದುಕೊಂಡಿದ್ದು, ಸಂವಿಧಾನ ರಕ್ಷಣೆ ಜೊತೆಗೆ ಪ್ರಜಾಪ್ರಭುತ್ವ ಉಳಿವಿಗಾಗಿ ಕಾಂಗ್ರೆಸ್ ಗೆಲ್ಲಿಸಬೇಕು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕರೆ ನೀಡಿದರು.


ಪಟ್ಟಣದ ಕನಕದಾಸ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಕಾಂಗ್ರೆಸ್ ಕಾರ್ಯಕರ್ತರ ಬೃಹತ್ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಸಂವಿಧಾನದ ಮೂಲಕ ಡಾ.ಬಿ.ಆರ್.ಅಂಬೇಡ್ಕರ್ ಅವರು ಮತದಾನದ ಹಕ್ಕು ಕೊಡದಿದ್ದರೆ ಹಾಗೂ ಅದನ್ನು ನೆಹರು ಅನುಷ್ಠಾನಗೊಳಿಸದಿದ್ದರೆ ಯಾರೂ ನಿಮ್ಮ ಹತ್ತಿರ ಬರುತ್ತಿರಲಿಲ್ಲ. ಓಟಿನ ಅಧಿಕಾರ ಇರುವುದರಿಂದ ಮನೆ ಬಾಗಿಲಿಗೆ ಬರುತ್ತಿದ್ದಾರೆ. ನಂತರದ ದಿನಗಳಲ್ಲಿ ಇಂದಿರಾ ಗಾಂಧಿ ಅವರು ಹಲವು ಕಾರ್ಯಕ್ರಮ ಕೊಟ್ಟಿದ್ದಾರೆ. ಆದರೆ ಪ್ರಸ್ತುತ ಕೇಂದ್ರದಲ್ಲಿರುವ ಸರ್ಕಾರ ಸಂವಿಧಾನ ತಿರುಚುವ ಕೆಲಸ ಮಾಡುತ್ತಿದೆ. ಹೀಗಾಗಿ ಕರ್ನಾಟಕ ಚುನಾವಣೆ ಬಹಳ ಮಹತ್ವದ್ದು. ಇಲ್ಲಿ ಕಾಂಗ್ರೆಸ್ ಗೆದ್ದರೆ ದೇಶದ ಜನರು ಜಾಗೃತರಾಗುತ್ತಾರೆ ಎಂದರು. ಈಗಾಗಲೇ ಜನರಿಗೆ ಕಾಂಗ್ರೆಸ್ ಪಕ್ಷದ ಸಾಧನೆಗಳು ಸೇರಿದಂತೆ ಅನೇಕ ವಿಚಾರಗಳ ಬಗ್ಗೆ ಮಾಹಿತಿ ಕೊಟ್ಟಿದ್ದೇವೆ. ದೇಶದಲ್ಲಿ ಪ್ರಜಾಪ್ರಭುತ್ವ ಉಳಿಸಬೇಕಾಗಿದೆ ಎಂದ ಅವರು, ಕೇಂದ್ರ ಹಾಗೂ ರಾಜ್ಯ ಸರ್ಕಾರ ಸರಿಯಾಗಿ ನಡೆದುಕೊಳ್ಳುತ್ತಿಲ್ಲ. ಸತ್ಯ ನುಡಿದವರನ್ನು ಜೈಲಿಗೆ ಹಾಕುವ ಕೆಲಸ ನಡೆಯುತ್ತಿದೆ ಎಂದು ವಾಗ್ದಾಳಿ ನಡೆಸಿದರು. ಸತ್ಯ ನುಡಿದ ರಾಹುಲ್ ಗಾಂಧಿ ಅವರ ವಿರುದ್ಧ ನ್ಯಾಯಾಲಯದಿಂದ ವರದಿ ಬಂದ ಒಂದೇ ದಿನಕ್ಕೆ ಸ್ಪೀಕರ್ ಅವರ ಸದಸ್ಯತ್ವದಿಂದ ಅನರ್ಹಗೊಳಿಸಿ ಮನೆ ಖಾಲಿ ಮಾಡಲು ನೋಟಿಸ್ ನೀಡಿ, ಲೈಟ್, ನೀರು ಪೈಪ್‌ಲೈನ್ ಕಟ್ ಮಾಡಿದರು. ಅವರು ಈಗ ತಾಯಿ ಮನೆಯಲ್ಲಿದ್ದಾರೆ. ಅವರಿಗಾದ ಸ್ಥಿತಿ ನಮ್ಮೆಲ್ಲರಿಗೂ ಬರಬಹುದು. ಹೀಗಾಗಿ ಕಾಂಗ್ರೆಸ್ ಗೆಲ್ಲಿಸುವ ಕೆಲಸ ಮಾಡಬೇಕಿದೆ. ನಮ್ಮ ಅಭ್ಯರ್ಥಿ ಪಿ.ಎಂ.ನರೇಂದ್ರಸ್ವಾಮಿ ಅವರಿಗೆ ಮತ ನೀಡಿ ಗೆಲ್ಲಿಸಿದರೆ ದೇಶದಲ್ಲಿ ಒಳ್ಳೆಯ ವಾತಾವರಣ ಸೃಷ್ಟಿಯಾಗುತ್ತದೆ ಎಂದರು.

ಎಸ್ಸಿ, ಎಸ್ಟಿ ಅವರಿಗೆ ಬಜೆಟ್ ಇರಲಿಲ್ಲ. ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಬಳಿಕ ಜನಸಂಖ್ಯೆ ಆಧಾರದ ಮೇಲೆ ಬಜೆಟ್ ಮಂಡಿಸುವ ಕೆಲಸವನ್ನು ಸಿದ್ದರಾಮಯ್ಯ ಅವರು ಮಾಡಿ ಎಸ್ಸಿಪಿ, ಟಿಎಸ್ಪಿ ಹಣ ನೀಡಿ ಅನುಕೂಲ ಮಾಡಿದ್ದಾರೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಒಳ್ಳೆಯ ಕಾರ್ಯಕ್ರಮಗಳು ಜಾರಿಯಾಗುತ್ತವೆ. ಗೃಹಜ್ಯೋತಿ, ಅನ್ನಭಾಗ್ಯ, ನಿರುದ್ಯೋಗಿ ಯುವಕರಿಗೆ ಪರಿಹಾರ, ಉಚಿತ ಬಸ್‌ಪಾಸ್ ಸೇರಿದಂತೆ ಅನೇಕ ಸೌಲಭ್ಯಗಳನ್ನು ನೀಡುತ್ತೇವೆ ಎಂದರು.

ಕೇಂದ್ರದಲ್ಲಿ 30 ಲಕ್ಷ ಹಾಗೂ ರಾಜ್ಯದಲ್ಲಿ 2.25 ಲಕ್ಷ ಸರ್ಕಾರಿ ಹುದ್ದೆ ಖಾಲಿ ಇದೆ. ಪ್ರತಿವರ್ಷ ಉದ್ಯೋಗ ನೀಡುವ ಭರವಸೆಯನ್ನು ಬಿಜೆಪಿ ಈಡೇರಿಸಿಲ್ಲ. ಬೋಗಸ್ ಮಾತು, ಸುಳ್ಳು ಹೇಳುವುದು ಬಿಜೆಪಿ ನೀತಿ. ನಿಜ ಹಾಗೂ ಬಡವರ ಪರ ಇರುವುದು ಕಾಂಗ್ರೆಸ್ ಪಕ್ಷ. ಕಾರ್ಮಿಕರಿಗಾಗಿ ಹಲವು ಕಾನೂನು ತಂದಿದ್ದೇವು. ಆದರೆ ಆ ಎಲ್ಲಾ ಕಾನೂನುಗಳನ್ನು ಪ್ರಧಾನಿ ಮೋದಿ ಅವರು ತೆಗೆಯುವ ಮೂಲಕ ಬಡವರಿಗೆ ಬಿಜೆಪಿ ಸರ್ಕಾರ ತೊಂದರೆ ಕೊಡುತ್ತಿದೆ ಎಂದು ಆರೋಪಿಸಿದರು. ಕಾಂಗ್ರೆಸ್‌ಗೆ ಮತ ನೀಡಿ ಅಧಿಕಾರಕ್ಕೆ ತನ್ನಿ ಎಂದ ಅವರು, ● 9ನೇ ಪುಟಕ್ಕೆ

ಪ್ರಧಾನಿ ಮೋದಿ ಜನಪ್ರಿಯತೆ ಸಹಿಸದೆ ಹತಾಶೆಯಿಂದ ವಿಷಸರ್ಪಕ್ಕೆ ಹೋಲಿಕೆ

ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಮೈಸೂರಲ್ಲಿ ಕೇಂದ್ರ ರಕ್ಷಣಾ ಸಚಿವ ರಾಜನಾಥ ಸಿಂಗ್ ತೀವ್ರ ವಾಗ್ದಾಳಿ



ಮೈಸೂರು, ಏ. 29(ಆರ್‌ಕೆ)– ಅಭಿವೃದ್ಧಿ ಕಾರ್ಯ ಮತ್ತು ಜನಪ್ರಿಯತೆಯನ್ನು ಸಹಿಸಲಾರದೆ ಹತಾಶರಾಗಿ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ವಿಷಸರ್ಪವಿದ್ದಂತೆ ಎಂಬ ಹೇಳಿಕೆ ನೀಡಿದ್ದಾರೆ ಎಂದು ಕೇಂದ್ರ ರಕ್ಷಣಾ ಸಚಿವ ರಾಜನಾಥ ಸಿಂಗ್ ಇಂದಿಲ್ಲಿ ಕಾಂಗ್ರೆಸ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಮೈಸೂರಿನ ವಿವೇಕಾನಂದ ಸರ್ಕಲ್‌ನಲ್ಲಿ ಕೆ.ಆರ್.ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀವತ್ಸ ಅವರ ಪರ ಬಹಿರಂಗ ಚುನಾವಣಾ ಪ್ರಚಾರ ಸಭೆಯಲ್ಲಿ ಭಾಗವಹಿಸಿ ಮಾತನಾಡುತ್ತಿದ್ದ ಅವರು, ಮೋದಿ ಅವರ ಕಾರ್ಯವೈಖರಿ, ಅಪಾರ ಜನಪ್ರಿಯತೆ ಕಂಡು ಕಾಂಗ್ರೆಸ್‌ನವರು ಹತಾಶರಾಗಿರುವುದಷ್ಟೇ ಅಲ್ಲದೆ ನಿರಾಶರಾಗಿದ್ದಾರೆ. ಹೊಟ್ಟೆಯುರಿ ಬಂದಿದೆ. ಅದನ್ನು ಸಹಿಸಲಾಗದೆ ಖರ್ಗೆ ಅವರು ವಿಷಸರ್ಪ ಎಂದು ಹೇಳಿದ್ದಾರೆ ಎಂದರು. 70 ವರ್ಷ ಅಧಿಕಾರ ನಡೆಸಿದವರು ದೇಶದಲ್ಲಿ ಕೇವಲ 74 ವಿಮಾನ ನಿಲ್ದಾಣ ನಿರ್ಮಿಸಿದ್ದರು. ಕೇವಲ 9 ವರ್ಷಗಳಲ್ಲಿ ನರೇಂದ್ರ ಮೋದಿ ಅವರ ನೇತೃತ್ವದ ಬಿಜೆಪಿ ಸರ್ಕಾರ 148 ಏರ್‌ಪೋರ್ಟ್ ನಿರ್ಮಿಸಿದೆ. ಕಾಂಗ್ರೆಸ್‌ನವರು ದಿನಕ್ಕೆ 4ರಿಂದ 5 ಕಿ.ಮೀ. ರಾಷ್ಟ್ರೀಯ ಹೆದ್ದಾರಿ ನಿರ್ಮಿಸುತ್ತಿದ್ದರು. ನಾವು ದಿನಕ್ಕೆ 38 ಕಿ.ಮೀ. ಮಾಡುತ್ತಿದ್ದೇವೆ ಚೆನ್ನೈ, ಮುಂಬೈ, ಹೈದರಾಬಾದ್‌ನಿಂದ ಬೆಂಗಳೂರುವರೆಗೆ 3 ಪ್ರಮುಖ ಕೈಗಾರಿಕಾ ಕಾರಿಡಾರ್ ಮಾಡಿದ್ದೇವೆ. ಈ ಮೂರೂ ಕಾರಿಡಾರ್‌ಗಳು ಕರ್ನಾಟಕದ ರಾಜಧಾನಿ ಬೆಂಗಳೂರನ್ನು ಕೇಂದ್ರೀಕರಿಸಿ ನಿರ್ಮಿಸಲಾಗಿದೆ. ಇದು ಕರ್ನಾಟಕ ರಾಜ್ಯದ ಬಗ್ಗೆ ಪ್ರಧಾನಿ ಮೋದಿ ಅವರಿಗಿರುವ ಪ್ರೀತಿ, ಕಾಳಜಿಯನ್ನು ತೋರಿಸುತ್ತದೆ ಎಂದು ರಾಜನಾಥ ಸಿಂಗ್ ನುಡಿದರು.

ನಾವು ಅಭಿವೃದ್ಧಿ ಹೆಸರಲ್ಲಿ ಆಡಳಿತ ನಡೆಸುತ್ತೇವೆಯೇ ಹೊರತು, ಜಾತಿ, ಮತ, ಪಂಥದ ಆಧಾರದಲ್ಲಲ್ಲ. ಆದರೆ ಕಾಂಗ್ರೆಸ್ ಜಾತಿ–ಧರ್ಮದ ನಡುವೆ ವೈಮನಸ್ಸು ಉಂಟುಮಾಡಿದೆ. ಅದಕ್ಕೆ ತುರ್ತು ಪರಿಸ್ಥಿತಿಯೇ ಸಾಕ್ಷಿ. ಸಂವಿಧಾನದ ಮೇಲೂ ಅವರಿಗೆ ನಂಬಿಕೆ ಇಲ್ಲ ಎಂದ ಅವರು, ಆದರೆ ನರೇಂದ್ರ ಮೋದಿ ಅವರು ತಮ್ಮ ಆಡಳಿತದ ಮೂಲಕ ಭಾರತದ ಶ್ರೇಷ್ಠತೆ, ಘನತೆಯನ್ನು ಹೆಚ್ಚಿಸಿದ್ದಾರೆ ಎಂದು ನುಡಿದರು. ನಮ್ಮ ಸೈನಿಕರಿಗೆ ಅಗತ್ಯ ಸೌಲಭ್ಯ ಒದಗಿಸುವ ಜೊತೆಗೆ ರಕ್ಷಣಾ ಸಾಮಗ್ರಿಗಳಾದ ಮದ್ದು–ಗುಂಡುಗಳನ್ನು ನಾವೇ ತಯಾರಿಸಿಕೊಳ್ಳುವುದರೊಂದಿಗೆ ವಿದೇಶಗಳಿಗೂ ರಫ್ತು ಮಾಡುತ್ತಿದ್ದೇವೆ. ವಿವಿಧ ಯೋಜನೆಗಳ ಫಲಾನುಭವಿಗಳಿಗೆ ಡೈರೆಕ್ಟ್ ಬೆನಿಫಿಟ್ ಟ್ರಾನ್ಸ್‌ಫರ್ (ಡಿಬಿಟಿ) ಮೂಲಕ 28 ಲಕ್ಷ ಕೋಟಿ ರೂ. ● 9ನೇ ಪುಟಕ್ಕೆ

ಮಡಿಕೇರಿಯಲ್ಲಿ ಅಮಿತ್ ಶಾ ಭರ್ಜರಿ ರೋಡ್ ಶೋ

ಶ್ರೀ ಚೌಡೇಶ್ವರಿಗೆ ಪೂಜೆ, ಕೊಡಗಿನ ಪೇಟದಲ್ಲಿ ಮಿಂಚಿದ ಶಾ, ಸಹಸ್ರಾರು ಜನರ ಕೈಯ್ಯಲ್ಲಿ ರಾರಾಜಿಸಿದ ಬಿಜೆಪಿ ಧ್ವಜಗಳು





ಮಡಿಕೇರಿ, ಏ.29–ರಾಜ್ಯದಲ್ಲಿ ಮತ್ತೆ ಬಿಜೆಪಿ ಸರ್ಕಾರವನ್ನು ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಚುನಾವಣಾ ತಂತ್ರಗಾರಿಕೆಯ ಚಾಣಾಕ್ಷರೆಂದೇ ಬಿಂಬಿತವಾಗಿರುವ ಅಮಿತ್ ಶಾ, ಕೊಡಗಿನ ಎರಡು ಕ್ಷೇತ್ರಗಳ ಮತದಾರರನ್ನು ಗುರಿಯಾಗಿಸಿಕೊಂಡು ಶನಿವಾರ ಜಿಲ್ಲಾ ಕೇಂದ್ರ ಮಡಿಕೇರಿಯಲ್ಲಿ ಬೃಹತ್ ರೋಡ್ ಶೋ ನಡೆಸಿ, ಗಮನ ಸೆಳೆದರು. ನಗರದ ಮಾರುಕಟ್ಟೆ ಬಳಿಯ ಶ್ರೀ ಚೌಡೇಶ್ವರಿ ದೇಗುಲದಿಂದ ಮಧ್ಯಾಹ್ನ 12.44 ಗಂಟೆಗೆ ಆರಂಭಗೊಂಡ ರೋಡ್ ಶೋ ಜನರಲ್ ತಿಮ್ಮಯ್ಯ ವೃತ್ತದವರೆಗೆ ನಡೆಯಬೇಕಿತ್ತಾದರೂ, ಹಳೇ ಖಾಸಗಿ ಬಸ್ ನಿಲ್ದಾಣದ ಸ್ಕ್ವಾಡರ್ನ್ ಲೀಡರ್ ದೇವಯ್ಯ ವೃತ್ತದವರೆಗೆ ಸಾಗಿ ನಂತರ ಉಡುಪಿಯತ್ತ ತೆರಳಿದರು.

ಶ್ರೀ ಚೌಡೇಶ್ವರಿಗೆ ಪೂಜೆ: ಸುಮಾರು 1 ಗಂಟೆ ತಡವಾಗಿ ಹೆಲಿಕಾಪ್ಟರ್‌ನಲ್ಲಿ ನಗರದ ಅಂಚಿನ ಗಾಲ್ಫ್ ಮೈದಾನಕ್ಕೆ ಆಗಮಿಸಿದ ಅಮಿತ್ ಶಾ, ಬಳಿಕ ನೇರವಾಗಿ ಶ್ರೀ ಚೌಡೇಶ್ವರಿ ದೇಗುಲಕ್ಕೆ ● 6ನೇ ಪುಟಕ್ಕೆ

ಕೊಡಗಲ್ಲಿ ಪ್ರತಿಸ್ಪರ್ಧಿ ಇಲ್ಲ

ಸಮಯದ ಅಭಾವದ ಕಾರಣ ರೋಡ್ ಶೋ ಮೊಟಕುಗೊಳಿಸಿದ ಗೃಹ ಸಚಿವ ಅಮಿತ್ ಶಾ, ಈ ಸಂದರ್ಭ ಕೆಲವು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ಕೊಡಗಿನಂತಹ ಗುಡ್ಡಗಾಡುಗಳಿಂದ ಕೂಡಿರುವ ಪುಟ್ಟ ಪ್ರದೇಶದಲ್ಲೇ ಬಿಜೆಪಿಯ ರೋಡ್ ಶೋಗೆ ಭಾರೀ ಸಂಖ್ಯೆಯಲ್ಲಿ ಜನರು ಆಗಮಿಸಿದ್ದು, ಸಂತಸ ತಂದಿದೆ ಎಂದು ಹೇಳಿದರು. ಕರಾವಳಿ ಸೇರಿದಂತೆ ರಾಜ್ಯದ ಎಲ್ಲಾ ಕಡೆಗಳಲ್ಲೂ ಬಿಜೆಪಿ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದು, ಪೂರ್ಣ ಬಹುಮತದೊಂದಿಗೆ ಪಕ್ಷ ಅಧಿಕಾರಕ್ಕೆ ಬರಲಿದೆ. ಕೊಡಗಿನ ಎರಡೂ ಕ್ಷೇತ್ರಗಳಲ್ಲೂ ಬಿಜೆಪಿ ಅಭ್ಯರ್ಥಿಗಳು ಗೆಲ್ಲಲಿದ್ದು, ಕೊಡಗಿನಲ್ಲಿ ಬಿಜೆಪಿಗೆ ಪ್ರತಿಸ್ಪರ್ಧಿಯೇ ಇಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಪ್ರಧಾನಿ ಮೋದಿ ಕುರಿತು ಮಲ್ಲಿಕಾರ್ಜುನ ಖರ್ಗೆ ಹೇಳಿಕೆಗೆ ಪ್ರತಿಕ್ರಿಯಿಸಿದ ಅಮಿತ್ ಶಾ, ಕಾಂಗ್ರೆಸ್ ಮೋದಿಯವರ ಏಳಿಗೆಯನ್ನು ಸಹಿಸದೇ ತುಚ್ಛವಾಗಿ ಮಾತನಾಡುತ್ತಿದೆ. ಅವರ ಹೇಳಿಕೆಗಳು ನಮ್ಮನ್ನು ಮತ್ತಷ್ಟು ಪ್ರಬಲವಾಗಿಸುತ್ತಿದೆ ಎಂದು ಹೇಳಿದರು.

ನಕ್ಕರೆ ಅದೇ ಸ್ವರ್ಗ

ಪತಿ : ನನ್ನ ಮೇಲೆ ಎಷ್ಟೊಂದು ಪ್ರೀತಿ ನಿನಗೆ, ನನಗೋಸ್ಕರ ಎರಡು ಬನಿಯನ್ ತಂದಿದ್ದೀಯ?

ಪತ್ನಿ : ಐದು ಸಾವಿರ ಕೊಟ್ಟು ರೇಷ್ಮೆ ಸೀರೆ ತಗೊಂಡೆ. ಅದಕ್ಕೆ ಫ್ರೀಯಾಗಿ ಕೊಟ್ಟರು ಅಷ್ಟೆ..

ಮೈಸೂರು ಮಿತ್ರ

ಭಾನುವಾರ, 30 ಏಪ್ರಿಲ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಅಪವಾದಗಳಿಗೆ ಅತ್ಯುತ್ತಮ ಉತ್ತರವೆಂದರೆ ಮೌನ –ಬೆನ್ ಜಾನ್ಸನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತೋಟ ಮಾಡಿದವನಿಗೆ ಕೋಟಲೆಯಿಲ್ಲ

ನಿಮ್ಮ ಪತ್ರಗಳು

ಈ ರಸ್ತೆಗೆ ಡಾಂಬರ್ ಭಾಗ್ಯ ಇಲ್ಲವೇ?



ಮಾನ್ಯರೆ,

ಮೈಸೂರಿನ ರಾಮಕೃಷ್ಣನಗರ ಡಿವಿಸಿ ಲೇಔಟ್ (ಅಮ್ಮ ಕಾಂಪ್ಲೆಕ್ಸ್ ಎದುರು ರಸ್ತೆ) ಹಲವಾರು ವರ್ಷಗಳಿಂದ ಹದಗೆಟ್ಟಿರುವ ರಸ್ತೆಗೆ ಡಾಂಬರೀಕರಣ ಆಗಿಲ್ಲ. ಇಲ್ಲಿನ ಸುತ್ತಮುತ್ತಲ ಬಹುತೇಕ ಎಲ್ಲ ರಸ್ತೆಗಳೂ ಡಾಂಬರೀಕರಣಗೊಂಡು ಮದುವಣಗಿತ್ತಿಯಂತೆ ಕಂಗೊಳಿಸುತ್ತಿದೆ. ಕಿರಿದಾಗಿರುವ ಈ ರಸ್ತೆಯಲ್ಲಿ ವಾಹನ ಚಾಲಕರು ಹರಸಾಹಸ ಪಡುತ್ತಿದ್ದಾರೆ. ರಸ್ತೆ ಹಳ್ಳ–ಕೊಳ್ಳಗಳಿಂದ ಕೂಡಿದೆ. ನಗರಪಾಲಿಕೆ ಅಧಿಕಾರಿಗಳಿಗೆ ಈ ರಸ್ತೆ ಕಣ್ಣಿಗೆ ಬಿದ್ದಿಲ್ಲವೇ? ಯಾವುದೇ ಚುನಾವಣೆ ಬಂತೆಂದರೆ ಮತ ಕೇಳಲು ತಂಡೋಪತಂಡವಾಗಿ ಮನೆ ಮನೆಗೆ ಬರುವ ಅಭ್ಯರ್ಥಿಗಳು ಗೆದ್ದ ತಕ್ಷಣ ಮತದಾರರನ್ನು ಮರೆತುಬಿಡುವುದು ಯಾವ ನ್ಯಾಯ? ದಯವಿಟ್ಟು ಇನ್ನು ಮುಂದಾದರೂ ಗೆದ್ದ ಅಭ್ಯರ್ಥಿ ಮತದಾರರನ್ನು ಕಡೆಗಣಿಸದೆ ಅವರ ಕಷ್ಟ ಸುಖಗಳಿಗೆ ಭಾಗಿಯಾಗುವರೆಂದು ಭಾವಿಸುತ್ತೇನೆ. ಈ ರಸ್ತೆಗೆ ಡಾಂಬರು ಭಾಗ್ಯ ಸದ್ಯದಲ್ಲೇ ದೊರಕುವುದೆಂದು ಆಶಿಸೋಣವೇ?

– ಕೆ.ರಮ್ಯ, ರಾಮಕೃಷ್ಣನಗರ, ಮೈಸೂರು.

ಭ್ರಷ್ಟಾಚಾರ ಕಡಿವಾಣಕ್ಕೆ ಮೊದಲ ಹೆಜ್ಜೆ ಮತದಾನ

ಮಾನ್ಯರೆ,

ಇತ್ತೀಚಿನ ಪ್ರಣಾಳಿಕೆಗಳು ಅಭಿವೃದ್ಧಿಯ ಮೂಲಕ ರಾಜ್ಯದ ಜನಸಾಮಾನ್ಯರ ಆಶೋತ್ತರಗಳನ್ನು ಬಿಂಬಿಸುವ ಪ್ರಣಾಳಿಕೆಗಳಾಗುವ ಬದಲು ಪಕ್ಷವನ್ನು ಅಧಿಕಾರಕ್ಕೆ ತರಲು ಜನಸಾಮಾನ್ಯನಿಗೆ ದಾರಿ ತಪ್ಪಿಸುವ ಹುಸಿ ಭರವಸೆಗಳ ಕೈಪಿಡಿಯಾಗಿವೆ. ಜನರ ಕುಂದುಕೊರತೆಗಳ ನಿವಾರಣೆ ಮಾಡುವ ಬದ್ಧತೆಯುಳ್ಳ ಅಭ್ಯರ್ಥಿಯನ್ನು ಆಯ್ಕೆ ಮಾಡುವುದು ನಮ್ಮ ಕರ್ತವ್ಯ. ಮತದಾನದ ಮುಖಾಂತರ ಬದ್ಧತೆಯಿಲ್ಲದ ರಾಜಕಾರಣಿಯನ್ನು ಮಣಿಸುವುದು ನಮ್ಮ ಕೆಲಸ. ಇನ್ನೂ 100 ಪ್ರತಿಶತ ಮತದಾನ ಆಗಬೇಕು. ಇದಕ್ಕೆ ಚುನಾವಣಾ ಆಯೋಗ ಶ್ರಮಿಸಬೇಕು. ಇನ್ನು ಕುಟುಂಬ ರಾಜಕಾರಣ ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಸಾಮಾನ್ಯವಾಗಿ ಬಿಟ್ಟಿದೆ. ಕುಟುಂಬ ರಾಜಕಾರಣ ತಪ್ಪಲ್ಲ. ಆದರೆ ಕುಟುಂಬಸ್ಥರು ಅಧಿಕಾರಕ್ಕೆ ಬಂದಾಗ ಅದರ ದುರುಪಯೋಗ ತಪ್ಪು. ಭ್ರಷ್ಟ ಮತ್ತು ಬೇನಾಮಿ ಆಸ್ತಿ ಮಾಡುವ ರಾಜಕಾರಣಿ ಸಾಮಾನ್ಯ ಜನರ ಬದುಕು ಬವಣೆಗೆ ಸ್ಪಂದಿಸಲಾರ. ಭ್ರಷ್ಟಾಚಾರ ಕಡಿವಾಣಕ್ಕೆ ಮೊದಲ ಹೆಜ್ಜೆ ಮತದಾನ. ಅಭ್ಯರ್ಥಿಗಳು ಭ್ರಷ್ಟರೇ ಎಂಬ ಅಳಲು ಬಿಟ್ಟು ಸಾಮಾಜಿಕ ಬದ್ಧತೆಯುಳ್ಳ ಒಳ್ಳೆ ಅಭ್ಯರ್ಥಿಯನ್ನು ಕಂಡುಕೊಂಡು ಮತ ಹಾಕಿ ಗೆಲ್ಲಿಸಿ ರಾಜ್ಯವನ್ನು ಸುಭಿಕ್ಷೆಗೊಳಿಸುವ ಆದ್ಯ ಕರ್ತವ್ಯ ನಮ್ಮದು.

–ವಿಜಯಕುಮಾರ್ ಎಚ್.ಕೆ., ರಾಯಚೂರು

ಜನಸಂಖ್ಯೆ ವರವೋ–ಶಾಪವೋ!?

ಮಾನ್ಯರೆ,

ಭಾರತದ ಜನಸಂಖ್ಯೆ 142 ಕೋಟಿ 86 ಲಕ್ಷ ಮೂಲಕ ಪ್ರಪಂಚದಲ್ಲಿ ಮೊದಲ ಸ್ಥಾನದಲ್ಲಿ ಇದೆ. ಸ್ವಾತಂತ್ರ್ಯದ ಸಂದರ್ಭದಲ್ಲಿ ಭಾರತದ ಜನಸಂಖ್ಯೆ 34 ಕೋಟಿ. 75 ವರ್ಷಗಳಲ್ಲಿ ಪ್ರಮಾಣ 4ರಷ್ಟು ಏರಿಕೆಯಾಗಿದೆ. ಮುಂದೆ ಆಡಳಿತ ನಡೆಸುವವರು ಈ ಏರಿಕೆ ಪ್ರಮಾಣವನ್ನು ಗಮನದಲ್ಲಿ ಇಟ್ಟುಕೊಂಡು ಯೋಜನೆಗಳನ್ನು ವರ್ತಮಾನದ ಸರ್ಕಾರ ರೂಪಿಸಬೇಕಾಗಿದೆ. ಆಡಳಿತ ನಡೆಸುವ ಪಕ್ಷಗಳು ಜನಸಂಖ್ಯಾ ಏರಿಕೆ ಆಧಾರಗಳನ್ನು ಮುಂದಿಟ್ಟುಕೊಂಡು ಉದ್ಯೋಗ, ಶಿಕ್ಷಣ, ಬಡತನ, ಆರೋಗ್ಯ, ಮೂಲಭೂತ ಸೌಕರ್ಯಗಳನ್ನು ಜನಸಾಮಾನ್ಯರಿಗೆ ಕೊಡಲು ಈ ನೆಪಗಳನ್ನು ಹೇಳಬಹುದು ಎಂದು ಅನಿಸುತ್ತದೆ. ಜನಸಂಖ್ಯೆಯಲ್ಲಿ ಮುಂದಿದ್ದ ಖ್ಯಾತಿ ಚೀನಾವನ್ನು ಹಿಂದಿಕ್ಕಿದ ಭಾರತ ಭವಿಷ್ಯದಲ್ಲೂ ಮುಂದೆ ಸಾಗಬೇಕಾಗಿದೆ. ಈ ಜನಸಂಖ್ಯೆ ಏರಿಕೆಯಿಂದ ಆಡಳಿತ ನಡೆಸುವ ಸರ್ಕಾರಗಳಿಗೆ ವರವೋ–ಶಾಪವೋ ಕಾದು ನೋಡಬೇಕಾಗಿದೆ.

–ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ ಮೈಸೂರು

ಪ್ರಬುದ್ಧತೆ ತೋರಿಸಿ

ಮಾನ್ಯರೆ,

ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರಿಗೆ 80 ವರ್ಷವಾಯಿತು. ಅದು ಪ್ರಬುದ್ಧತೆಯಿಂದ ಮೆರೆಯುವ ಹಿರಿಯ ಪ್ರಾಯ. ಆದರೆ ಭಾರತದ ಪ್ರಧಾನಿಯವರನ್ನು ವಿಷ ಸರ್ಪಕ್ಕೆ ಹೋಲಿಸಿ ಆ ವಯಸ್ಸಿಗೆ ಇರಬೇಕಾಗಿದ್ದ ಶಾಂತತೆ, ಸಮಚಿತ್ತ ಎಲ್ಲಾ ಗಾಳಿಗೆ ತೂರಿ ಮಾತಾಡಿರುವುದು ಯಾರೂ ಒಪ್ಪುವ ಮಾತಲ್ಲ. ಆದರೆ ದೇಶದ ಪ್ರಧಾನಿಗೆ ಈ ರೀತಿಯ ಹೋಲಿಕೆ ಸಲ್ಲದು. ಸಮಾನಮನಸ್ಕರ ಚಪ್ಪಾಳೆ ಗಿಟ್ಟಿಸಿಕೊಳ್ಳಬಹುದು. ಮಾತುಗಳು ವಯಸ್ಸು, ಹುದ್ದೆಗೆ ಅನುಗುಣವಾಗಿರಬೇಕು. ನಿಂದನೆಯ ಮಾತನಾಡಿ ವಿಷಾದ ಸೂಚಿಸಿದರೆ ಪ್ರಯೋಜನವಿಲ್ಲ. –ಅಕ್ಕಿ ಹೆಬ್ಬಾಳು ವೆಂಕಟೇಶ್, ಮೈಸೂರು

ಆಸ್ತಿ ತೆರಿಗೆ ಪಾವತಿ ಅವಧಿ ವಿಸ್ತರಿಸಿ

ಮಾನ್ಯರೆ,

ಏಪ್ರಿಲ್ ಮಾಹೆಯಲ್ಲಿ ಆಸ್ತಿ ತೆರಿಗೆ ಪಾವತಿ ಮಾಡುವವರಿಗೆ ಶೇ.5 ರಷ್ಟು ರಿಯಾಯಿತಿ ನೀಡುತ್ತಿರುವುದು ಪ್ರಾಮಾಣಿಕ ಹಾಗೂ ನಿಗದಿತ ಸಮಯದಲ್ಲಿ ತೆರಿಗೆ ಪಾವತಿದಾರರಿಗೆ ಉತ್ತೇಜಿಸಿದಂತಾಗಿರುವುದು ಸರಿಯಾಗಿದೆ. ಮೈಸೂರು ನಗರಪಾಲಿಕೆಯಿಂದ ಪ್ರಕಟಣೆಯೊಂದನ್ನು ಹೊರಡಿಸಿ ಏಪ್ರಿಲ್ 30ರವರೆಗೆ ತೆರಿಗೆ ರಿಯಾಯಿತಿಯ ಅವಕಾಶವಿದ್ದು, ಆ ಸಮಯದೊಳಗೆ ಪಾವತಿಸುವಂತೆ ತಿಳಿಸಿರುತ್ತಾರೆ. ಆದರೆ ಈ ಬಾರಿ ಮೇ ತಿಂಗಳಲ್ಲಿ ಚುನಾವಣೆ ಇರುವುದರಿಂದ ಪಾಲಿಕೆ ಕಚೇರಿಗಳಲ್ಲಿ ಸಿಬ್ಬಂದಿಗಳ ಅಲಭ್ಯತೆಯಿಂದಾಗಿ ಕೆಲಸ ಕಾರ್ಯಗಳು ಮಂದಗತಿಯಲ್ಲಿರುತ್ತದೆ.

ತೆರಿಗೆ ಪಾವತಿಯ ಎಸ್‌ಎಎಸ್ ನಮೂನೆ–1 (ನಿಯಮ–7)ರಲ್ಲಿ ಏನಾದರೂ ಮಾರ್ಪಾಡುಗಳಿದ್ದಲ್ಲಿ ಅದನ್ನು ಮಾರ್ಪಡಿಸಿ ತದನಂತರದಲ್ಲಿ ತೆರಿಗೆ ಪಾವತಿಸುವವರಿಗೆ ತೆರಿಗೆಯನ್ನು ಪಾವತಿಸಲಾಗುತ್ತಿಲ್ಲ. ಆದುದರಿಂದ ತೆರಿಗೆ ರಿಯಾಯಿತಿಯನ್ನು ಜೂನ್ 2023 ಅಂತ್ಯದವರೆಗೆ ವಿಸ್ತರಿಸುವುದು ಸೂಕ್ತವಾಗಿದ್ದು, ಇದರಿಂದ ಕ್ರಮಬದ್ಧವಾಗಿ ತೆರಿಗೆ ಪಾವತಿಸುವವರಿಗೆ ಅನುಕೂಲವಾಗುತ್ತದೆ. ಕಳೆದ ಚುನಾವಣೆಯಲ್ಲಿಯೂ ಇದೇ ರೀತಿಯ ಸಂದರ್ಭದಲ್ಲಿ ತೆರಿಗೆ ರಿಯಾಯಿತಿಯನ್ನು ಜೂನ್ ಮಾಹೆಯವರೆಗೂ ವಿಸ್ತರಿಸಿರುವುದನ್ನು ಗಮನಿಸಬಹುದು. ಈ ಹಿನ್ನೆಲೆಯಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ಸಮಯ ವಿಸ್ತರಣೆ ಮಾಡುವಂತೆ ಕೋರಿದೆ.

–ಕೆ.ಎಂ. ನಾಗರಾಜು ವಿಜಯನಗರ 1ನೇ ಹಂತ, ಮೈಸೂರು.



ಪ್ರೊ. ಎ.ವಿ.ನರಸಿಂಹಮೂರ್ತಿ
ಮಾಜಿ ಮುಖ್ಯಸ್ಥರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಶಾಸ್ತ್ರ ವಿಭಾಗ,
ಮೈಸೂರು ವಿಶ್ವವಿದ್ಯಾನಿಲಯ.

ಇತಿಹಾಸದ ಪುಟಗಳು

ತತ್ವಶಾಸ್ತ್ರ ವಿಭಾಗಕ್ಕೆ ಶತಮಾನೋತ್ಸವ ಸಂಭ್ರಮ

ತತ್ವಶಾಸ್ತ್ರವು ಎಲ್ಲ ವಿಷಯಗಳ ತಾಯಿ. ಇದರಲ್ಲಿ ಸೇರಿರದ ವಿಚಾರಗಳಿಲ್ಲ ಹಾಗೂ ವಿಮರ್ಶೆಗೆ ಒಳಪಡದ ಸಂಗತಿಗಳಿಲ್ಲ. ತತ್ವಶಾಸ್ತ್ರದ ವೈಶಿಷ್ಟ್ಯವೆಂದರೆ, ಅದನ್ನು ಬೋಧಿಸಿದವರು, ತಮ್ಮ ಜೀವನದಲ್ಲಿ ಅಳವಡಿಸಿಕೊಂಡವರು ನೂರಾರು ಪಂಡಿತರು. ವೈದಿಕ ಚಿಂತಕರು ಮತ್ತು ಉಪನಿಷತ್ತಿನ ಋಷಿಗಳು ತಮ್ಮ ಜೀವನದಲ್ಲಿ ಎಲ್ಲಾ ತತ್ವಗಳನ್ನೂ ಅಳವಡಿಸಿಕೊಂಡಿದ್ದಾರೆ. ಇವರಲ್ಲದೆ, **ಧರ್ಮಶಾಸ್ತ್ರ ಪಂಡಿತರು, ಬೌದ್ಧರು** ಮತ್ತು **ಜೈನ ತೀರ್ಥಂಕರರು, ಶ್ರೀಕೃಷ್ಣ, ವೇದವ್ಯಾಸರು** (ವೇದಗಳನ್ನು ಸರಿಯಾದ ರೀತಿಯಲ್ಲಿ ಜೋಡಿಸಿದ ಮಹನೀಯರು), **ರಾಮಾನುಜಾಚಾರ್ಯರು, ಮಧ್ವಾಚಾರ್ಯರು** ಹಾಗೂ **ಶಂಕರಾಚಾರ್ಯರು** ಮುಂತಾದವರು ಭಾರತದ ವಿಭಾಗಗಳಿಗೆ ಸೇರಿದವರೇ ಆಗಿದ್ದಾರೆ.

ಈಗ ವಿದೇಶೀಯರನ್ನೂ ಗಮನಿಸಬಹುದು. ಇವರಲ್ಲಿ ಮುಖ್ಯರಾದವರೆಂದರೆ, ಥೇಲ್ಸ್, ಹಿರಾಕ್ಲಿಟಸ್, ಪೈಥಾಗೊರಸ್, ಮಾರ್ಕಸ್ **ಅರೀಲಿಯಸ್ ಸಾಕ್ರಟೀಸ್**, ಪ್ಲೇಟೋ, ಅರಿಸ್ಟಾಟಲ್ ಮುಂತಾದವರು.

ನಮ್ಮ ಕಾಲಕ್ಕೆ ಶ್ರೀರಾಮಕೃಷ್ಣ ಪರಮಹಂಸರವರು. ಒಬ್ಬ ತಂದೆ ಪರಮಹಂಸರನ್ನು ದರ್ಶನ ಮಾಡಿ 'ನನ್ನ ಮಗ ತುಂಬ ಜಿಲೇಬಿ ಮತ್ತು ರಸಗುಲ್ಲ ತಿನ್ನುತ್ತಾನೆ ಎಂದು ತಮ್ಮ ಮಗನ ಬಗ್ಗೆ ದೂರನ್ನು ನೀಡಿದರು. ಆ ತಂದೆಯನ್ನು ಪರಮಹಂಸರು ಕೆಲವು ದಿನಗಳ ನಂತರ ಬನ್ನಿ ಎಂದು ಹೇಳಿ ಕಳುಹಿಸಿದರು. ಪರಮಹಂಸರಿಗೆ ಜಿಲೇಬಿ ಹಾಗೂ ರಸಗುಲ್ಲಗಳನ್ನು ಕಂಡರೆ ಬಹಳ ಇಷ್ಟ. ಇನ್ನೊಬ್ಬರಿಗೆ ಬೋಧಿಸುವುದಕ್ಕೆ ಮುಂಚೆ, ನಾನು (ಪರಮಹಂಸರು) ಈ ಸಿಹಿ ತಿಂಡಿಗಳನ್ನು ತಿನ್ನುವುದನ್ನು ನಿಲ್ಲಿಸಬೇಕು ಎಂದು ಮನಸ್ಸಿನಲ್ಲಿಯೇ ಅಂದುಕೊಂಡರು. ನಿಧಾನವಾಗಿ ಈ ಸಿಹಿ ತಿಂಡಿಗಳ ವ್ಯಾಮೋಹ ಕಡಿಮೆಯಾಯಿತು.

ಈಗ ನನಗೆ ಆ ಬಾಲಕನಿಗೆ ಬುದ್ಧಿ ಹೇಳುವ ಶಕ್ತಿ ಬಂದಿದೆ ಎಂದು ಹೇಳಿ, ಸಿಹಿ ತಿಂಡಿಯಿಂದ ಆಗುವ ತೊಂದರೆಗಳನ್ನು ಅವನಿಗೆ ತಿಳಿಹೇಳಿದರು. ಅಂದಿನಿಂದ ಅವರ ಮಗ ಸಿಹಿ ತಿಂಡಿಯನ್ನು ನಿಧಾನವಾಗಿ ನಿಲ್ಲಿಸಿದನು. ಈ ರೀತಿ ಪರಮಹಂಸರು ನುಡಿದಂತೆ ನಡೆದು ಇತರರಿಗೆ ಮಾದರಿಯಾದರು.

ಸ್ವಾಮಿ ವಿವೇಕಾನಂದರನ್ನು ತೆಗೆದುಕೊಂಡರೆ, ಇವರು ಬಾಸ್ಟನ್ ನಗರದಲ್ಲಿ, ಸಭೆ ಸೇರಿದ್ದ ಅಮೆರಿಕನ್ನರನ್ನು ಅಮೆರಿಕದ ನನ್ನ ನೆಚ್ಚಿನ ಅಣ್ಣ–ತಮ್ಮಂದಿರೇ, ಅಕ್ಕ–ತಂಗಿಯರೇ ಎಂದು ಕರೆದಾಗ, ಇಡೀ ಅಮೆರಿಕನ್ ಜನಗಳು ಕುಣಿದು ಕುಪ್ಪಳಿಸಿದರು. ಏಕೆಂದರೆ ಇದುವರೆಗೆ ಸ್ವಾಮಿ ವಿವೇಕಾನಂದರು ಕರೆದಂತೆ ಯಾರೂ ಸಂಬೋಧಿಸಿರಲಿಲ್ಲ. ವಿವೇಕಾನಂದರು ನಿಮ್ಮ ಕೆಲಸವನ್ನು ನೀವು ನಿರ್ವಂಚನೆಯಿಂದ ಮಾಡಿದರೆ, ಫಲವು ಸಿಕ್ಕೇ ಸಿಗುತ್ತದೆ ಎಂದು ಹೇಳಿದಾಗ ಅಮೆರಿಕನ್ನರಿಗೆ ಸಂತೋಷವಾಯಿತು.


ಇನ್ನು ಸರ್ವಪಲ್ಲಿ ಮತ್ತು ಹಿರಿಯಣ್ಣನವರ ಬಗ್ಗೆ ಹೇಳುವುದಾದರೆ, ಹಿರಿಯಣ್ಣನವರು, ಸುಪ್ರಸಿದ್ಧ ವಿದ್ವಾಂಸರು ಹಾಗೂ ತತ್ವಜ್ಞಾನಿಗಳು. ಇವರು 7–5–1871ರಂದು ಜನಿಸಿದರು. ಬಾಲ್ಯದ ವಿದ್ಯಾಭ್ಯಾಸವನ್ನು ಮೈಸೂರಿನಲ್ಲಿ ಪೂರೈಸಿದರು. ಅನಂತರ ಇವರು ಮದ್ರಾಸಿನ ಕ್ರಿಶ್ಚಿಯನ್ ಕಾಲೇಜಿಗೆ ಸೇರಿ ಬಿ.ಎ. ಮತ್ತು ಎಂ.ಎ. ಪದವಿಗಳನ್ನು ಪಡೆದರು. ಮೈಸೂರಿನ ಗವರ್ನಮೆಂಟ್ ಓರಿಯಂಟಲ್ ಲೈಬ್ರರಿಯಲ್ಲಿ (ಈಗಿನ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್) ಇವರು 1891ರಲ್ಲಿ ಲೈಬ್ರೇರಿಯನ್ ಆದರು. 1892ರಲ್ಲಿ ಸರ್ಕಾರಿ ಕಚೇರಿಯಲ್ಲಿ ಸ್ವಲ್ಪ ಕಾಲ ಕಾರ್ಯ ನಿರ್ವಹಿಸಿದರು. 1893ರಲ್ಲಿ ಚೆನ್ನೈನ ಸೈದಾಪೇಟೆಯಲ್ಲಿದ್ದ ಟೀಚರ್ಸ್ ಕಾನೂನು ಕಾಲೇಜಿನಿಂದ ಎಲ್.ಎಲ್.ಬಿ. ಪದವಿ ಪಡೆದರು. 1896ರಿಂದ 1907ರವರೆಗೆ ಮೈಸೂರಿನ ಗವರ್ನಮೆಂಟ್ ನಾರ್ಮಲ್ ಶಾಲೆಯಲ್ಲಿ ಸಹೋಪಾಧ್ಯಾಯರಾಗಿ ಕೆಲಸ ಮಾಡಿದರು. 1908ರಿಂದ 12ರವರೆಗಿನ ಸಮಯದಲ್ಲಿ ಕನ್ನಡ ಶಿಕ್ಷಣದ ಬಗೆಗೆ ಪುಸ್ತಕವೊಂದನ್ನು ಬರೆದರು. ಅಲ್ಲದೆ ಕನ್ನಡ ಪ್ರಚಾರ ಮತ್ತು ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದವರಲ್ಲಿ ಇವರು ಮುಖ್ಯರಾಗಿದ್ದರು. ಮಾತ್ರವಲ್ಲದೆ, ತತ್ವಶಾಸ್ತ್ರದ ಅಭಿವೃದ್ಧಿಗೆ ಶ್ರಮಿಸಿದರು. 1912ರಲ್ಲಿ ಇವರು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಸಂಸ್ಕೃತ ಅಧ್ಯಾಪಕರಾದರು. 1921ರಲ್ಲಿ ಸ್ವಲ್ಪ ಸಮಯ ಗವರ್ನಮೆಂಟ್ ಓರಿಯಂಟಲ್ ಲೈಬ್ರರಿಯಲ್ಲಿ ಕ್ಯೂರೇಟರ್ ಆಗಿ ಕೆಲಸ ಮಾಡುವ ಅವಕಾಶ ಇವರಿಗೆ ದೊರಕಿತು. ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದ ಸಮಯದಲ್ಲಿ ಸಂಸ್ಕೃತ ಭಾಷೆ ಹಾಗೂ ಸಾಹಿತ್ಯವನ್ನಲ್ಲದೇ ಭಾರತೀಯ ತತ್ವಜ್ಞಾನದ ಸಂಪೂರ್ಣ ಅರ್ಥವನ್ನು ಅರಿತ ಇವರು ತತ್ವಜ್ಞಾನ ಬೋಧನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು.



ರಾಧಾಕೃಷ್ಣನ್



ಎನ್.ಎ.ನಿಕ್ಕಂ



ಸ್ವಾಮಿ ವಿವೇಕಾನಂದ

ರಾಧಾಕೃಷ್ಣನ್ ಮುಂತಾದ ಮಹಾ ಪಂಡಿತರು ಹಿರಿಯಣ್ಣರವರೊಡನೆ ಸ್ನೇಹ ಬೆಳೆಸಿಕೊಂಡರು. ಇವರ (ಹಿರಿಯಣ್ಣ) ಪ್ರಭಾವದಲ್ಲಿ ಒಂದು ಶಿಷ್ಯ ಪರಂಪರೆಯೇ ಬೆಳೆಯಿತು. ವಿದ್ವಾಂಸರ ವಲಯದಲ್ಲಿ **ವಿದ್ವಾಂಸರ ಪರಿಷತ್ತುಗಳು, ಸಮ್ಮೇಳನಗಳು** ಅಧ್ಯಕ್ಷ ಪದವಿಗೆ ಆರಿಸಿ, ತತ್ವಶಾಸ್ತ್ರಜ್ಞರೆಲ್ಲಾ ಸೇರಿ ಹಿರಿಯಣ್ಣನವರನ್ನು ಗೌರವಿಸಿದರು. ಮದರಾಸು ಅಕಾಡೆಮಿಯಿಂದ ಹಿರಿಯಣ್ಣನವರಿಗೆ **ಸಂಸ್ಕೃತ ಸೇವಾಧುರೀಣ** ಎಂಬ ಪ್ರಶಂಸೆಯೂ ತತ್ವಜ್ಞಾನ ಪಂಡಿತರಿಂದ ದೊರೆಯಿತು. ನುಡಿದಂತೆ ನಡೆಯುತ್ತಿದ್ದ ಇವರ ದೊಡ್ಡ ಗುಣಗಳನ್ನು ತತ್ವಜ್ಞಾನಿಗಳು ಮೆಚ್ಚಿಕೊಂಡರು. **ಕರ್ತವ್ಯ ನಿಷ್ಠೆ** ಇವರ ಇನ್ನೊಂದು ಗುಣ. ಇವರ ಅನೇಕ ಶಿಷ್ಯರು ಹಾಗೂ ಅಭಿಮಾನಿಗಳು, ಹಿರಿಯಣ್ಣನವರ ತತ್ವಶಾಸ್ತ್ರ ಜ್ಞಾನ ಹಾಗೂ ಉನ್ನತ ಗುಣಗಳನ್ನು ಗಮನಿಸಿ **ಹಿರಿಯಣ್ಣ ಕಮ್ಮೆಮೋರೇಷನ್ ವಾಲ್ಯೂಮ್** ಹೆಸರಿನ ಗ್ರಂಥವನ್ನು 1952ರಲ್ಲಿ ಪ್ರಕಟಿಸಿದರು.

ಹಿರಿಯಣ್ಣನವರು ಪ್ರಕಟಿಸಿದ ಗ್ರಂಥಗಳಲ್ಲಿ ಮುಖ್ಯವಾದುವೆಂದರೆ **ಔಟ್ ಲೈನ್ಸ್ ಆಫ್ ಇಂಡಿಯನ್ ಫಿಲಾಸಫಿ, ಎಸೆನ್ಷಿಯಲ್ಸ್ ಆಫ್ ಇಂಡಿಯನ್ ಫಿಲಾಸಫಿ, ಪಾಪ್ಯುಲರ್ ಎಸ್ಸೇಸ್ ಇನ್ ಇಂಡಿಯನ್ ಫಿಲಾಸಫಿ, ದಿ ಕ್ವೆಸ್ಟ್ ಆಫ್ಟರ್ ಪರ್ಫೆಕ್ಷನ್, ಆರ್ಟ್ ಎಕ್ಸ್‌ಪೀರಿಯನ್ಸ್, ಸಂಸ್ಕೃತ ಸ್ಟಡೀಸ್, ಇಂಡಿಯನ್ ಫಿಲಸಾಫಿಕಲ್ ಸ್ಟಡೀಸ್**, ಸಂಪುಟ 1, **ದಿ ಮಿಷನ್ ಆಫ್ ಫಿಲಾಸಫಿ**, ರೆವ್ಯೂಸ್, ಇಲ್ಲಿನ ಮೊದಲ ಎಂಟು ಗ್ರಂಥಗಳಲ್ಲಿ **ಭಾರತೀಯ ತತ್ವಜ್ಞಾನದ ಪ್ರಾರಂಭ** ಹಾಗೂ ಬೆಳವಣಿಗೆಗಳೂ ಮುಖ್ಯವಾದವುಗಳು.

ಇವರು ಬರೆದ ಗ್ರಂಥಗಳಲ್ಲಿ ವಿವಿಧ ಸಮಸ್ಯೆ ಹಾಗೂ ಸಿದ್ಧಾಂತಗಳ ವಿವರಣೆಯೂ, ಸಂಸ್ಕೃತ ಸಾಹಿತ್ಯದ ಪ್ರಮುಖ ಪ್ರವೃತ್ತಿಗಳೂ ಹಾಗೂ **ಸೌಂದರ್ಯ ಮೀಮಾಂಸೆ**ಗಳೂ ಉತ್ತಮವಾಗಿ ನಿರೂಪಿತವಾಗಿವೆ.

ಹಿರಿಯಣ್ಣನವರು ಇಂಗ್ಲಿಷ್ ಅನುವಾದಗಳಲ್ಲಿ ಕೊಟ್ಟಿರುವ ಗ್ರಂಥಗಳಲ್ಲಿ ಮುಖ್ಯವಾದವುಗಳೆಂದರೆ **ಈಶಾವಾಸ್ಯೋಪನಿಷದ್, ಕೇನೋಪನಿಷದ್, ಕಾಠಕೋಪನಿಷದ್** ಮುಂತಾದವು ಇಂಗ್ಲಿಷಿನ ಟಿಪ್ಪಣಿಗಳೊಂದಿಗೆ ಇವೆ. ಇವರ ಇತರ ಗ್ರಂಥಗಳೆಂದರೆ, ಸುರೇಶ್ವರಾಚಾರ್ಯರ **ನೈಷ್ಕರ್ಮ ಸಿದ್ಧಿ**, ಸದಾನಂದರ **ಇಷ್ಟ ಸಿದ್ಧಿ**, (ವಿಮುಕ್ತಾತ್ಮ) ಇಷ್ಟ ಸಿದ್ಧಿ, ಈ ಗ್ರಂಥಗಳನ್ನಲ್ಲದೆ ಹಿರಿಯಣ್ಣನವರು ಇನ್ನೂ ಅನೇಕ ಲೇಖನಗಳನ್ನು ಬರೆದಿದ್ದಾರೆ.

ಹಿರಿಯಣ್ಣನವರಿಂದ ಸಂಪಾದಿತ (ಎಡಿಟೆಡ್) ಗ್ರಂಥಗಳು ಭಾರತೀಯ ತತ್ವಜ್ಞಾನದ ಹಾಗೂ ಅಮೂಲ್ಯವಾದ ವಿಚಾರಗಳಿಂದ ತುಂಬಿವೆ. ಇಷ್ಟೇ ಅಲ್ಲದೆ ಇವರು ಕಾಳಿದಾಸ ಹಾಗೂ ಭವಭೂತಿ ಅಲಂಕಾರ ಶಾಸ್ತ್ರ ವಿಷಯಗಳು ಸಂದರ್ಭಕ್ಕೆ ತಕ್ಕಂತೆ ಇವೆ ಎಂದು ತೋರಿಸಿಕೊಟ್ಟಿದ್ದಾರೆ. ಹೀಗೆ ಭಾರತೀಯ ತತ್ವಜ್ಞಾನಿಗಳು ಮಾಡಿರುವ ಉತ್ತಮ ಕಾರ್ಯಗಳು ವಿದ್ವತ್ ಪಂಡಿತರಿಂದ ಹೊಗಳಲ್ಪಟ್ಟಿವೆ. ರಸ ಸ್ವರೂಪವನ್ನು ವಿವರಿಸುವುದರ ಜೊತೆಗೆ ರಸಾನುಭವಕ್ಕೂ ಬ್ರಹ್ಮಾನಂದಕ್ಕೂ ಇರುವ ಸಾಮರಸ್ಯವನ್ನು ಹಿರಿಯಣ್ಣನವರು ತೋರಿಸಿಕೊಟ್ಟಿದ್ದಾರೆ.

ಹೀಗೆ ಸದ್ಗುಣ ನಿಷ್ಠೆ, ಧ್ಯೇಯ ಪರಿಪಾಲನೆ, ಗ್ರಂಥಗಳ ರಚನೆ ಮುಂತಾದ ಸಾಧನೆಗಳಿಂದ ಹಿರಿಯಣ್ಣನವರು ತಮ್ಮ ವ್ಯಕ್ತಿತ್ವದ ಶ್ರೇಷ್ಠತೆಯನ್ನು ರೂಪಿಸಿಕೊಂಡಿದ್ದಾರೆ. ಭಾರತೀಯ ದಾರ್ಶನಿಕ ಜೀವನದ ಮಹತ್ವವನ್ನರಿತು ಅದಕ್ಕೆ ಸಂಬಂಧಪಟ್ಟ ಉಪದೇಶಗಳನ್ನು ಆಚರಣೆಗೆ ಇವರು ತಂದಿದ್ದಾರೆ. ಇವರ ಜೀವನವು ಸಂಪೂರ್ಣತೆ ಹಾಗೂ ಸಾರ್ಥಕತೆಗಳಿಗೆ ಆದರ್ಶವಾಗಿವೆ. ಹಿರಿಯಣ್ಣನವರು 19–7–1950ರಂದು ನಿಧನರಾದರು.

ಇವರ ನಿಧನಾ ನಂತರ ಅನೇಕ ತತ್ವಶಾಸ್ತ್ರಜ್ಞರ ಸಭೆಗಳು ನಡೆದವು. ಇವರ ನಿಧನಕ್ಕೆ ಸಂತಾಪ ಸೂಚಕ ಸಭೆಗಳು ನಡೆದವು. ಇವರು ತತ್ವಶಾಸ್ತ್ರಕ್ಕೆ ನೀಡಿರುವ ಕೊಡುಗೆಗಳನ್ನು ಹಾಗೂ ಇವರು ಮಾಡಬೇಕೆಂದು ಭಾವಿಸಿದ್ದ ಸಂಶೋಧನೆಗಳನ್ನು ಮುಂದಿನ ಪೀಳಿಗೆಯ ತತ್ವಶಾಸ್ತ್ರ ಸಂಶೋಧಕರು ಮಾಡಲಿ ಎಂದು ಎಲ್ಲರೂ ಹಾರೈಸಿದರು.

ಈ ಕೆಲಸ ಪರಿಪೂರ್ಣವಾಗಿ ಪೂರ್ಣಗೊಳಿಸುವುದೇ ತತ್ವಶಾಸ್ತ್ರಜ್ಞರು ಇವರಿಗೆ ನೀಡಬಹುದಾದ ನಿಜವಾದ ಶ್ರದ್ಧಾಂಜಲಿ!

ಈ ಶತಮಾನೋತ್ಸವ ಸಂಪುಟದಲ್ಲಿ ಸುಮಾರು ಐವತ್ತು ಲೇಖನಗಳಿವೆ. ಕೆಲವು ಲೇಖನಗಳು ಕನ್ನಡದಲ್ಲಿದ್ದರೆ ಮತ್ತೆ ಕೆಲವು ಇಂಗ್ಲಿಷಿನಲ್ಲಿವೆ. ಈ ಎಲ್ಲಾ ವಿದ್ವಾಂಸರ ಲೇಖನಗಳಿಂದ ಹಾಗೂ ವಿಮರ್ಶೆಗಳಿಂದ, ಮೈಸೂರಿನ ತತ್ವಶಾಸ್ತ್ರ ಪರಂಪರೆಯು ಸಾಮಾನ್ಯ ಜನಗಳಿಗೂ ಹಾಗೂ ತತ್ವಶಾಸ್ತ್ರ ಪಂಡಿತರ ಗಮನವನ್ನು ಆಕರ್ಷಿಸುತ್ತದೆ ಹಾಗೂ ತತ್ವಶಾಸ್ತ್ರವನ್ನು ಬೋಧಿಸುವ ವಿಶ್ವವಿದ್ಯಾನಿಲಯಗಳ ವಿದ್ವಾಂಸರನ್ನು ಆಕರ್ಷಿಸುವುದಲ್ಲದೇ, ಇಡೀ ರಾಷ್ಟ್ರದ ಗಮನವನ್ನು ಸೆಳೆಯುತ್ತದೆ.

ಮೈಸೂರು ವಿಶ್ವವಿದ್ಯಾನಿಲಯದ ತತ್ವಶಾಸ್ತ್ರ ವಿಭಾಗವು ಪ್ರಖ್ಯಾತ ವಿದ್ವನ್ಮಣಿಗಳನ್ನು ಜಗತ್ತಿಗೆ ನೀಡಿದೆ. ಅಂತಹ ವಿದ್ವಾಂಸರಲ್ಲಿ ಕೆಲವರನ್ನು ಗಮನಿಸಬಹುದು. ಭಾರತದ ರಾಷ್ಟ್ರಪತಿಗಳಾಗಿದ್ದ **ಸರ್ವಪಲ್ಲಿ ರಾಧಾಕೃಷ್ಣನ್** ಹಾಗೂ ಋಷಿ ಸಮಾನರಾದ ಎಂ.ಹಿರಿಯಣ್ಣನವರು ಹಾಗೂ ಒಂಭತ್ತು ವರ್ಷಗಳ ಕಾಲ ಕುಲಪತಿಗಳಾಗಿದ್ದ ಆಚಾರ್ಯ **ಬ್ರಜೇಂದ್ರನಾಥ ಸೀಲ್**, ಮಾನವತೆಯ ಅವತಾರವೆಂದೆನಿಸಿದ್ದ ಎ.ಆರ್.ವಾಡಿಯಾ, ಎಂ.ಯಮುನಾಚಾರ್ಯರು, ಶ್ರೀನಿವಾಸ ಅಯ್ಯಂಗಾರರು, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಚಾರೋಪನ್ಯಾಸ ಮಾಲೆಯನ್ನು ಆರಂಭಿಸಿದ ಹನುಮಂತರಾಯರು, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ ಎನ್.ಎ.ನಿಕ್ಕಂ ಹಾಗೂ ಆಧುನಿಕ ವಾಚಸ್ಪತಿ ಮಿಶ್ರರೆನಿಸಿದ್ದ ರಾಘವಾಚಾರ್ಯರು ಮುಂತಾದವರು ತತ್ವಶಾಸ್ತ್ರದ ಉತ್ತಮ ಚಿಂತಕರೂ ಆಗಿದ್ದಾರೆ. ಇವರುಗಳ ನಿಸ್ವಾರ್ಥ ಸೇವೆಯು **ತತ್ವಶಾಸ್ತ್ರ** ಎಂಬ ಗ್ರಂಥಕ್ಕೆ ಸ್ಫೂರ್ತಿಯನ್ನು ನೀಡಿವೆ ಮತ್ತು ಇತರರನ್ನು ತತ್ವಶಾಸ್ತ್ರದ ಚಿಂತನೆಗಳನ್ನು ತಮ್ಮ ಜೀವನದಲ್ಲಿ ಅಳವಡಿಸುವಂತೆ ಮಾಡಿವೆ ಎಂದರೆ ಅತಿಶಯೋಕ್ತಿಯಲ್ಲ.

ಇಂತಹ ಗ್ರಂಥದ ರಚನಾತ್ಮಕ ಸಂಪಾದಕತ್ವವನ್ನು ಮೆಚ್ಚಿಕೊಂಡ ಸಾಮಾನ್ಯ ಜನಗಳು ಹಾಗೂ ಪಂಡಿತರು, ಈ ಪುಸ್ತಕವನ್ನು ಬಹಳವಾಗಿ ಶ್ಲಾಘಿಸಿದ್ದಾರೆ. ಈ ಪುಸ್ತಕದಲ್ಲಿರುವ ಲೇಖನಗಳನ್ನು ಬರೆದ ವಿದ್ವಾಂಸರಿಗೆ ಇದೊಂದು ಗೌರವವೂ ಹೌದು ಹಾಗೂ ಮಹತ್ಸಾಧನೆಯೂ ಆಗಿದೆ. ಈ ಎಲ್ಲಾ ವಿದ್ವಾಂಸರೂ ತತ್ವಶಾಸ್ತ್ರದ ವಿದ್ವತ್ತನ್ನು ವಿಸ್ತರಿಸುವ ಪ್ರಯತ್ನವನ್ನು ಈ ಗ್ರಂಥದಲ್ಲಿ ಮಾಡಿದ್ದಾರೆ. ಈ ಎಲ್ಲಾ ಲೇಖಕರಿಗೂ ಪ್ರತಿಯೊಬ್ಬರೂ ಚಿರಋಣಿಗಳಾಗಿರಲೇಬೇಕು.

ಈ ಹಿಂದೆ ಮೈಸೂರಿನ ತತ್ವಶಾಸ್ತ್ರ ವಿಭಾಗವನ್ನು ಆರಂಭಿಸಿ, ಅದನ್ನು ಬೆಳೆಸಿ ಮುನ್ನಡೆಸಿದ ಎಲ್ಲಾ ಪೂಜ್ಯ ಗುರುಗಳನ್ನು ಎಲ್ಲಾ ತತ್ವಶಾಸ್ತ್ರಜ್ಞರು ಹಾಗೂ ಸಾಮಾನ್ಯರು ಅಭಿನಂದಿಸಲೇಬೇಕು ಹಾಗೂ ಪೂಜ್ಯ ಗುರುಗಳಿಗೆ ಕೃತಜ್ಞರಾಗಿರಬೇಕು. ಈ ಪುಸ್ತಕಗಳಲ್ಲಿರುವ ಲೇಖನಗಳನ್ನು ಕೆಲವರು ಬರೆದಿದ್ದಾರೆ ಮತ್ತು ಕೆಲವರು ಬೇರೆಯವರಿಂದ ಲೇಖನಗಳನ್ನು ಬರೆಸಿದ್ದಾರೆ ಹಾಗೂ ಬರೆಯುವಂತೆ ಪ್ರೋತ್ಸಾಹಿಸಿದ್ದಾರೆ.

ಭಾರತೀಯ ಪರಂಪರೆಯಲ್ಲಿ **ಅದ್ವೈತ, ವಿಶಿಷ್ಟಾದ್ವೈತ** ಮತ್ತು **ಮಧ್ವ** ಸಿದ್ಧಾಂತಗಳಿವೆ. ಈ ಮೂರು ಸಿದ್ಧಾಂತಗಳು ಮೇಲ್ನೋಟಕ್ಕೆ ಭಿನ್ನವೆಂದು ಕಂಡರೂ, ಅವುಗಳು ಭಿನ್ನವಾಗಿಲ್ಲ. ಏಕೆಂದರೆ, ಭಾರತೀಯ ಪರಂಪರೆಯು ಪರಮಾತ್ಮನು ಒಬ್ಬನೇ ಎಂದು ಸಾರುತ್ತಿವೆ. ಈ ಸಾಮರಸ್ಯ ತತ್ವವನ್ನು ಅರ್ಥ ಮಾಡಿಕೊಂಡರೆ ಯಾರಲ್ಲಿಯೂ ಜಗಳವಿರುವುದಿಲ್ಲ ಹಾಗೂ ಪರಮಾತ್ಮನಲ್ಲಿ ಗೌರವ ಮೂಡುತ್ತದೆ.

ತತ್ವಶಾಸ್ತ್ರದ ಶತಮಾನೋತ್ಸವದ ಭಾಷೆಯು ಸರಳವಾಗಿದೆ ಹಾಗೂ ಎಲ್ಲರನ್ನೂ ಅಯಸ್ಕಾಂತದಂತೆ ಆಕರ್ಷಿಸುತ್ತದೆ. ಶೇಷಗಿರಿರಾವ್ ಅವರ ನಿರಂತರ ಶ್ರಮದಿಂದ ಈ ಗ್ರಂಥವು ಪ್ರಕಾಶಿಸಲ್ಪಟ್ಟಿದೆ. ಒಟ್ಟಿನಲ್ಲಿ ಎಲ್ಲಾ ಲೇಖಕರ **ತಾಳ್ಮೆ, ಹೃದಯವಂತಿಕೆಗೆ** ಈ ಗ್ರಂಥ ಸಾಕ್ಷಿಯಾಗಿದೆ. ಕೊನೆಯದಾಗಿ ಎಲ್ಲಾ ಲೇಖಕರನ್ನೂ ಹಾಗೂ ವಿಮರ್ಶಕರನ್ನು ಯಾರೂ ಮರೆಯುವಂತಿಲ್ಲ.

ಈ ಎಲ್ಲ ಲೇಖನಗಳು ತತ್ವಶಾಸ್ತ್ರದ ಕೊಡುಗೆಗಳನ್ನು ವಿಸ್ತಾರವಾಗಿ ಚರ್ಚಿಸಿವೆ. ಅದೇ ಈ ಗ್ರಂಥದ ಉಪಯೋಗ ಹಾಗೂ ಹೆಚ್ಚಳವೂ ಹೌದು. ಕೊನೆಗೆ ಶ್ರೇಷ್ಠ ವಿದ್ವಂಸರಾದ ಶೇಷಗಿರಿರಾಯರಿಗೆ ಎಲ್ಲಾ ತತ್ವಶಾಸ್ತ್ರಜ್ಞರ ವಂದನೆಗಳೂ ಸಲ್ಲಬೇಕು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಏರ್ಪಡಿಸಿದ್ದ ಈ ಸಮ್ಮೇಳನದಲ್ಲಿ ಪ್ರಸಕ್ತ ಲೇಖಕನೂ ಭಾಗವಹಿಸಿದ್ದನು. ಆದರೆ ಹೆಚ್ಚಿನ ವಿವರಗಳಿಗಾಗಿ ಪ್ರಸಕ್ತ ಲೇಖಕನು ಕನ್ನಡ ವಿಶ್ವಕೋಶದ ಹದಿನಾಲ್ಕು ಸಂಪುಟದ ಪ್ರಧಾನ ಸಂಪಾದಕರಿಗೆ ಕೃತಜ್ಞನಾಗಿದ್ದಾನೆ.

ಕಾಂಗ್ರೆಸ್ 141 ಕ್ಷೇತ್ರಗಳಲ್ಲಿ ಗೆಲುವು ಖಚಿತ

- ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅತೀವ ವಿಶ್ವಾಸ
- ನನ್ನ-ಸಿದ್ದರಾಮಯ್ಯರ ನಡುವೆ ಭಿನ್ನಾಭಿಪ್ರಾಯವಿಲ್ಲ

ಬೆಂಗಳೂರು, ಏ. 29 (ಕೆಎಂಶಿ)– ವಿಧಾನಸಭೆ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ನನ್ನ ನಡುವೆ ಯಾವುದೇ ಭಿನ್ನಾಭಿಪ್ರಾಯ ಇಲ್ಲ ಎಂದು ಪುನರುಚ್ಚರಿಸಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಪ್ರಸಕ್ತ ಚುನಾವಣೆಯಲ್ಲಿ 141 ಕ್ಷೇತ್ರಗಳಲ್ಲಿ ನಾವು ಗೆದ್ದು, ಅಧಿಕಾರದ ಚುಕ್ಕಾಣಿ ಹಿಡಿಯುತ್ತೇವೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಇದುವರೆಗೂ ಒಂಭತ್ತು ಚುನಾವಣೆಯನ್ನು ಎದುರಿಸಿ, ಎಂಟರಲ್ಲಿ ಜಯಗಳಿಸಿ, ಒಂದರಲ್ಲಿ ಸೋತಿದ್ದೇನೆ. ನನ್ನ ಸುದೀರ್ಘ ರಾಜಕೀಯ ಮತ್ತು ಚುನಾವಣೆಯ ಅನುಭವದ ಆಧಾರದ ಮೇಲೆ ಪಕ್ಷ ಇಷ್ಟು ಕ್ಷೇತ್ರಗಳಲ್ಲಿ ಜಯಗಳಿಸುತ್ತದೆ ಎಂದು ಹೇಳುತ್ತಿದ್ದೇನೆ. ರಾಜ್ಯ ನಾಯಕರಲ್ಲಿ ಗೊಂದಲ ಮತ್ತು ಭಿನ್ನಾಭಿಪ್ರಾಯವಿದ್ದರೆ, ನಾವು ಇಷ್ಟು ಕ್ಷೇತ್ರಗಳಲ್ಲಿ ಗೆಲುವು ಸಾಧಿಸುತ್ತೇವೆ ಎಂದು ವಿಶ್ವಾಸದಿಂದ ಹೇಳಲು ಆಗುತ್ತಿರಲಿಲ್ಲ. ಎಲ್ಲರಿಗೂ ಅಧಿಕಾರದ ಆಸೆ ಇರುತ್ತದೆ. ನನಗೂ ಇದೆ. ಅದರಲ್ಲಿ ತಪ್ಪೇನಿಲ್ಲ. ಪಕ್ಷ ಅಧಿಕಾರಕ್ಕೆ ಬಂದ ನಂತರ ಸರ್ಕಾರದ ನಾಯಕತ್ವ ಯಾರು ವಹಿಸಿಕೊಳ್ಳ



ಬೇಕೆಂಬುದರ ಬಗ್ಗೆ ವರಿಷ್ಠರು ನಿರ್ಧಾರ ಕೈಗೊಳ್ಳುತ್ತಾರೆ. ಇಲ್ಲಿ ನಮ್ಮ ನಿರ್ಧಾರ ಏನೂ ಇಲ್ಲ ಎಂದರು.

ರಾಷ್ಟ್ರೀಯ ಸುದ್ದಿ ಸಂಸ್ಥೆಯೊಂದಕ್ಕೆ ಅವರು ನೀಡಿರುವ ಸಂದರ್ಶನದಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿಯನ್ನು ಕಟುವಾಗಿ ಟೀಕಿಸಿರುವುದಲ್ಲದೆ, ಚುನಾವಣಾ ಸಂದರ್ಭದಲ್ಲಿ ಬಿಜೆಪಿ ನೀಡಿರುವ ಯಾವ ಭರವಸೆಯನ್ನು ಇದುವರೆಗೂ ಈಡೇರಿಸಿಲ್ಲ. ನಾವು ಮಾಡದ್ದನ್ನು ಕಾಂಗ್ರೆಸ್ ಮಾಡಲು ಸಾಧ್ಯವೇ ಎಂಬ ಭ್ರಮೆಯಲ್ಲಿ ನಮ್ಮ ಗ್ಯಾರಂಟಿಗಳ ಬಗ್ಗೆ ಪ್ರಧಾನಿ ನರೇಂದ್ರ ಮೋದಿಯವರು ಕುಹಕದಿಂದ ಮಾತನಾಡಿದ್ದಾರೆ ಎಂದರು.

ನಾವು ಜನತೆಗೆ ನೀಡಿರುವ ಭರವಸೆಗಳನ್ನು ಯಾವ ರೀತಿ ಈಡೇರಿಸಬೇಕು ಮತ್ತು ಅದಕ್ಕೆ ಎಲ್ಲಿಂದ ಸಂಪನ್ಮೂಲ ತರಬೇಕೆಂಬ ಎಲ್ಲಾ ಮಾಹಿತಿಗಳನ್ನಾಧರಿಸಿ, ಐದು ಗ್ಯಾರಂಟಿಗಳನ್ನು ಮತದಾರರ ಮುಂದಿಟ್ಟಿದ್ದೇವೆ. ನಾವು ನೀಡಿರುವ ಭರವಸೆಗಳು ಬಿಜೆಪಿಗೆ ಸಹಿಸಿಕೊಳ್ಳಲಾಗುತ್ತಿಲ್ಲ. ರಾಜ್ಯದ ನಾಯಕರು ಈ ಬಗ್ಗೆ ಚಕಾರವೆತ್ತದೆ, ಪ್ರಧಾನಿ ಮೂಲಕವೇ ನಮ್ಮ ಗ್ಯಾರಂಟಿಗಳ ಬಗ್ಗೆ ಟೀಕೆ ಮಾಡಿಸಿದ್ದಾರೆ. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಎಲ್ಲಾ ಹಂತದಲ್ಲೂ ಭ್ರಷ್ಟಾಚಾರ ನಡೆಸಿ, ಆಡಳಿತ ನೆಲಕಚ್ಚಿದೆ. ಅಧಿಕಾರಕ್ಕೆ ಬಂದವರು ಇದನ್ನು ಸರಿಪಡಿಸಲೇ ಒಂದಷ್ಟು ಸಮಯ ಬೇಕಾಗುತ್ತದೆ. ಇಂತಹವರಿಗೆ ಜನತೆ ಮತ್ತೆ ಅಧಿಕಾರ ನೀಡಬಾರದೆಂದು ಮನವಿ ಮಾಡಿದ್ದಾರೆ.

ಟಿ.ಕಾಟೂರಲ್ಲಿ ಕಾಂಗ್ರೆಸ್ ಸೇರ್ಪಡೆ



ಮೈಸೂರು, ಏ.29– ಚಾಮುಂಡೇಶ್ವರಿ ಕ್ಷೇತ್ರದ ಟಿ.ಕಾಟೂರು ಗ್ರಾಮದಲ್ಲಿ ಹಲವು ಯುವಕರು ಕಾಂಗ್ರೆಸ್ ಅಭ್ಯರ್ಥಿ ಮಾವಿನಹಳ್ಳಿ ಸಿದ್ದೇಗೌಡರ ಪುತ್ರ ಸಂದೀಪ್‌ಗೌಡ ಸಮ್ಮುಖದಲ್ಲಿ ಜೆಡಿಎಸ್ ತೊರೆದು ಕಾಂಗ್ರೆಸ್ ಪಕ್ಷ ಸೇರಿದರು.

ಈ ಸಂದರ್ಭದಲ್ಲಿ ಉದ್ಬೂರು ಗ್ರಾಪಂ ಅಧ್ಯಕ್ಷ ಕೃಷ್ಣ, ಟಿ.ಕಾಟೂರು ಗ್ರಾ.ಪಂ. ಸದಸ್ಯರಾದ ದೇವರಾಜ್ ಕಾಟೂರು, ಪುಟ್ಟಸ್ವಾಮಿ, ಕೆ.ಸಿ.ಚಿಕ್ಕಣ್ಣ, ಸಿ.ಸ್ವಾಮಿ ಮಾಜಿ ಅಧ್ಯಕ್ಷ ಕೇಶವಮೂರ್ತಿ, ಮಾಜಿ ಸದಸ್ಯರಾದ ಗೋವಿಂದು, ಜೆ.ಮರುಚ್ಚನಾಯಕ, ಸಿ.ಶಿವಮೂರ್ತಿ, ಮರಿಯಪ್ಪ, ಎಸ್.ಸಿದ್ದರಾಜು, ಹೆಚ್.ರಾಜು, ಸ್ವಾಮಿಯಣ್ಣ, ಮಹಾಲಿಂಗನಾಯಕ, ಆರ್.ಗೋವಿಂದ, ಸ್ವಾಮಿನಾಯಕ, ಹನುಮನಾಯ್ಕ, ಜವರನಾಯಕ, ಸಣ್ಣನಾಯಕ, ನಾಗೇಂದ್ರ, ಸುತ್ತೂರು ನಾಗರಾಜು, ವೆಂಕಟಶೆಟ್ಟಿ, ಪಾಂಡು, ಮಹೇಶ್, ಕರಿಮಾದನಾಯಕ, ಜವರನಾಯಕ, ಸ್ವಾಮಿನಾಯಕ, ಬಸವರಾಜು, ಸಿದ್ದರಾಜು, ನಾಗರಾಜು, ಚಂದ್ರು, ರಾಜು ಸೇರಿದಂತೆ ಇನ್ನೂ ಮುಂತಾದವರು ಹಾಜರಿದ್ದರು.

ನಾಳೆಯಿಂದ ಯೋಗಾಸನ, ಧ್ಯಾನ ತರಬೇತಿ

ಮೈಸೂರು,ಏ.29–ಶ್ರೀ ವೇದವ್ಯಾಸ ಯೋಗ ಪ್ರತಿಷ್ಠಾನದಿಂದ ಯೋಗಾಸನ ಹಾಗೂ ಧ್ಯಾನ ತರಬೇತಿಯು ಮೇ 1ರಿಂದ ಬೆಳಗ್ಗೆ 5.45ರಿಂದ 6.45ರವರೆಗೆ 37/1, ಮಹಾಮಾಯಾ, ಬಾಲಕೃಷ್ಣರಾವ್ ರಸ್ತೆ, ಬಲ್ಲಾಳ್ ಸರ್ಕಲ್, ಚಾಮರಾಜಪುರಂನಲ್ಲಿ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 76760 35002 ಸಂಪರ್ಕಿಸಬಹುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com



ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಮೈಸೂರಿನ ಸುತ್ತೂರು ಮಠಕ್ಕೆ ಭೇಟಿ ನೀಡಿ, ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಆಶೀರ್ವಾದ ಪಡೆದರು.

ಸುದ್ದಿವಾಹಿನಿಗೆ 20 ಕೋಟಿ ಕೊಟ್ಟರೆ ಜೆಡಿಎಸ್ ಸ್ಥಾನ 129ಕ್ಕೇರುತ್ತೆ: ಹೆಚ್‌ಡಿಕೆ



ಮಾಲೂರು (ಕೋಲಾರ ಜಿಲ್ಲೆ): ಕೆಲ ಮಾಧ್ಯಮದವರು ಸಮೀಕ್ಷೆ ನಡೆಸಿ ಈ ಬಾರಿ ಜೆಡಿಎಸ್‌ಗೆ 29 ಸೀಟು ಬರಲಿದೆ ಎನ್ನುತ್ತಿದ್ದಾರೆ. ನಾನೂ ಖಾಸಗಿಯಾಗಿ ಸಮೀಕ್ಷೆ ನಡೆಸಿ ಯಾವುದಾದರೂ ಸುದ್ದಿ ವಾಹಿನಿಗೆ ರೂ. 10 ಕೋಟಿ, ರೂ. 20 ಕೋಟಿ ನೀಡಿದರೆ 29 ಸ್ಥಾನ ಇದ್ದದ್ದು ನಾಳೆ 129 ಆಗುತ್ತದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಆರೋಪಿಸಿದರು.

ಪಟ್ಟಣದಲ್ಲಿ ಶನಿವಾರ ಜೆಡಿಎಸ್ ಸಮಾವೇಶ ಉದ್ದೇಶಿಸಿ ಮಾತನಾಡಿ, ಸಮೀಕ್ಷೆ ನಂಬಬೇಡಿ. ಜನಬಲ ಇದ್ದರೂ ನನಗೆ ಹಣದ ಕೊರತೆ ಇದೆ. ಬಿಜೆಪಿ, ಕಾಂಗ್ರೆಸ್ ರೀತಿ ಕಮಿಷನ್ ಪಡೆದಿದ್ದರೆ ಇವತ್ತು ದುಡ್ಡು ಚೆಲ್ಲಿ ಮತ ಪಡೆಯಬಹುದಿತ್ತು. ಆದರೆ, ಅಂಥ ಕುಟುಂಬದಿಂದ ನಾನು ಬಂದಿಲ್ಲ. ಭಿಕ್ಷೆ ಎತ್ತಿ ಚುನಾವಣೆ ಎದುರಿಸಬೇಕಾಗಿದೆ ಎಂದರು. ಬಿಜೆಪಿ ಹಾಗೂ ಕಾಂಗ್ರೆಸ್‌ನ ಉತ್ತರ ಭಾರತದ ನಾಯಕರು ಈಗ ಕರ್ನಾಟಕ ಹಾಗೂ ಕನ್ನಡಿಗರನ್ನು ನೆನಪಿಸಿಕೊಂಡು ಬರುತ್ತಿದ್ದಾರೆ. ಮತ ಕೇಳಿ ವಾಪಸ್ ಹೋಗುತ್ತಿದ್ದಾರೆ ಎಂದು ಹರಿಹಾಯ್ದರು.

ಪ್ರಧಾನಿ ಮೋದಿ ರಾಜ್ಯದಲ್ಲಿ ಪ್ರವಾಹ ಉಂಟಾದಾಗ, ಕೋಲಾರದಲ್ಲಿ ಮಾವಿನ ಬೆಳೆ ಕುಸಿದಾಗ ಬರಲಿಲ್ಲ. ಕೋಲಾರ ಜನರಿಗೆ ಅವಶ್ಯವಾಗಿ ಬೇಕಿರುವ ನೀರಾವರಿ ಸೌಲಭ ಕೊಡಲು ಬರಲಿಲ್ಲ. ಈಗ ಎಡಗೈನಲ್ಲಿ ಟಾಟಾ ಮಾಡಿ ಬಿಜೆಪಿ ಅಭ್ಯರ್ಥಿ ಗೆಲ್ಲಿಸಿ ಎಂದು ಮನವಿ ಮಾಡಲು ಕೋಲಾರಕ್ಕೆ ಭಾನುವಾರ ಭೇಟಿ ನೀಡುತ್ತಿದ್ದಾರೆ ಎಂದು ಟೀಕಿಸಿದರು.

ಕಾಂಗ್ರೆಸ್, ಬಿಜೆಪಿಗೆ ಮತ ಹಾಕಿದರೆ ದೆಹಲಿಯಿಂದ ಕನ್ನಡಿಗರ ಆಡಳಿತ ನಡೆಯುತ್ತದೆ. ದೆಹಲಿಯಿಂದ ಬರುವ ಸೂಚನೆಗೆ ಕಾಯಬೇಕಾಗುತ್ತದೆ. ಆದರೆ, ಜೆಡಿಎಸ್ ಆಡಳಿತ ರಾಜ್ಯದ ಹಳ್ಳಿಗಳಿಂದ ನಡೆಯುತ್ತದೆ. ತಮಗೆ ಯಾವ ರೀತಿ ಆಡಳಿತ ಬೇಕು ತೀರ್ಮಾನಿಸಿ ಎಂದರು.

ಕೋಲಾರದಲ್ಲಿ ಕಾಂಗ್ರೆಸ್ ಪಕ್ಷವು ಮತ ಪಡೆಯಲು ಡಿಸಿಸಿ ಬ್ಯಾಂಕ್ ದುರುಪಯೋಗಪಡಿಸಿಕೊಂಡಿದೆ. ಸ್ತ್ರೀಶಕ್ತಿ ಸಂಘಗಳಿಗೆ ಸಾಲ ನೀಡಿದ್ದು, ಆ ಸಾಲ ತೀರಿಸಲು ಸಾಧ್ಯವಾಗಿಲ್ಲ. ಹೀಗಾಗಿ, ನಮ್ಮ ಸರ್ಕಾರ ಬಂದ ಕೂಡಲೇ ಸ್ತ್ರೀಶಕ್ತಿ ಸ್ವಸಹಾಯ ಸಂಘಗಳ ಸಾಲವನ್ನು ಒಂದು ಬಾರಿ ಮನ್ನಾ ಮಾಡುತ್ತೇನೆ' ಎಂದು ಭರವಸೆ ನೀಡಿದರು.

ದರಿದ್ರ ಸರ್ಕಾರ: ಬಂಗಾರಪೇಟೆಯಲ್ಲಿ 2006ರಲ್ಲಿ ಯರಗೋಳು ಜಲಾಶಯ ನಿರ್ಮಾಣವಾಯಿತು. ಈ ಬಾರಿ ಮಳೆ ಬಂದು ಜಲಾಶಯ ತುಂಬಿತು. ಆದರೆ, ಆ ನೀರನ್ನು ಬಳಸುವ ಕೆಲಸವನ್ನು ದರಿದ್ರ ಬಿಜೆಪಿ ಸರ್ಕಾರ ಮಾಡಲಿಲ್ಲ. ಜಲಾಶಯ ತುಂಬಿ ತಮಿಳುನಾಡಿಗೆ ನೀರು ಹರಿದು ಹೋಯಿತು ಎಂದು ತರಾಟೆಗೆ ತೆಗೆದುಕೊಂಡರು. ಕಾಂಗ್ರೆಸ್‌ನವರದ್ದು ಗ್ಯಾರಂಟಿ ಕಾರ್ಡ್ ಅಲ್ಲ, ಅದು ಡೂಪ್ಲಿಕೇಟ್ ಕಾರ್ಡ್. ಯಾವುದೇ ಕಾರಣಕ್ಕೂ ಅದನ್ನು ನಂಬಬೇಡಿ ಎಂದರು.

ರಾಜ್ಯದಲ್ಲಿ ಮೋದಿ ಮಿಂಚಿನ ಓಟ: ಬೀದರ್, ವಿಜಯಪುರ ಸಮಾವೇಶದಲ್ಲಿ ಭಾಗಿ, ಬೆಂಗಳೂರಲ್ಲಿ ಮೆಗಾ ರೋಡ್ ಶೋ

ಡಾ.ಅಂಬೇಡ್ಕರ್ ಅವರನ್ನೇ ಬಿಡದ ಕಾಂಗ್ರೆಸ್‌ನವರು ನನ್ನ ಬೈಯ್ಯದೆ ಬಿಡ್ತಾರಾ!

●ಕೆಸರು ಎರಚಿದಷ್ಟು ಕಮಲ ಅರಳುತ್ತೆ ●ಕೇಂದ್ರದ ಯೋಜನೆ ನೇರವಾಗಿ ಜನರಿಗೆ ತಲುಪುತ್ತೆ



ಬೆಂಗಳೂರು, ಏ. 29– ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಕರ್ನಾಟಕದಲ್ಲಿ ವಿಧಾನಸಭಾ ಚುನಾವಣೆ ಪ್ರಚಾರವನ್ನು ಅಬ್ಬರದಿಂದ ಆರಂಭಿಸಿದರು. ಚುನಾವಣೆ ಘೋಷಣೆಯಾದ ನಂತರ ಇದೇ ಪ್ರಥಮ ಬಾರಿಗೆ ಪ್ರಚಾರಕ್ಕೆಂದೇ ಕರ್ನಾಟಕಕ್ಕೆ ಆಗಮಿಸಿದ ಅವರು, ಬೀದರ್‌ನಲ್ಲಿ ತಮ್ಮ ಮೊದಲ ಪ್ರಚಾರ ಸಭೆ ನಡೆಸಿ, ಕೊನೆಯದಾಗಿ ಸಂಜೆ ಬೆಂಗಳೂರಿನಲ್ಲಿ ರೋಡ್ ಶೋ ನಡೆಸುವ ಮೂಲಕ ಗಮನ ಸೆಳೆದರು.

ವಿಜಯಪುರದ ಪ್ರಚಾರ ಮುಗಿದ ನಂತರ ಬೆಂಗಳೂರಿಗೆ ಹೆಲಿಕಾಪ್ಟರ್ ಮೂಲಕ ಆಗಮಿಸಿದ ಮೋದಿ, ಮಾಗಡಿ ರಸ್ತೆಯ ನೈಸ್ ಜಂಕ್ಷನ್‌ನಿಂದ ಸುಮ್ಮನಹಳ್ಳಿ ಗೇಟ್‌ವರೆಗಿನ 5.30 ಕಿಲೋಮೀಟರ್ ಮೆಗಾ ರೋಡ್ ಶೋ ನಡೆಸಿದರು. ಅವರಿಗೆ ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಮತ್ತು ವಿಧಾನ ಪರಿಷತ್ ಸದಸ್ಯ ಛಲವಾದಿ ನಾರಾಯಣಸ್ವಾಮಿ ಸಾಥ್ ನೀಡಿದರು. ಪ್ರಧಾನಿ ಮೋದಿಯವರನ್ನು ಕಣ್ತುಂಬಿಕೊಳ್ಳಲು ರಸ್ತೆಯ ಇಕ್ಕೆಲಗಳಲ್ಲಿ ಜನಸ್ತೋಮವೇ ನೆರೆದಿತ್ತು. ಮೋದಿ ಜನರತ್ತ ಕೈ ಬೀಸುತ್ತಾ ಆಗಮಿಸುತ್ತಿದ್ದಂತೆಯೇ ಇಕ್ಕೆಲಗಳಲ್ಲಿ ನಿಂತಿದ್ದ ಜನರು ಮೋದಿ ಪರ ಜಯಘೋಷ ಕೂಗುತ್ತಾ, ಹೂಮಳೆ ಸುರಿಸಿದರು.

ಮೋದಿಯವರು ಇಂದಿನ ರೋಡ್ ಶೋನಲ್ಲಿ ಬೆಂಗಳೂರಿನ ಉತ್ತರ ವಲಯದ ಒಂಭತ್ತು ವಿಧಾನ ಸಭಾ ಕ್ಷೇತ್ರಗಳಲ್ಲೂ ಸಂಚರಿಸಿದರು. ರೋಡ್ ಶೋಗೆ ಸಾಂಸ್ಕೃತಿಕ ಕಲಾ ತಂಡಗಳು ಮೆರಗು ನೀಡಿದವು. ಶಿರಾದಿಂದ ಆಗಮಿಸಿದ್ದ ಗೊರವರ ಕುಣಿತ, ವೀರಗಾಸೆ ತಂಡಗಳು ರಸ್ತೆಯುದ್ದಕ್ಕೂ ಕಲಾ ಪ್ರದರ್ಶನ ನಡೆಸಿದ್ದು, ಆಕರ್ಷಣೀಯವಾಗಿತ್ತು. ರೋಡ್ ಶೋ ಆದೀಶ್ವರ್ ಜಂಕ್ಷನ್ ತಲುಪುತ್ತಿದ್ದಂತೆಯೇ ಜನರ ಉತ್ಸಾಹ ಇಮ್ಮಡಿಗೊಂಡು 'ವಂದೇ ಮಾತರಂ', 'ಜೈ ಶ್ರೀರಾಮ್' ಹಾಗೂ ಮೋದಿಗೆ ಜಯಘೋಷ ಮುಗಿಲು ಮುಟ್ಟಿತು.

ಕರ್ನಾಟಕದಲ್ಲಿ ಡಬಲ್ ಇಂಜಿನ್ ಸರ್ಕಾರ ಬರಬೇಕು. ಇದರಿಂದ ಮೂಲ ಸೌಕರ್ಯ, ವಿದೇಶಿ ಬಂಡವಾಳ ಹೂಡಿಕೆ ಉತ್ತಮವಾಗಲಿದೆ. ಕರ್ನಾಟಕ ಕಾಂಗ್ರೆಸ್‌ನ ಎಟಿಎಂ ಆಗಬಾರದು. ಅದಕ್ಕಾಗಿ ಕಮಲದ ಗುರುತಿಗೆ ಮತ ನೀಡಿ, ಡಬಲ್ ಇಂಜಿನ್ ಸರ್ಕಾರವನ್ನು ಅಧಿಕಾರಕ್ಕೆ ತನ್ನಿ ಎಂದು ಮನವಿ ಮಾಡಿದರು.

ಬಡವರ ಬಗ್ಗೆ ನಿಜವಾದ ಕಾಳಜಿ ಇಲ್ಲ: ಬೀದರ್‌ನ ಹುಮ್ನಾಬಾದ್‌ನಲ್ಲಿ ನಡೆದ ಬಿಜೆಪಿ ಸಮಾವೇಶ, ನಂತರ ವಿಜಯಪುರದ ಸೈನಿಕ ಶಾಲೆಯಲ್ಲಿ ನಡೆದ ಸಮಾವೇಶದಲ್ಲಿ ಮಾತನಾಡಿದ ಪ್ರಧಾನಿ ಮೋದಿ, ಕಾಂಗ್ರೆಸ್ ತುಷ್ಟೀಕರಣ ರಾಜಕಾರಣ ಮಾಡುತ್ತಿದ್ದು, ಕಾಂಗ್ರೆಸ್ ಆಡಳಿತದಲ್ಲಿ ಕರ್ನಾಟಕ ಸಂಕಷ್ಟಕ್ಕೆ ಸಿಲುಕಿತ್ತು. ಕಾಂಗ್ರೆಸ್ ಎಂದಿಗೂ ಬಡವರ ಹೋರಾಟ ಮತ್ತು ನೋವನ್ನು ಅರ್ಥ ಮಾಡಿಕೊಳ್ಳಲಿಲ್ಲ. ಅವರಿಗೆ ಸೀಟುಗಳ ಬಗ್ಗೆ ಮಾತ್ರ ಕಾಳಜಿ ಇದೆಯೇ ಹೊರತು, ರಾಜ್ಯ ಜನರ ಬಗ್ಗೆ ಅಲ್ಲ. ಕಾಂಗ್ರೆಸ್ ರೈತರಿಗೆ ದ್ರೋಹ ಮಾಡಿದೆ. ಸಮಾಜಗಳನ್ನು ಒಡೆಯಲು ಯತ್ನಿಸುತ್ತಿದೆ. ಈ ಚುನಾವಣೆ ಕೇವಲ 5 ವರ್ಷದ ಚುನಾವಣೆಯಲ್ಲ. ವಿಶ್ವದಲ್ಲಿ ಕರ್ನಾಟಕವನ್ನು ನಂ. 1 ಮಾಡುವ ಚುನಾವಣೆ. ಕೇಂದ್ರ ಮತ್ತು ರಾಜ್ಯದಲ್ಲಿನ ಬಿಜೆಪಿ ಸರ್ಕಾರಗಳು ಕರ್ನಾಟಕವನ್ನು ನಂಬರ್ 1 ರಾಜ್ಯ ಮಾಡಲಿದೆ. ರಾಜ್ಯದ ಮೂಲೆಮೂಲೆಯಲ್ಲೂ ಅಭಿವೃದ್ಧಿಪಡಿಸುತ್ತೇವೆ. ಡಬಲ್ ಎಂಜಿನ್ ಸರ್ಕಾರದಿಂದ ಅಭಿವೃದ್ಧಿ ಹೆಚ್ಚಾಗಲಿದೆ ಎಂದರು.

ಕೇಂದ್ರದ ಯೋಜನೆ ನೇರವಾಗಿ ಜನರ ತಲುಪುತ್ತಿದೆ: ಕೇಂದ್ರದಿಂದ ಒಂದು ರೂ. ಬಿಡುಗಡೆ ಮಾಡಿದರೆ ಫಲಾನುಭವಿಗೆ ಕೇವಲ 15 ಪೈಸೆ ಮಾತ್ರ ತಲುಪುತ್ತದೆ ಎಂದು ಕಾಂಗ್ರೆಸ್ ಪಕ್ಷದ ಪ್ರಧಾನ ಮಂತ್ರಿಯವರೇ ಹೇಳಿದ್ದರು. ಪಂಚಾಯಿತಿಯಿಂದ ಹಿಡಿದು ಸಂಸತ್ತಿನವರೆಗೆ ಕಾಂಗ್ರೆಸ್ ಹಿಡಿತದಲ್ಲಿದ್ದಾಗಲೇ ಅಂತಹ ಪರಿಸ್ಥಿತಿ ಇತ್ತು. ಭ್ರಷ್ಟಾಚಾರ ತೊಡೆದು ಹಾಕಲು ಕಾಂಗ್ರೆಸ್‌ನವರು ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಬಡವರಿಗೆ ಸಲ್ಲಬೇಕಾದ ದುಡ್ಡನ್ನು ಲೂಟಿ ಮಾಡಲಾಗುತ್ತಿತ್ತು. ಆದರೆ, ಈಗ ಕೇಂದ್ರದಿಂದ 1 ರೂ. ಬಿಡುಗಡೆಯಾದರೆ 100ಕ್ಕೆ 100ರಷ್ಟು ಫಲಾನುಭವಿಗೆ ತಲುಪುತ್ತಿದೆ. ಮಧ್ಯವರ್ತಿಗಳಿಲ್ಲದೇ ರೈತರ ಖಾತೆಗಳಿಗೆ ನೇರವಾಗಿ ಹಣ ಜಮೆಯಾಗುತ್ತಿದೆ. ಬಿಜೆಪಿ ಸರ್ಕಾರವು ಯೋಜನೆಗಳಲ್ಲಿ ಪಾರದರ್ಶಕತೆ ತಂದಿದೆ. ಎಲ್ಲಾ ಹಣವು ಬ್ಯಾಂಕ್ ಖಾತೆಗಳಿಗೆ ನೇರವಾಗಿ ತಲುಪುತ್ತಿದೆ ಎಂದು ಹೇಳಿದರು.

ಡಬ್ಬಲ್ ಇಂಜಿನ್ ಸರ್ಕಾರ ಆಯುಷ್ಮಾನ್ ಭಾರತ್ ಯೋಜನೆ ಜಾರಿಗೆ ತಂದಿದೆ. ಸರ್ಕಾರದ ನೀತಿಯಿಂದ ನಮ್ಮ ಮಾತೆಯರಿಗೆ, ಸಹೋದರಿಯರಿಗೆ ಹೊಸ ಶಕ್ತಿ ದೊರೆತಿದೆ. ಜನ್‌ಧನ್ ಬ್ಯಾಂಕ್ ಖಾತೆ ಮೂಲಕ ಮಹಿಳೆಯರ ಜೀವನ ಬದಲಾಗಿದೆ. ಕಾಂಗ್ರೆಸ್ ಸರ್ಕಾರ ಮಹಿಳೆಯರ ಕಲ್ಯಾಣಕ್ಕೆ ಗಂಭೀರ ಪ್ರಯತ್ನವನ್ನೇ ಮಾಡಿಲ್ಲ. ಆದರೆ ಬಿಜೆಪಿ ಸರ್ಕಾರ ಆದ್ಯತೆ ನೀಡಿದೆ. ನಮ್ಮ ಸರ್ಕಾರ ಆಧುನಿಕ ಸಂಪರ್ಕ ಮೂಲ ಸೌಕರ್ಯ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡುತ್ತಿದೆ. ಈ ಬಾರಿ ಹಲವಾರು ಹೊಸ ಮುಖಗಳಿಗೆ ಟಿಕೆಟ್ ನೀಡಿದ್ದೇವೆ. ಕರ್ನಾಟಕದ ಭವಿಷ್ಯಕ್ಕಾಗಿ ಬಿಜೆಪಿ ಅಭ್ಯರ್ಥಿಗಳನ್ನು ಬೆಂಬಲಿಸಿ ಎಂದು ಪ್ರಧಾನಿ ನರೇಂದ್ರ ಮೋದಿ ಮನವಿ ಮಾಡಿದರು.

ನನ್ನ 91 ಬಾರಿ ಬೈದಿದ್ದಾರೆ: ಪ್ರಧಾನಿ ಮೋದಿ

ಚುನಾವಣೆ ಸಮೀಪಿಸುತ್ತಿದ್ದಂತೆಯೇ ಕಾಂಗ್ರೆಸ್‌ನವರು ನನ್ನನ್ನು ನಿಂದಿಸುತ್ತಾರೆ. ಈವರೆಗೆ 91 ಬಾರಿ ನನ್ನನ್ನು ಬೈದಿದ್ದಾರೆ. ಅವರು ಬೈದಾಗಲೆಲ್ಲಾ ಜನರು ಪಾಠ ಕಲಿಸಿದ್ದಾರೆ. ಈ ಬಾರಿಯೂ ಕರ್ನಾಟಕದಲ್ಲಿ ಜನರು ಕಾಂಗ್ರೆಸ್‌ಗೆ ಪಾಠ ಕಲಿಸುತ್ತಾರೆ. ನಿಮ್ಮ ಆಶೀರ್ವಾದಿಂದ ಕಾಂಗ್ರೆಸ್‌ನವರ ಬೈಗುಳಗಳು 'ಮಣ್ಣಲ್ಲಿ ಮಣ್ಣಾಗುತ್ತವೆ'. ಎಷ್ಟು ಕೆಸರು ಎರಚುತ್ತಾರೋ ಅಷ್ಟು ಕಮಲಗಳು ಅರಳುತ್ತವೆ ಎಂದರಲ್ಲದೇ ಈ ಕಾಂಗ್ರೆಸ್ಸಿಗರು ಬಾಬಾ ಸಾಹೇಬ್ ಡಾ. ಅಂಬೇಡ್ಕರ್ ಅವರನ್ನೇ ರಾಕ್ಷಸ, ದೇಶದ್ರೋಹಿ ಎಂದೆಲ್ಲಾ ನಿಂದಿಸಿದ್ದರು. ಆ ಮಹಾಪುರುಷನನ್ನೂ ಬಿಡದ ಕಾಂಗ್ರೆಸ್‌ನವರು ಚುನಾವಣೆಯಲ್ಲಿ ಓಟಿಗಾಗಿ ಅಂಬೇಡ್ಕರ್ ಅವರ ಹೆಸರನ್ನು ಈಗ ಬಳಸುತ್ತಿದ್ದಾರೆ ಎಂದು ಮೋದಿ ಕಿಡಿಕಾರಿದರು.



ಹರಿಹರ ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿ ಅವರನ್ನು ಮೈಸೂರಿನಲ್ಲಿ ಭೇಟಿ ಮಾಡಿದ ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಾವಿನಹಳ್ಳಿ ಸಿದ್ದೇಗೌಡ ಫಲಪುಷ್ಪ ನೀಡಿ ಶ್ರೀಗಳಿಂದ ಆಶೀರ್ವಾದ ಪಡೆದರು. ಈ ವೇಳೆ ಕಾಂಗ್ರೆಸ್ ಮುಖಂಡರು, ವಾಲ್ಮೀಕಿ ಜನಾಂಗದ ಪದಾಧಿಕಾರಿಗಳು ಇದ್ದರು.




ಮೈಸೂರು ವಾರ್ಡ್ ನಂ.6 ಗೋಕುಲಂ ಹಾಗೂ ಬೃಂದಾವನ ಬಡಾವಣೆಯಲ್ಲಿ ಕಾರ್ಪೊರೇಟರ್ ಎಸ್‌ಬಿಎಂ ಮಂಜು ಚಾಮರಾಜ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಎಚ್.ಕೆ.ರಮೇಶ್ ಪರವಾಗಿ ಮನೆ ಮನೆಗೆ ತೆರಳಿ ಮತಯಾಚಿಸಿದರು. ಈ ಸಂದರ್ಭದಲ್ಲಿ ಮುಖಂಡರಾದ ರಘು, ಮಹಾದೇವ್, ಮೋಹನ್, ಚಂದ್ರೇಗೌಡ, ಬೊಮ್ಮಣ್ಣ, ಕುಮಾರ್, ಸಾವಿತ್ರಿ ಇನ್ನಿತರರು ಉಪಸ್ಥಿತರಿದ್ದರು.

ಗಾಯಗೊಂಡಿದ್ದ ಡಾ.ಜಿ.ಪರಮೇಶ್ವರ್ ಚೇತರಿಕೆ

ತುಮಕೂರು: ಕೊರಟಗೆರೆ ಕ್ಷೇತ್ರದ ಹಳ್ಳಿಯೊಂದರಲ್ಲಿ ರೋಡ್ ಶೋ ವೇಳೆ ಕಿಡಿಗೇಡಿಗಳು ಎಸೆದ ಕಲ್ಲಿನಿಂದ ತಲೆಗೆ ಗಂಭೀರವಾಗಿ ಗಾಯಗೊಂಡಿದ್ದ ಮಾಜಿ ಉಪ ಮುಖ್ಯಮಂತ್ರಿ ಜಿ.ಪರಮೇಶ್ವರ್ ಚೇತರಿಸಿಕೊಳ್ಳುತ್ತಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ. ತಾಲೂಕಿನ ಭೈರೇನಹಳ್ಳಿಯಲ್ಲಿ ಶುಕ್ರವಾರ ದುಷ್ಕರ್ಮಿಯೊಬ್ಬ ಕಲ್ಲು ತೂರಾಟ ನಡೆಸಿದ್ದರಿಂದ ರಾಜ್ಯ ಕಾಂಗ್ರೆಸ್‌ನ ಮಾಜಿ ಅಧ್ಯಕ್ಷರ ತಲೆಗೆ ಆಳವಾದ ಗಾಯವಾಗಿತ್ತು. ಗಾಯದ ನಂತರ, ತೀವ್ರ ರಕ್ತಸ್ರಾವವಾಗುತ್ತಿದ್ದರಿಂದ ಪರಮೇಶ್ವರ ಅವರನ್ನು ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ದಾಖಲಿಸಲಾಗಿತ್ತು. ಹೆಚ್ಚಿನ ಚಿಕಿತ್ಸೆಗಾಗಿ ಮತ್ತೊಂದು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಈಗ ವೈದ್ಯರ ತಂಡ ಅವರ ನಿವಾಸದಲ್ಲಿ ಚಿಕಿತ್ಸೆ ನೀಡುತ್ತಿದೆ.

ಮೇ 2ರಂದು ಗುಜರಾತ್ ಹೈಕೋರ್ಟ್‌ನಲ್ಲಿ ರಾಹುಲ್ ಅರ್ಜಿ ಅಂತಿಮ ವಿಚಾರಣೆ



ಅಹಮದಾಬಾದ್: 'ಮೋದಿ ಉಪನಾಮ' ಮಾನಹಾನಿ ಪ್ರಕರಣದಲ್ಲಿ ಕೆಳ ನ್ಯಾಯಾಲಯ ನೀಡಿದ್ದ ಎರಡು ವರ್ಷಗಳ ಶಿಕ್ಷೆಗೆ ತಡೆ ನೀಡುವಂತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಶನಿವಾರ ಗುಜರಾತ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ರಾಹುಲ್ ಗಾಂಧಿ ಅವರ ಪರಿಷ್ಕರಣೆ ಅರ್ಜಿ ವಿಚಾರಣೆ ಗುಜರಾತ್ ಹೈಕೋರ್ಟ್‌ನಲ್ಲಿ ಪ್ರಾರಂಭವಾಯಿತು. ಈ ವೇಳೆ ರಾಹುಲ್ ಪರ ವಕೀಲರು ಶಿಕ್ಷೆಗೆ ತಡೆಯಾಜ್ಞೆ ನೀಡಲು ಆರು ಮೂಲಭೂತ ಆಧಾರಗಳನ್ನು ಮಂಡಿಸಿದರು. ಇನ್ನು ಕೆಳ ನ್ಯಾಯಾಲಯದಿಂದ 2 ವರ್ಷಗಳ ಶಿಕ್ಷೆಯನ್ನು ಪಡೆದ ನಂತರ ರಾಹುಲ್ ಗಾಂಧಿ ಅವರ ಸಂಸತ್ ಸದಸ್ಯತ್ವದಿಂದ ಅನರ್ಹಗೊಳಿಸಲಾಯಿತು. ಪ್ರಕರಣದ ಮುಂದಿನ ವಿಚಾರಣೆ ಮೇ 2ರಂದು ನಡೆಯಲಿದೆ.

ಗುಜರಾತ್ ಹೈಕೋರ್ಟ್ ನ್ಯಾಯಮೂರ್ತಿ ಹೇಮಂತ್ ಪ್ರಚಕ್ ಅವರು ವಿಚಾರಣೆ ನಡೆಸಿದ್ದು ಈ ವೇಳೆ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ಅವರು ರಾಹುಲ್ ಪರ ತಮ್ಮ ವಾದವನ್ನು ಮಂಡಿಸಿದ್ದು ಶಿಕ್ಷೆಗೆ ತಡೆ ನೀಡುವಂತೆ ಒತ್ತಾಯಿಸಿದರು. ಸುಮಾರು ಒಂದೂವರೆ ಗಂಟೆಗಳ ಸುದೀರ್ಘ ವಾದದಲ್ಲಿ, ಸಿಂಘ್ವಿ ಸೂರತ್ ನ್ಯಾಯಾಲಯ ನೀಡಿದ ಶಿಕ್ಷೆಯ ಬಗ್ಗೆ ಪ್ರಶ್ನೆಗಳನ್ನು ಎತ್ತಿದರು. ಸಿಂಘ್ವಿ ಹಲವು ಪ್ರಕರಣಗಳ ಉಲ್ಲೇಖಗಳನ್ನು ಮಂಡಿಸಿದರು. ಹೈಕೋರ್ಟ್‌ನಲ್ಲಿ ಮೇಲ್ಮನವಿಯ ವಿಚಾರಣೆ ಸಂದರ್ಭದಲ್ಲಿ, ಈ ಪ್ರಕರಣದಲ್ಲಿ ಅರ್ಜಿದಾರ ಪೂರ್ಣೇಶ್ ಮೋದಿ ಪರವಾಗಿ ವಾದ ಮಂಡಿಸುವ ನಿರೀಕ್ಷೆಯಿದೆ. ಮಾಧ್ಯಮ ವರದಿಗಳ ಪ್ರಕಾರ, ಗುಜರಾತ್ ಹೈಕೋರ್ಟ್‌ನಲ್ಲಿ ಶನಿವಾರ ನಡೆದ ವಿಚಾರಣೆ ವೇಳೆ ಪೂರ್ಣೇಶ್ ಮೋದಿ ಅವರ ವಕೀಲರಾದ ಹರ್ಷಿತ್ ತೋವಾಲಾ ಮತ್ತು ನಿರುಪಮ್ ನಾನಾವತಿ ಅವರು ನ್ಯಾಯಾಲಯದ ಕೊಠಡಿಯಲ್ಲಿ ಹಾಜರಿದ್ದರು. ಹೈಕೋರ್ಟ್‌ನಲ್ಲಿ ವಿಚಾರಣೆ ವೇಳೆ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ಅವರು, ರಾಹುಲ್ ಗಾಂಧಿಗೆ ಮೊದಲ ಬಾರಿಗೆ ಸಮನ್ಸ್ ನೀಡಿದಾಗ ಯಾವುದೇ ಸಾಕ್ಷ್ಯವನ್ನು ಪ್ರಾಥಮಿಕ ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಲಾಗಿಲ್ಲ ಎಂದು ಹೇಳಿದರು. ಪೂರ್ಣೇಶ್ ಮೋದಿ ಕೂಡ ಸಭೆಯಲ್ಲಿ ಇರಲಿಲ್ಲ, ಯಾರೋ ನನಗೆ ವಾಟ್ಸಾಪ್‌ನಲ್ಲಿ ಕ್ಲಿಪ್ ಕಳುಹಿಸಿದ್ದಾರೆ, ಆದರೆ ಕ್ಲಿಪ್ ಕಳುಹಿಸಿದ್ದು ಯಾರು ಎಂದು ಹೇಳಲಿಲ್ಲ. ಸೂರತ್ ನ್ಯಾಯಾಲಯದ ತೀರ್ಪು ವಿಕೃತವಾಗಿದೆ ಎಂದು ಸಿಂಘ್ವಿ ಹೇಳಿದ್ದಾರೆ.



ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಪರಿಶಿಷ್ಟ ವಿಭಾಗದ ಉಪಾಧ್ಯಕ್ಷ ಮಂಡಕಳ್ಳಿ ನಂಜುಂಡಸ್ವಾಮಿ ಅವರು ಶಾಸಕ ಜಿ.ಟಿ.ದೇವೇಗೌಡರ ಸಮ್ಮುಖದಲ್ಲಿ ಕಾಂಗ್ರೆಸ್ ತೊರೆದು ಜೆಡಿಎಸ್ ಸೇರ್ಪಡೆಗೊಂಡರು. ಈ ವೇಳೆ ಮೈಸೂರು ಜಿಲ್ಲಾ ಜೆಡಿಎಸ್ ಪರಿಶಿಷ್ಟ ವಿಭಾಗದ ಅಧ್ಯಕ್ಷ ಬೆಳವಾಡಿ ಶಿವಕುಮಾರ್, ಜಯಪುರ ಗ್ರಾಪಂ ಉಪಾಧ್ಯಕ್ಷ ನಾಗರಾಜ್, ಸದಸ್ಯರಾದ ರೇಣುಕಾ, ಮಂಜುನಾಥ್, ಕಲ್ಲಹಳ್ಳಿ ರಮೇಶ್ ಇನ್ನಿತರರು ಉಪಸ್ಥಿತರಿದ್ದರು.



ಪೋಸ್ಟ್ ಬಸವರಾಜು, ಮಾಜಿ ಗ್ರಾಪಂ ಅಧ್ಯಕ್ಷ ಮಹೇಶ್‌ಕುಮಾರ್, ಮಾಜಿ ಗ್ರಾಪಂ ಸದಸ್ಯ ಡಿ.ಎಂ.ಮಹದೇವು, ಛೇರ್ಮನ್ ಚಿಕ್ಕಣ್ಣ, ಡೈರಿ ಬಸಪ್ಪ, ಕೆಂ. ಮಾಲಣ್ಣ ಸೇರಿದಂತೆ ಹಲವರು ಕಾಂಗ್ರೆಸ್ ತೊರೆದು ಶಾಸಕ ಜಿ.ಟಿ.ದೇವೇಗೌಡ ಅವರ ಸಮ್ಮುಖದಲ್ಲಿ ಜೆಡಿಎಸ್ ಸೇರ್ಪಡೆಗೊಂಡರು. ಈ ಸಂದರ್ಭದಲ್ಲಿ ಎಪಿಎಂಸಿ ಮಾಜಿ ಅಧ್ಯಕ್ಷ ಪ್ರಭುಸ್ವಾಮಿ, ಮಾಜಿ ಗ್ರಾಪಂ ಅಧ್ಯಕ್ಷೆ ಮಹಾಲಕ್ಷ್ಮಿ ಶಿವಲಿಂಗ, ಮುಖಂಡರಾದ ಕೋಟೆಹುಂಡಿ ಮಹದೇವ್, ಕಾಳಲಿಂಗೇಗೌಡ, ಡಿ.ಜೆ.ರವಿ, ಟಿ.ಕೆ.ಲೇಔಟ್ ರಾಜು ಇನ್ನಿತರರು ಉಪಸ್ಥಿತರಿದ್ದರು.

ಎಲ್ಲಾ ವರ್ಗದ ಜನರ ಹಿತ ಕಾಯುವ ನಾಯಕ ಎಂದರೆ ಸಿದ್ದರಾಮಯ್ಯ

ವರುಣ ಕ್ಷೇತ್ರದ ಎಸ್‌ಟಿ ಸಮುದಾಯದ ಮುಖಂಡರು, ಕಾರ್ಯಕರ್ತರ ಸಭೆಯಲ್ಲಿ ಎಐಸಿಸಿ ವಕ್ತಾರ ಅನ್ಷುಲ್ ಅವಿಜಿತ್ ಅಭಿಮತ

ಮೈಸೂರು,ಏ.29(ಎಂಟಿವೈ)– ಅಧಿಕಾರಾವಧಿಯಲ್ಲಿ ಎಲ್ಲಾ ವರ್ಗದ ಬಡ ಜನರ ಹಿತ ಕಾಯುವ ಹಲವು ಕಾರ್ಯಕ್ರಮವನ್ನು ಜಾರಿಗೊಳಿಸುವ ಮೂಲಕ ಸಾಮಾಜಿಕ ನ್ಯಾಯ ಎತ್ತಿ ಹಿಡಿದಿದ್ದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಹೆಚ್ಚು ಮತಗಳ ಅಂತರದಿಂದ ಗೆಲ್ಲಿಸಿ, ಬಡವರ ಸೇವೆ ಮಾಡಲು ಅವಕಾಶ ಮಾಡಿ ಕೊಡುವಂತೆ ಮಾಜಿ ಉಪ ಪ್ರಧಾನಿ ಬಾಬು ಜಗಜೀವನರಾಂ ಅವರ ಮೊಮ್ಮಗ, ಎಐಸಿಸಿ ವಕ್ತಾರ ಅನ್ಷುಲ್ ಅವಿಜಿತ್ ಮನವಿ ಮಾಡಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಶನಿವಾರ ಜಿಲ್ಲಾ ಕಾಂಗ್ರೆಸ್ ವತಿಯಿಂದ ಆಯೋಜಿಸಿದ್ದ ವರುಣ ವಿಧಾನ ಸಭಾ ಕ್ಷೇತ್ರದ ಎಸ್‌ಟಿ ಸಮುದಾಯದ ಮುಖಂಡರು ಹಾಗೂ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸಾಮಾಜಿಕ ನ್ಯಾಯದ ಯೋಧರಂತೆ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಅವರು, ಮುಖ್ಯಮಂತ್ರಿಯಾಗಿದ್ದ ವೇಳೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಸೇರಿದಂತೆ ಎಲ್ಲ ವರ್ಗಗಳ ಅಭಿವೃದ್ಧಿಗೆ ಹಲವಾರು ಕೊಡುಗೆಗಳನ್ನು ನೀಡಿದ್ದಾರೆ. ಇಂದಿಗೂ ಅವರು ನೀಡಿದ ಯೋಜನೆಗಳು ಜನಪ್ರಿಯವಾಗಿದೆ. ದೇಶದ ಇತರೆ ರಾಜ್ಯಗಳಲ್ಲೂ ಸಿದ್ದರಾಮಯ್ಯ ಅವರ ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಎಲ್ಲಾ ಯೋಜನೆ ಹಾಗೂ ಕಾರ್ಯಕ್ರಮಗಳು ಶೋಷಿತರ ಧ್ವನಿಯಾಗಿದ್ದವು ಎಂದರು.

ವಾಲ್ಮೀಕಿ ಸಮಾಜ ಬೆಂಬಲವಾಗಿ ನಿಲ್ಲಬೇಕು: ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಸಾಮಾಜಿಕ ನ್ಯಾಯಕ್ಕೆ ಬದ್ಧರಾಗಿ ಕೆಲಸ ಮಾಡುತ್ತಿರುವ ಸಿದ್ದರಾಮಯ್ಯಗೆ ವಾಲ್ಮೀಕಿ ಸಮಾಜ ಬೆನ್ನೆಲುಬಾಗಿ ನಿಲ್ಲಬೇಕು. ಬಿಜೆಪಿ ಸರ್ಕಾರ ವಾಲ್ಮೀಕಿ ಸಮುದಾಯವನ್ನು ಕಡೆಗಣಿಸಿದ್ದು, ಚುನಾವಣೆಗಾಗಿ ಮೀಸಲಾತಿ ಹೆಚ್ಚಳ ನಾಟಕ ಮಾಡಿದೆ. ಕೇಂದ್ರದ ಸಮಾಜ ಕಲ್ಯಾಣ ಸಚಿವರು ಪರಿಶಿಷ್ಟ ಪಂಗಡಕ್ಕೆ ಕೇಂದ್ರದ ಮುಂದೆ ಮೀಸಲಾತಿ ಪ್ರಸ್ತಾಪವಿಲ್ಲ ಎಂದು ಹೇಳುವ ಮೂಲಕ ಬಿಜೆಪಿ ನಾಯಕರ ಇಬ್ಬಂದಿ ಧೋರಣೆ ಬಯಲಾಗಿದೆ. ಇವರ ಡಬಲ್‌ಗೇಮ್ ಆಟಕ್ಕೆ ಜನ ಮರುಳಾಗಬಾರದು. ವಾಲ್ಮೀಕಿ ಪೀಠದ ಶ್ರೀಗಳು ತಿಂಗಳುಗಟ್ಟಲೆ ಉಪವಾಸ ಸತ್ಯಾಗ್ರಹ ಮಾಡಿದರೂ ಬಿಜೆಪಿಗರು ತಲೆಕೆಡಿಸಿಕೊಳ್ಳಲಿಲ್ಲ ಎಂದು ತಿಳಿಸಿದರು.

ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರಿಗೆ ಜನಸಂಖ್ಯೆಗೆ ಅನುಗುಣವಾಗಿ ಎಸ್‌ಇಪಿ ಮತ್ತು ಟಿಎಸ್‌ಪಿ ಯೋಜನೆಯಡಿ 84 ಸಾವಿರ ಕೋಟಿ ರೂ. ಅನುದಾನ ನೀಡಿದ್ದರು. ಆರ್‌ಎಸ್‌ಎಸ್ ನವರು ಮೀಸಲಾತಿಯನ್ನು ತೆಗೆದುಹಾಕಬೇಕು ಎನ್ನುತ್ತಾರೆ. ಬಿಜೆಪಿ ಪಕ್ಷಕ್ಕೆ ತಕ್ಕಪಾಠ ಕಲಿಸಲು ಎಲ್ಲರೂ ಒಗ್ಗಟ್ಟಿನಿಂದ ಪಕ್ಷಕ್ಕೆ ನಿಷ್ಠರಾಗಿ ಕೆಲಸ ಮಾಡಬೇಕಾಗಿದೆ. ಬಿಜೆಪಿಗರು ಆಮಿಷವೊಡ್ಡಿ, ಬೆದರಿಕೆ ಹಾಕುವ ಕೆಲಸ ಮಾಡುತ್ತಿದ್ದಾರೆ. ಕಾಂಗ್ರೆಸ್ ಕಾರ್ಯಕರ್ತರನ್ನು ಪ್ರಚೋದಿಸಿ ಗಲಾಟೆ ಮಾಡಿಸಲು ಪ್ರಯತ್ನಿಸುತ್ತಿದ್ದಾರೆ. ಯಾವುದೇ ಅಪಪ್ರಚಾರಕ್ಕೆ ಕಿವಿಗೊಡಬೇಡಿ, ಅವರ ಪ್ರಚಾರಕ್ಕೆ ಅಡ್ಡಿಮಾಡಬೇಡಿ, ಸಂಯಮದಿಂದ ವರ್ತಿಸಬೇಕು. ಕಾಂಗ್ರೆಸ್ ಸರ್ಕಾರ ಪರಿಶಿಷ್ಟ ಜನಾಂಗಕ್ಕೆ ಏನೇನು ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡಿದೆ ಎಂಬುದನ್ನು ಮನೆ ಮನೆಗೆ ಹೋಗಿ ತಿಳಿಸಿ ಎಂದರು.

ಸಿದ್ದರಾಮಯ್ಯ ಕೊಡುಗೆ ಅಪಾರ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಕಲ್ಯಾಣಕ್ಕಾಗಿ ವಿಶೇಷ ಕಾಯಿದೆ ರೂಪಿಸಿದಲ್ಲದೆ, ಜನಸಂಖ್ಯೆಗೆ ಅನುಗುಣವಾಗಿ ಅನುದಾನ ಮೀಸಲಿಟ್ಟಿದ್ದ ಸಿದ್ದರಾಮಯ್ಯ ಅವರನ್ನು ವರುಣ ಕ್ಷೇತ್ರದ ನಾಯಕ ಸಮಾಜದವರು ಬೆಂಬಲಿಸಬೇಕು ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ, ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು ಮನವಿ ಮಾಡಿದರು.

ಬಿಜೆಪಿ ಸರ್ಕಾರ ಬಂದ ಮೇಲೆ ಅನುದಾನ ಕಡಿಮೆಯಾಗಿದೆ. ರೈತರಿಗೆ ಹಲವಾರು ಯೋಜನೆಗಳನ್ನು ನೀಡಲಾಗಿದೆ. ಕೃಷಿಭಾಗ್ಯ ಸೇರಿದಂತೆ ಹತ್ತು ಹಲವು ಯೋಜನೆಗಳನ್ನು ನೀಡಿದ್ದನ್ನು ಮೊಟಕುಗೊಳಿಸಲಾಗಿದೆ ಎಂದು ಕಿಡಿಕಾರಿದರು.

ವಿಧಾನಸೌಧದ ಮುಂದೆ ವಾಲ್ಮೀಕಿ ಮಹರ್ಷಿಗಳ ಪ್ರತಿಮೆ ಪ್ರತಿಷ್ಠಾಪಿಸುವ ಮೂಲಕ ನಾಯಕ ಸಮುದಾಯಕ್ಕೆ ಸಿದ್ದರಾಮಯ್ಯ ಗೌರವಿಸಿದ್ದಾರೆ. ಮುಖಂಡರು ಮತ್ತು ಕಾರ್ಯಕರ್ತರು ಹಳ್ಳಿಹಳ್ಳಿಗಳು, ಬೂತ್‌ಮಟ್ಟದಲ್ಲಿ ಮತದಾರರಿಗೆ ಮನವರಿಕೆ ಮಾಡಿ ಹೆಚ್ಚಿನ ರೀತಿಯಲ್ಲಿ ಮತಯಾಚನೆ ಮಾಡಿ ಕಾಂಗ್ರೆಸ್ ಪರ ಕೆಲಸ ಮಾಡಬೇಕು. ಸಿದ್ದರಾಮಯ್ಯ ಪ್ರಬಲ ಹಿಂದುಳಿದ ವರ್ಗಗಳ ನಾಯಕ. ದಲಿತರು, ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ಶ್ರಮಿಸಿದ್ದಾರೆ. ಈ ಚುನಾವಣೆಯ ಫಲಿತಾಂಶವನ್ನು ಇಡೀ ರಾಜ್ಯದ ಜನರು ನೋಡುತ್ತಿರುವುದರಿಂದ ಕಾರ್ಯಕರ್ತರು ಮೈ ಮರೆಯದೆ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಸಭೆಯಲ್ಲಿ ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಸಿದ್ದರಾಮಯ್ಯ ಅವರ ಆಪ್ತ ಕಾರ್ಯದರ್ಶಿ ಎಂ. ರಾಮಯ್ಯ, ಕೆಪಿಸಿಸಿ ಕಾರ್ಯದರ್ಶಿ, ಎಸ್.ಸಿ. ಬಸವರಾಜು, ಕೆಪಿಸಿಸಿ ಉಪಾಧ್ಯಕ್ಷ ಸೂರಜ್ ಹೆಗ್ಡೆ, ಎಐಸಿಸಿ ಕಾರ್ಯದರ್ಶಿ ಪ್ರಕಾಶ್ ಜೋಶಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಮಾಜಿ ಸಂಸದ ಕಾಗಲವಾಡಿ ಶಿವಣ್ಣ, ಮುಖಂಡರಾದ ಭಕ್ತ ರಾಮೇಗೌಡ, ರೇಣುಕಾ ನಾಗರಾಜ್, ಶ್ರೀನಿವಾಸ್ ನಾಯಕ್, ಸರ್ವೇಶ್, ಮದನ್‌ರಾಜ್, ಆಲಗೂಡು ನಾಗರಾಜ್, ಶಿವಣ್ಣ, ಮಂಜುಳ ರಾಜ್, ರಮೇಶ್ ಮುದ್ದೇಗೌಡ, ಮೆಲ್ಲಹಳ್ಳಿ ನಾಗರಾಜ್, ಗಂಗನತಿಮ್ಮಣ್ಣ, ನಾರಾಯಣ ಹಾಗೂ ಪಕ್ಷದ ಕಾರ್ಯಕರ್ತರು ಪಾಲ್ಗೊಂಡಿದ್ದರು.



> ಕೋಮುವಾದಿ ಬಿಜೆಪಿ ಸರ್ಕಾರ ಎಲ್ಲ ವರ್ಗದ ವಿರೋಧಿಯಾಗಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿವೇತನವನ್ನೂ ಕೇಂದ್ರ ಸರ್ಕಾರ ಸ್ಥಗಿತಗೊಳಿಸಿದೆ. ಸಂವಿಧಾನವನ್ನೇ ಬದಲಿಸುವ ಆಶಯ ಬಿಜೆಪಿಯದ್ದಾಗಿದೆ. ಸಾಮಾಜಿಕ ನ್ಯಾಯ ದೊರೆಯಬೇಕಾದರೆ ಕಾಂಗ್ರೆಸ್ ಅನ್ನು ಅಧಿಕಾರಕ್ಕೆ ತರಬೇಕು. ಪಕ್ಷದ ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸಬೇಕು.
>
> –ಅನ್ಷುಲ್ ಅವಿಜಿತ್, ಎಐಸಿಸಿ ವಕ್ತಾರ

ಮೋದಿ ಜನಪ್ರಿಯತೆ ಕಂಡು ಕಾಂಗ್ರೆಸ್‌ನವರು ಹತಾಶ

ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್



ಚುನಾವಣೆಯಲ್ಲಿ ಬಿಜೆಪಿಗೆ ಪೂರ್ಣ ಬಹುಮತ ನೀಡಿ, ಯಾವುದೇ ವ್ಯಕ್ತಿ ಭ್ರಷ್ಟಾಚಾರ ಮಾಡಿದರೆ, ಮುಲಾಜಿಲ್ಲದೇ ಜೈಲಿಗೆ ಕಳುಹಿಸುತ್ತೇವೆ. ನುಡಿದಂತೆ ನಡೆದ ಯಾವುದಾದರೂ ಸರ್ಕಾರವಿದ್ದರೆ ಅದು ಬಿಜೆಪಿ ಸರ್ಕಾರ. ರಾಮನ ಜನ್ಮ ಭೂಮಿ ಅಂಯೋಧ್ಯೆಯಲ್ಲಿ ರಾಮಮಂದಿರ ಕಟ್ಟುವುದಾಗಿ ಹೇಳಿದ್ದೆವು. ಅದರಂತೆ ಇದೀಗ ಅಯೋಧ್ಯೆಯಲ್ಲಿ ಭವ್ಯ ರಾಮ ಮಂದಿರ ನಿರ್ಮಾಣವಾಗುತ್ತಿದೆ. ಪಿಎಫ್‌ಐ ಸಂಘಟನೆ ಬ್ಯಾನ್ ಮಾಡುವುದಾಗಿ ಹೇಳಿದ್ದೆವು. ಆ ಕೆಲಸವನ್ನು ಮಾಡಿದ್ದೇವೆ. ಜಮ್ಮು ಕಾಶ್ಮೀರದಲ್ಲಿ ವಿಧಿಸಿದ್ದ 370ನೇ ವಿಧಿ ತೆಗೆದು ಹಾಕಿದ್ದೇವೆ. ನುಡಿದಂತೆ ನಡೆದುಕೊಂಡಿದ್ದೇವೆ.

–ರಾಜನಾಥ್ ಸಿಂಗ್, ಕೇಂದ್ರ ರಕ್ಷಣಾ ಸಚಿವ.

ಮಂಡ್ಯ, ಏ.29– ಪ್ರಧಾನಿ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ಜನಪ್ರಿಯತೆ ಕಂಡು ಕಾಂಗ್ರೆಸ್‌ನವರು ಹತಾಶರಾಗಿದ್ದಾರೆ ಎಂದು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಟೀಕಿಸಿದರು.

ಶ್ರೀರಂಗಪಟ್ಟಣ ಕ್ಷೇತ್ರ ವ್ಯಾಪ್ತಿಯ ಮಂಡ್ಯ ತಾಲೂಕಿನ ಕೊತ್ತತ್ತಿ ಗ್ರಾಮದ ಹೊರವಲಯದಲ್ಲಿ ಬಿಜೆಪಿ ಅಭ್ಯರ್ಥಿ ಇಂಡುವಾಳು ಸಚ್ಚಿದಾನಂದ ಪರ ಆಯೋಜಿಸಿದ್ದ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಜನರಿಗೆ ಮೋದಿ ಅವರ ಬಗ್ಗೆ ಇರುವ ಪ್ರೀತಿಯನ್ನು ಅವರ ಕೈಯಲ್ಲಿ ಸಹಿಸಿಕೊಳ್ಳಲಾಗುತ್ತಿಲ್ಲ ಎಂದು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು.

ಕಾಂಗ್ರೆಸ್ ಕಳೆದ 50 ವರ್ಷಗಳಿಂದ ದೇಶ ವನ್ನಾಳಿತ್ತು. ಮೋದಿ ನೇತೃತ್ವದ ಬಿಜೆಪಿ 9 ವರ್ಷದಿಂದ ಆಡಳಿತ ನಡೆಸಿದೆ. ಯಾರ ಆಡಳಿತಾವಧಿಯಲ್ಲಿ ಎಷ್ಟು ಸುಧಾರಣೆ ಯಾಗಿದೆ ಎಂಬುದನ್ನು ಕಾಂಗ್ರೆಸ್‌ನವರು ಆತ್ಮಾವಲೋಕನ ಮಾಡಿಕೊಳ್ಳಲಿ. ಕೇಂದ್ರ ಸರ್ಕಾರದ ಯಾವುದೇ ಮಂತ್ರಿ ಮೇಲೆ ಒಂದೇ ಒಂದು ಭ್ರಷ್ಟಾಚಾರದ ಆರೋಪ ಗಳಿಲ್ಲ. ಭ್ರಷ್ಟಾಚಾರ ರಹಿತ ಸರ್ಕಾರ ಮೋದಿ ನೇತೃತ್ವದ ಸರ್ಕಾರ ಎಂದರು.

ಕಾಂಗ್ರೆಸ್ ಧರ್ಮ–ಧರ್ಮಗಳ ನಡುವೆ ಕಂದಕ ಸೃಷ್ಟಿಸಿ ಸಮಾಜವನ್ನು ಹೊಡಾಗಿಸಿ ಒಡೆದು ಅಧಿಕಾರ ಹಿಡಿಯಲು ಹಂಬಲಿ ಸುತ್ತಿದೆ. ಸಂವಿಧಾನದ ಬಗ್ಗೆ ಇವರಿಗೆ ಸ್ವಲ್ಪವೂ ಗೌರವವಿಲ್ಲ. ಸಂವಿಧಾನ ವಿರೋಧಿ ಯಂತಹ ದುಸ್ಸಾಹಸಕ್ಕೆ ಕೈ ಹಾಕಲು ಮುಂದಾಗಿದೆ ಎಂದು ಹರಿಹಾಯ್ದರು.

ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಆತ್ಮ ನಿರ್ಭಯತೆ ಹಾಗೂ ಸ್ವಾವಲಂಬಿಯಾಗಿ ದ್ದೇವೆ. ನಮಗೆ ಬೇಕಾದ ಮದ್ದು–ಗುಂಡು ಗಳನ್ನು ನಮ್ಮ ದೇಶದಲ್ಲೇ ತಯಾರಿಸುತ್ತಿ ದ್ದೇವೆ. ಯುದ್ಧಕ್ಕೆ ಬೇಕಾದ ಸಶಸ್ತ್ರಗಳನ್ನು ಹೊಂದಿದ್ದೇವೆ. ಮೋದಿ ಅವರು ಕರ್ನಾಟಕ ಕೈಗಾರೀಕರಣಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದಾರೆ. ಹೆಚ್‌ಎಎಲ್ ವತಿಯಿಂದ ತುಮಕೂರಿನಲ್ಲಿ ಹೆಲಿಕಾಪ್ಟರ್ ತಯಾರು ಮಾಡುವ ಘಟಕ ಸ್ಥಾಪನೆ ಮಾಡಲಾಗು ತ್ತಿದೆ. ಇದರ ಜೊತೆಗೆ ಮುಂಬೈ–ಬೆಂಗ ಳೂರು, ಚೆನ್ನೈ–ಬೆಂಗಳೂರು ಹಾಗೂ ಹೈದರಾಬಾದ್–ಬೆಂಗಳೂರು ಕಾರಿಡಾರ್ ನಿರ್ಮಾಣ ಮಾಡಲಾಗುತ್ತಿದೆ. ಇದರಿಂದ ಯುವಕರಿಗೆ ಉದ್ಯೋಗಾವಕಾಶಗಳು ಸಿಗುತ್ತವೆ ಎಂದರು.

ಉಕ್ರೇನ್–ರಷ್ಯಾ ಯುದ್ಧದಲ್ಲಿ 22 ಸಾವಿರ ಭಾರತೀಯ ವಿದ್ಯಾರ್ಥಿಗಳು ಸಿಲುಕಿದ್ದರು. ಆಹಾರ ಸಿಗದೆ ಭಯದ ವಾತಾವರಣ ನಿರ್ಮಾಣವಾಗಿತ್ತು. ಇಂತಹ ಸಂದರ್ಭ ವಿದ್ಯಾರ್ಥಿಗಳನ್ನು ನಮ್ಮ ದೇಶಕ್ಕೆ ಸುರಕ್ಷತೆಯಿಂದ ಕರೆತರ ಲಾಯಿತು. ಇದು ಸುಲಭದ ಸಾಧನೆಯಲ್ಲ ಎಂದು ತಿಳಿಸಿದರು.

ವೇದಿಕೆಯಲ್ಲಿ ಅಭ್ಯರ್ಥಿ ಇಂಡುವಾಳು ಸಚ್ಚಿದಾನಂದ, ಸಂಸದೆ ಸುಮಲತಾ, ಕಂದಾಯ ಸಚಿವ ಆರ್.ಅಶೋಕ್, ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್, ಶ್ರೀರಂಗಪಟ್ಟಣ ತಾಲೂಕು ಬಿಜೆಪಿ ಅಧ್ಯಕ್ಷ ರಮೇಶ್, ಪ್ರಧಾನ ಕಾರ್ಯದರ್ಶಿ ಸಂತೋಷ್, ಬಿಜೆಪಿ ಮುಖಂಡರಾದ ಡಾ.ಸಿದ್ದರಾಮಯ್ಯ, ಕೆ.ಎಸ್.ನಂಜುಂಡೇ ಗೌಡ, ಶ್ರೀಧರ್, ಬೇವಿನಹಳ್ಳಿ ಗ್ರಾಪಂ ಅಧ್ಯಕ್ಷ ಮಹೇಶ್ ಹಾಜರಿದ್ದರು.

40% ಬಿಜೆಪಿ ಸರ್ಕಾರ ಕಿತ್ತೊಗೆಯಿರಿ: ಖರ್ಗೆ



ಕೆಆರ್.ಪೇಟೆ, ಏ.29– ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಬೇಕೆಂದು ಸಾರ್ವ ಜನಿಕರು ಬಯಸಿದ್ದಾರೆ. ಈ ನಿಟ್ಟಿನಲ್ಲಿ 40% ಸರ್ಕಾರ ಕಿತ್ತೊಗೆಯಲು ಯುವಕರು, ಮಹಿಳೆಯರು ಎಲ್ಲಾ ವರ್ಗದ ಜನ ಸಿದ್ಧರಿದ್ದಾರೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಿಳಿಸಿದರು.

ಪಟ್ಟಣದ ಟಿಎಪಿಸಿಎಂಎಸ್‌ನ ಎಸ್.ಎಂ. ಲಿಂಗಪ್ಪ ಸಮುದಾಯ ಭವನದ ಆವರ ಣದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಬಿ.ಎಲ್.ದೇವ ರಾಜು ಪರ ಮತಯಾಚಿಸಿ ಮಾತನಾಡಿದ ಅವರು, ನನಗೆ 81 ವರ್ಷ. ನಾನು 52 ವರ್ಷಗಳಿಂದ ರಾಜಕಾರಣ ಮಾಡುತ್ತಿದ್ದೇನೆ. ಆದರೆ ಇಂತಹ ಭ್ರಷ್ಟ ಸರ್ಕಾರ ನೋಡಿರ ಲಿಲ್ಲ. ರಾಜ್ಯದ ಬಿಜೆಪಿ ಸರ್ಕಾರ ತೊಲಗಿ ದರೆ ರಾಜ್ಯಕ್ಕೆ ಒಳ್ಳೆಯದಾಗುತ್ತದೆ. ಕರ್ನಾ ಟಕದ 40% ಸರ್ಕಾರದಂತಹ ಕೆಟ್ಟ ಸರ್ಕಾರ ವನ್ನು ಎಂದೂ ನೋಡಿಲ್ಲ. ಕಟ್ಟಡಗಳು, ರಸ್ತೆ ಸೇರಿದಂತೆ ಎಲ್ಲಾ ಕೆಲಸಗಳಿಗೂ ಕಮಿಷನ್ ತೆಗೆದುಕೊಳ್ಳುತ್ತಿದ್ದಾರೆ. ಈ ಬಗ್ಗೆ ಪ್ರಧಾನಮಂತ್ರಿಗಳ ಕಾರ್ಯಾಲಯ, ರಾಷ್ಟ್ರಪತಿ, ರಾಜ್ಯಪಾಲರು, ಲೋಕಾಯುಕ್ತಕ್ಕೆ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದರು.

ಪ್ರಧಾನಮಂತ್ರಿ ಎಲ್ಲಿಗೆ ಹೋದರೂ ನಾನು ಸಾರ್ವಜನಿಕರ ಹಣ ತಿನ್ನುವುದಿಲ್ಲ, ತಿನ್ನಲು ಬಿಡುವುದಿಲ್ಲ ಎನ್ನುತ್ತಾರೆ. ಆದರೆ ಡಬಲ್ ಇಂಜಿನ್ ಸರ್ಕಾರ ಎನ್ನುತ್ತಿರುವ ನೀವು ರಾಜ್ಯ ಸರ್ಕಾರದ ಭ್ರಷ್ಟಾಚಾರದ ಬಗ್ಗೆ ತುಟಿ ಬಿಚ್ಚುತ್ತಿಲ್ಲ. ಯಾರಾದರೂ ಏನಾದರೂ ಪ್ರಶ್ನಿಸಿದರೆ ಅವರಿಗೆ ಇಡಿ, ಸಿಬಿಐ, ಲೋಕಾಯುಕ್ತಗಳಿಂದ ದಾಳಿ ಮಾಡಿ ಸುತ್ತಾರೆ. ನಮ್ಮ ಪಕ್ಷದವರನ್ನು ಹೆದರಿಸಿ, ಬೆದರಿಸಿ ತಮ್ಮ ಕಡೆಗೆ ಸೆಳೆಯುತ್ತಾರೆ ಎಂದು ಆರೋಪಿಸಿದ ಅವರು ಕಾಂಗ್ರೆಸ್ ಪಕ್ಷಕ್ಕೆ 70 ವರ್ಷಗಳ ಇತಿಹಾಸವಿದೆ. ಪ್ರಜಾ ಪ್ರಭುತ್ವದ ತಳಹದಿ ಮೇಲೆ ಶಾಲಾ, ಕಾಲೇಜು, ಸಂವಿಧಾನ ಎಲ್ಲವನ್ನು ನಿರ್ಮಾಣ ಮಾಡಿ ಭದ್ರ ಬುನಾದಿ ಹಾಕಿದೆ. ಸಂವಿಧಾನ ಉಳಿಯಬೇಕಾದರೆ ಕಾಂಗ್ರೆಸ್‌ಗೆ ಮತ ನೀಡಿ 5 ಗ್ಯಾರಂಟಿಗಳನ್ನು ಈಡೇರಿಸಲಿ ದ್ದೇವೆ ಎಂದು ತಿಳಿಸಿದರು.

ಬಿಜೆಪಿ ಸರ್ಕಾರ ಇರುವ ರಾಜ್ಯಗಳಲ್ಲಿ ಉತ್ತಮ ಆಡಳಿತ ನೀಡುತ್ತಿದ್ದಾರೆ ಎಂದು ಮೋದಿ ಹೊಗಳುತ್ತಾರೆ. ಬಿಜೆಪಿಯೇತರ ಸರ್ಕಾರ ಇರುವ ರಾಜ್ಯಗಳು ಭ್ರಷ್ಟಾಚಾರ ದಿಂದ ತುಂಬಿರುವ ಮುಖ್ಯಮಂತ್ರಿಗಳಿ ದ್ದಾರೆ ಎಂದು ಮೋದಿ ಟೀಕಿಸುತ್ತಾರೆ. ಪ್ರತಿ ವ್ಯಕ್ತಿಗೂ 15 ಲಕ್ಷ ರೂ. ಖಾತೆಗೆ ಜಮಾ ಮಾಡುತ್ತೇವೆ, ಪ್ರತಿ ವರ್ಷ ಎರಡು ಕೋಟಿ ಉದ್ಯೋಗ ಕೊಡುತ್ತೇವೆ ಎಂದಿದ್ದರು. 9 ವರ್ಷದಿಂದ ಒಂದು ಲಕ್ಷ ಮಂದಿಗೂ ಉದ್ಯೋಗ ಕೊಟ್ಟಿಲ್ಲ. 410 ರೂ. ಇದ್ದ ಸಿಲಿಂಡರ್ ಇಂದು 1150 ರೂ. ಆಗಿದೆ. ಎಲ್ಲಿ ನಿಮ್ಮ ಉಚಿತ ಅಡುಗೆ ಸಿಲಿಂಡರ್ ಎಂದು ಪ್ರಶ್ನಿಸಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾತನಾಡಿದರು. ವೇದಿಕೆಯಲ್ಲಿ ಕೇಂದ್ರದ ಮಾಜಿ ಸಚಿವ ಕೆ.ರೆಹಮಾನ್‌ಖಾನ್, ಮಾಜಿ ಸಚಿವರಾದ ಎನ್.ಚೆಲುವರಾಯ ಸ್ವಾಮಿ, ಬಿ.ಸೋಮಶೇಖರ್, ಮಾಜಿ ಶಾಸಕ ರಾದ ಕೆ.ಬಿ.ಚಂದ್ರಶೇಖರ್, ಬಿ.ಪ್ರಕಾಶ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಕಾಂಗ್ರೆಸ್ ಮುಖಂಡರಾದ ವಿಜಯ್ ರಾಮೇಗೌಡ, ಎಂ.ಡಿ.ಕೃಷ್ಣಮೂರ್ತಿ, ರಂಗಪ್ಪ, ರಾಜಯ್ಯ, ಶಶಿಧರ್ ಸಂಗಾಪುರ, ತಮಿಳುನಾಡು ಶಾಸಕ ಮಾಲ್ಗುಡಿ, ತಾಲೂಕು ಉಸ್ತುವಾರಿ ಸಿ.ಆರ್.ರಮೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕಿಕ್ಕೇರಿ ಸುರೇಶ್, ಬಿ.ನಾಗೇಂದ್ರಕುಮಾರ್, ಜಿಲ್ಲಾ ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ಅಂಜನಾ ಶ್ರೀಕಾಂತ್ ಸೇರಿದಂತೆ ಇತರರಿದ್ದರು.

ಕಾಂಗ್ರೆಸ್ ಮುಖಂಡ ರವಿಕುಮಾರ್ ಜೆಡಿಎಸ್ ಸೇರ್ಪಡೆ



ಪಾಂಡವಪುರ, ಏ.29– ಪಟ್ಟಣದ ಶಾಸಕರ ನಿವಾಸದಲ್ಲಿ ಮನ್‌ಮುಲ್ ಮಾಜಿ ಉಪಾಧ್ಯಕ್ಷ, ಕಾಂಗ್ರೆಸ್ ಮುಖಂಡ ಗೌಡಗೆರೆ ಜಿ.ಇ.ರವಿಕುಮಾರ್ ಮತ್ತು ಬೆಂಬಲಿಗರು ಕಾಂಗ್ರೆಸ್ ತೊರೆದು ಶಾಸಕ ಸಿ.ಎಸ್.ಪುಟ್ಟರಾಜು ನೇತೃತ್ವದಲ್ಲಿ ಜೆಡಿಎಸ್ ಸೇರ್ಪಡೆಗೊಂಡರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಿ.ಎಸ್.ಪುಟ್ಟರಾಜು, ಮನ್‌ಮುಲ್ ಮಾಜಿ ಉಪಾಧ್ಯಕ್ಷ ಜಿ.ಇ.ರವಿಕುಮಾರ್, ಅವರ ತಂದೆ ಕಾಲದಿಂದಲೂ ಕಾಂಗ್ರೆಸ್ ಪಕ್ಷದಲ್ಲಿ ಗುರುತಿಸಿಕೊಂಡಿದ್ದರು. ಇದೀಗ ನಮ್ಮ ಜೆಡಿಎಸ್ ಪಕ್ಷಕ್ಕೆ ಬಂದಿರುವುದು ಪಕ್ಷಕ್ಕೆ ಶಕ್ತಿ ಬಂದಂತಾಗಿದೆ. ಇವರೊಂದಿಗೆ ಬೆಳ್ಳಾಳೆ, ನರಹಳ್ಳಿ, ಹಳೆಬೀಡು, ಹೊಸಕೋಟೆ, ಚಿಕ್ಕಾಡೆ ಸೇರಿದಂತೆ ಹಲವು ಮುಖಂಡರು ಪಕ್ಷ ಸೇರ್ಪಡೆಗೊಂಡಿದ್ದಾರೆ. ಕ್ಷೇತ್ರದಲ್ಲಿ ನಾನು ಗೆಲ್ಲುವ ವಿಶ್ವಾಸವಿದ್ದು, ಕ್ಷೇತ್ರದಲ್ಲಿ ನಾನು ಮಾಡಿರುವ ಅಭಿವೃದ್ಧಿ ಕೆಲಸಗಳೇ ನನ್ನ ಗೆಲುವಿಗೆ ಸಹಕಾರಿಯಾಗಲಿದೆ ಎಂದರು. ಮಂಡ್ಯದಲ್ಲಿ 7 ಕ್ಷೇತ್ರದಲ್ಲೂ ಜೆಡಿಎಸ್ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ. ಜೆಡಿಎಸ್‌ನಲ್ಲಿ ಬಂಡಾಯ ಇಲ್ಲ. ಕೆ.ಆರ್.ಪೇಟೆ ಹಾಗೂ ಮಂಡ್ಯದಲ್ಲೂ ಜೆಡಿಎಸ್ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ ಎನ್ನುವ ವಿಶ್ವಾಸವಿದೆ ಎಂದರು. ನಮ್ಮ ನಾಯಕ ಕುಮಾರಸ್ವಾಮಿ ಅವರು ಜಿಲ್ಲೆಯ 7 ಅಭ್ಯರ್ಥಿಗಳೊಂದಿಗೂ ಬಿಡದಿಯಲ್ಲಿ ಸಭೆ ನಡೆಸಿ ಯಾವರೀತಿ ಚುನಾವಣೆ ಎದುರಿಸಬೇಕೆಂಬುದರ ಬಗ್ಗೆ ಚರ್ಚಿಸಿದ್ದಾರೆ. ಪಕ್ಷದ ವರಿಷ್ಠ ಎಚ್.ಡಿ.ದೇವೇಗೌಡರು ಜಿಲ್ಲೆಯಲ್ಲಿ ಮೇ 5 ಮತ್ತು 6ರಂದು ಪ್ರವಾಸ ನಡೆಸಿ ಅಭ್ಯರ್ಥಿಗಳ ಪರ ಮತ ಯಾಚಿಸಲಿದ್ದಾರೆ ಎಂದರು. ಈ ವೇಳೆ ಜೆಡಿಎಸ್ ಅಧ್ಯಕ್ಷ ಎಸ್.ಎ.ಮಲ್ಲೇಶ್, ವೈರಮುಡಿಗೌಡ, ಪುಟ್ಟಣ್ಣ, ಪ್ರಭಾಕರ್, ಭಾಸ್ಕರ್, ಗಿರೀಶ್ ಸೇರಿದಂತೆ ಇತರರಿದ್ದರು.

ಬಸರಾಳು ಹೋಬಳಿ ವಿವಿಧೆಡೆ ರಾಮಚಂದ್ರ ಪ್ರಚಾರ



ಮಂಡ್ಯ, ಏ.29– ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಬಿ.ಆರ್.ರಾಮಚಂದ್ರ ಅವರು ಬಸರಾಳು ಹೋಬಳಿಯ ವಿವಿಧ ಗ್ರಾಮಗಳಲ್ಲಿ ಚುನಾವಣಾ ಪ್ರಚಾರ ನಡೆಸಿದರು.

ಬಸರಾಳು ಹೋಬಳಿ ಹನಗನಹಳ್ಳಿಯಲ್ಲಿ ಚುನಾ ವಣಾ ಪ್ರಚಾರ ನಡೆಸಿ ಮಾತನಾಡಿದ ಅವರು, ಪಂಚ ರತ್ನ ಯೋಜನೆಗಳು ಜಾರಿಯಾಗಬೇಕಾದರೆ ಹೆಚ್.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಬೇಕು. ಹೀಗಾಗಿ ಈ ಬಾರಿ ಮಂಡ್ಯ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಯಾದ ನನ್ನನ್ನು ಅತ್ಯಧಿಕ ಮತಗಳಿಂದ ಗೆಲ್ಲಿಸಿಕೊಡಿ ಎಂದು ಮನವಿ ಮಾಡಿದರು.

ಈಗಾಗಲೇ ಕ್ಷೇತ್ರದಲ್ಲಿ ಶಂಭು ಧರ್ಮ ಯಾತ್ರೆ ಹಾಗೂ ಶಾಲಾ ಮಕ್ಕಳಿಗೆ ಬ್ಯಾಗ್ ವಿತರಣೆ ಸೇರಿದಂತೆ ಹಲವು ಕಾರ್ಯಕ್ರಮ ಮಾಡುವ ಮೂಲಕ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿರುವುದರಿಂದ ಪಕ್ಷ ನನ್ನನ್ನು ಅಧಿಕೃತ ಅಭ್ಯರ್ಥಿಯಾಗಿ ಮಾಡಿದೆ. ನೀವೆ ಲ್ಲರೂ ಒಗ್ಗಟ್ಟಾಗಿ ನನ್ನನ್ನು ಬೆಂಬಲಿಸುವಂತೆ ಮನವಿ ಮಾಡಿದರು. ನಿಮ್ಮ ಸೇವೆ ಮಾಡಲು ಸದಾ ಸಿದ್ಧನಿದ್ದೇನೆ. ಆದ್ದರಿಂದ ಬಹು ಮತಗಳಿಂದ ನನ್ನನ್ನು ಶಾಸಕನಾಗಿ ಆಯ್ಕೆ ಮಾಡುವ ಮೂಲಕ ವಿಧಾನಸೌಧಕ್ಕೆ ಕಳುಹಿಸಿಕೊಡಿ ಎಂದರು.

ಚುನಾವಣೆ ನಿಮಿತ್ತ ಜೆಡಿಎಸ್ ಬಿಡುಗಡೆ ಮಾಡಿರುವ ಜನಪರ ಪ್ರಣಾಳಿಕೆ ಪಕ್ಷದ ಅಭ್ಯರ್ಥಿಗಳ ಗೆಲುವಿಗೆ ವರವಾಗಲಿದೆ. ರೈತರು, ಮಹಿಳೆಯರು, ವೃದ್ಧರು, ಶ್ರಮಿಕರು ಒಳಗೊಂಡಂತೆ ಸಮಾಜದ ಎಲ್ಲಾ ವರ್ಗದವರ ಜೀವನ ಮಟ್ಟ ಸುಧಾರಣೆಗೆ ಪ್ರಣಾಳಿಕೆ ಪೂರಕವಾಗಿದ್ದು, ಬಡವರ ಕಷ್ಟಗಳನ್ನು ಪರಿಹರಿಸಿ ಅಸಹಾಯಕರಿಗೆ ಜೀವನ ಭದ್ರತೆ ಒದಗಿಸುವ, ದೇಶದಲ್ಲೇ ಮಾದರಿ ಪ್ರಣಾಳಿಕೆ ಇದಾ ಗಿದೆ ಎಂದರು. ದೊಡ್ಡಗರುಡನಹಳ್ಳಿ, ಭವಾನಿ ಕೊಪ್ಪಲು, ಹೊಡಾಘಟ್ಟ, ನಂಜೇಗೌಡನಕೊಪ್ಪಲು, ಹನಗನಹಳ್ಳಿ, ಸಿದ್ದೇಗೌಡನಕೊಪ್ಪಲು, ನಂದಹಳ್ಳಿ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಚುನಾವಣಾ ಪ್ರಚಾರ ನಡೆಸಿದರು.

ಈ ಸಂದರ್ಭ ಜೆಡಿಎಸ್ ಎಸ್‌ಸಿ ವಿಭಾಗದ ಜಿಲ್ಲಾಧ್ಯಕ್ಷ ಜಯರಾಂ, ನಗರಸಭಾ ಸದಸ್ಯ ನಾಗೇಶ್, ಮುಖಂಡ ರಾದ ಹೇಮಂತು ಸೇರಿದಂತೆ ಮತ್ತಿತರರಿದ್ದರು.

ಚಲಿಸುತ್ತಿದ್ದ ರೈಲು ಹತ್ತಲು ಹೋಗಿ ಕಾಲು ಕಳೆದುಕೊಂಡ ಯುವತಿ

ಮಂಡ್ಯ, ಏ.29– ಚಲಿಸುತ್ತಿದ್ದ ರೈಲು ಹತ್ತಲು ಹೋದ ಯುವತಿಯೋರ್ವಳು ಕಾಲು ಕಳೆದುಕೊಂಡಿ ರುವ ಘಟನೆ ತಾಲೂಕಿನ ಹನಕೆರೆ ರೈಲ್ವೆ ನಿಲ್ದಾಣದಲ್ಲಿ ಶನಿವಾರ ಸಂಭವಿಸಿದೆ.

ಗದಗ ಜಿಲ್ಲೆ ಶಿರಹಟ್ಟಿ ತಾಲೂಕಿನ ಹನುಮಂತಯ್ಯ ಅವರ ಪುತ್ರಿ, ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಟಾಟಾ ಎಲೆಕ್ಟ್ರಾನಿಕ್ಸ್ ಕಂಪನಿ ಉದ್ಯೋಗಿ ಅನ್ನಪೂರ್ಣ (23) ಕಾಲು ಕಳೆದುಕೊಂಡವರು. ಬೆಂಗಳೂರಿನ ಪೀಣ್ಯ ದಾರ ಸರಹಳ್ಳಿಯ ಮಾವನ ಮನೆಯಲ್ಲಿ ವಾಸವಿದ್ದ ಅನ್ನಪೂರ್ಣ ಕೆಲಸದ ನಿಮಿತ್ತ ರಾಮನಗರದಿಂದ ಮೈಸೂರಿಗೆ ತೆರಳುವಾಗ ಈ ದುರ್ಘಟನೆ ಸಂಭವಿಸಿದೆ.

ರೈಲಿನಲ್ಲಿ ಮೈಸೂರಿಗೆ ತೆರಳುತ್ತಿದ್ದಾಗ ರೈಲು ಹನಕೆರೆ ಬಳಿ ನಿಂತಿದೆ. ಆಗ ಫೋನ್‌ನಲ್ಲಿ ಮಾತನಾಡಲು ಕೆಳಗಿಳಿದ ಅನ್ನಪೂರ್ಣ ರೈಲು ಹೊರಡುವುದನ್ನು ಗಮನಿಸಿಲ್ಲ. ನಿಧಾನಗತಿಯಲ್ಲಿ ತೆರಳುತ್ತಿದ್ದ ರೈಲನ್ನು ಹತ್ತಲು ಹೋದಾಗ ಆಯತಪ್ಪಿ ಬಿದ್ದ ಪರಿಣಾಮ ಎರಡು ಕಾಲುಗಳು ತುಂಡಾಗಿವೆ. ಬಳಿಕ ಅನ್ನಪೂರ್ಣ ರನ್ನು ಆಂಬುಲೆನ್ಸ್‌ನಲ್ಲಿ ಬೆಂಗಳೂರಿನ ಸಂಜಯ್ ಗಾಂಧಿ ಆಸ್ಪತ್ರೆಗೆ ಚಿಕಿತ್ಸೆಗೆ ರವಾನಿಸಲಾಗಿದ್ದು, ಚಿಂತಾಜನಕ ಸ್ಥಿತಿಯಲ್ಲಿದ್ದಾರೆ. ಈ ಸಂಬಂಧ ಮಂಡ್ಯ ನಗರ ರೈಲ್ವೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೂರನೇ ಪುಟದಿಂದ

ಮಡಿಕೇರಿಯಲ್ಲಿ ಅಮಿತ್ ಶಾ ಭರ್ಜರಿ ರೋಡ್ ಶೋ

ಆಗಮಿಸಿ ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಅವರೊಂದಿಗೆ ರಾಜ್ಯ ಬಿಜೆಪಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಮಡಿಕೇರಿ ಕ್ಷೇತ್ರದ ಅಭ್ಯರ್ಥಿ ಅಪ್ಪಚ್ಚು ರಂಜನ್, ವಿರಾಜಪೇಟೆ ಕ್ಷೇತ್ರದ ಅಭ್ಯರ್ಥಿ ಕೆ.ಜಿ.ಬೋಪಯ್ಯ, ಸಂಸದ ಪ್ರತಾಪ್‌ಸಿಂಹ, ಜಿಲ್ಲಾ ಚುನಾವಣಾ ಉಸ್ತುವಾರಿ ಪ್ರತಾಪಸಿಂಹ ನಾಯಕ್, ಎಂಎಲ್‌ಸಿ ಸುಜಾ ಕುಶಾಲಪ್ಪ, ಮಾಜಿ ಎಂಎಲ್‌ಸಿ ಎಸ್.ಜಿ.ಮೇದಪ್ಪ, ಜಿಲ್ಲಾ ಬಿಜೆಪಿ ಅಧ್ಯಕ್ಷ ರಾಬಿನ್ ದೇವಯ್ಯ ಸೇರಿದಂತೆ ಹಲವು ಗಣ್ಯರು ಹಾಜರಿದ್ದರು.

ಕೊಡಗಿನ ಪೇಟದಲ್ಲಿ ಮಿಂಚಿದ ಶಾ: ಈ ಸಂದರ್ಭ ಜಿಲ್ಲಾ ಬಿಜೆಪಿ ಅಧ್ಯಕ್ಷ ರಾಬಿನ್ ದೇವಯ್ಯ ಮತ್ತು ಪಕ್ಷ ಪ್ರಮುಖರು ಅಮಿತ್ ಶಾ ಅವರಿಗೆ ಕೊಡಗಿನ ಪೇಟವನ್ನು ತೊಡಿಸಿ ಗೌರವಿಸಿದರು. ಈ ಪೇಟದೊಂದಿಗೆ ಸಹಸ್ರಾರು ಸಂಖ್ಯೆಯಲ್ಲಿ ನೆರೆದಿದ್ದ ಬಿಜೆಪಿ ಕಾರ್ಯಕರ್ತರ ಸಮ್ಮುಖದಲ್ಲಿ ರೋಡ್ ಶೋ ನಡೆಸಿದ ಅಮಿತ್ ಶಾ, ನೆರೆದಿದ್ದ ಕಾರ್ಯಕರ್ತರು ಸಾರ್ವಜನಿಕರು, ಕಟ್ಟಡಗಳ ಮೇಲೆ ನಿಂತು ಕುತೂಹಲದ ನೋಟ ಬೀರುತ್ತಿದ್ದವರತ್ತ ಕೈ ಬೀಸಿ, ನಗೆ ಬೀರಿದರು. ಅಮಿತ್ ಶಾ ಅವರು ಸಾಗಿ ಬಂದ ಹಾದಿಯುದ್ದಕ್ಕೂ ಪಕ್ಷದ ಅಭಿಮಾನಿ ಗಳು ಕಾರ್ಯಕರ್ತರು ಪುಷ್ಪವೃಷ್ಟಿ ಸುರಿಸಿ ಶುಭ ಕೋರಿದ್ದು ಗಮನ ಸೆಳೆಯಿತು. ರೋಡ್ ಶೋ ನಡೆದ ಹಾದಿಯುದ್ದಕ್ಕೂ ಮೋದಿ, ಅಮಿತ್ ಶಾ, ಅಪ್ಪಚ್ಚು ರಂಜನ್, ಕೆ.ಜಿ. ಬೋಪಯ್ಯ ಪರವಾದ ಘೋಷಣೆಗಳು ಮುಗಿಲು ಮುಟ್ಟಿತ್ತು.

ಮಾತಿಲ್ಲದೆ ತೆರಳಿದ ಶಾ: ಕೊಂಚ ವಿಳಂಬವಾಗಿ ಮಡಿಕೇರಿಗೆ ಆಗಮಿಸಿದ ಅಮಿತ್ ಶಾ ಅವರು, ರೋಡ್ ಶೋವನ್ನು ಇತರೆ ಜಿಲ್ಲೆಗಳಿಗೆ ತೆರಳಬೇಕಾದ ಅನಿವಾರ್ಯ ತೆಗಳ ಹಿನ್ನೆಲೆಯಲ್ಲಿ ಸ್ಕ್ವಾಡರ್ನ್ ಲೀಡರ್ ದೇವಯ್ಯ ಅವರ ವೃತ್ತದ ಬಳಿ ಮುಕ್ತಾಯಗೊಳಿಸಿದರು. ಈ ಹಂತದಲ್ಲಿ ಅವರು ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡುತ್ತಾರೆನ್ನುವ ನಿರೀಕ್ಷೆಗಳು ಹುಸಿಯಾ ಯಿತು. ಅಮಿತ್ ಶಾ ಕಾರ್ಯಕರ್ತರತ್ತ ಕೈಬೀಸಿ ಮಾತಿಲ್ಲದೆ ವಾಹನದಿಂದ ಕೆಳಕ್ಕಿಳಿದು ನಿರಾಸೆ ಮೂಡಿಸಿದರು.

ಬಸವಳಿದ ಕಾರ್ಯಕರ್ತ: ನಿಗದಿಯಂತೆ 10.45ಕ್ಕೆ ಅಮಿತ್ ಶಾ ಬರುತ್ತಾರೆನ್ನುವ ಕಾರಣದಿಂದ ಜಿಲ್ಲೆಯ ನಾನಾ ಭಾಗಗಳಿಂದ ನೂರಾರು ವಾಹನಗಳಲ್ಲಿ ಆಗಮಿಸಿದ ಸಹಸ್ರಾರು ಕಾರ್ಯಕರ್ತರು, ಶ್ರೀ ಚೌಡೇ ಶ್ವರಿ ದೇಗುಲದ ಬಳಿಯಿಂದ ಮಹದೇವಪೇಟೆ ಯವರೆಗೆ ಕಿಕ್ಕಿರಿದು ನೆರೆದಿದ್ದರು. ಅಮಿತ್ ಶಾ ಅವರ ಆಗಮನದ ವಿಳಂಬದೊಂದಿಗೆ ಕಾರ್ಯ ಕರ್ತರು ಬಿಸಿಲ ಬೇಗೆಯಿಂದ ಬಳಲಿದರಾದರು, ಸ್ಥಳ ಬಿಟ್ಟು ಕದಲದೆ ಅಚ್ಚರಿ ಮೂಡಿಸಿದರು.

ರೋಡ್ ಶೋದಲ್ಲಿ ಬಿಜೆಪಿ ಪ್ರಮುಖರಾದ ರೀನಾ ಪ್ರಕಾಶ್, ಮಡಿಕೇರಿ ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ, ಅಭಿಮನ್ಯು ಕುಮಾರ್, ಅರುಣ್ ಭೀಮಯ್ಯ, ಬಲ್ಲರಂಡ ಮಣಿ, ಮಾಜಿ ಎಂಎಲ್‌ಸಿ ಸುನಿಲ್ ಸುಬ್ರಮಣಿ, ನೆಲ್ಲೀರ ಚಲನ್, ಮಹೇಶ್ ಜೈನಿ, ಉಮೇಶ್ ಸುಬ್ರಮಣಿ, ವಿ.ಕೆ. ಲೋಕೇಶ್, ವಿ.ಎಂ. ವಿಜಯ, ದರ್ಶನ್ ಜೋಯಪ್ಪ , ಸವಿತಾ ರಾಕೇಶ್ ಮೊದಲಾದವರು ಪಾಲ್ಗೊಂಡಿದ್ದರು.

ಅಂಗಡಿಗಳು ಬಂದ್: ಕೇಂದ್ರ ಗೃಹ ಸಚಿವರ ಆಗಮನದ ಹಿನ್ನೆಲೆಯಲ್ಲಿ ಇಂದು ಬೆಳಗ್ಗಿನಿಂದಲೆ ಶ್ರೀ ಚೌಡೇಶ್ವರಿ ದೇಗುಲದಿಂದ ಮಹದೇವಪೇಟೆ, ಖಾಸಗಿ ಬಸ್ ನಿಲ್ದಾಣದ ಆಸುಪಾಸಿನ ಬಹುತೇಕ ಅಂಗಡಿ ಮುಂಗಟ್ಟುಗಳನ್ನು ಭದ್ರತೆಯ ದೃಷ್ಟಿಯಿಂದ ಮುಚ್ಚಿಸಲಾಗಿತ್ತಲ್ಲದೆ, ವಾಹನ ಸಂಚಾರಕ್ಕೆ ಮಹ ದೇವಪೇಟೆಯಲ್ಲಿ ನಿರ್ಬಂಧ ಹೇರಲಾಗಿತ್ತು. ಅಮಿತ್ ಶಾ ಭೇಟಿಯ ಹಿನ್ನೆಲೆ ಶ್ರೀ ಚೌಡೇಶ್ವರಿ ದೇವಸ್ಥಾನ ಸೇರಿದಂತೆ, ಅವರು ಸಾಗುವ ಹಾದಿಯಲ್ಲಿ ಜಿಲ್ಲಾ ಪೊಲೀಸ್, ಸಿಐಎಸ್‌ಎಫ್, ಐಟಿಬಿಪಿಂಯು 600ಕ್ಕೂ ಹೆಚ್ಚಿನ ಭದ್ರತಾ ಸಿಬ್ಬಂದಿಗಳನ್ನು ನಿಯೋಜನೆ ಮಾಡಲಾಗಿತ್ತು.

ಐಜಿಪಿ ಪ್ರವೀಣ್ ಮಧುಕರ್ ಪವಾರ್ ಅವರು ಭದ್ರತಾ ವ್ಯವಸ್ಥೆಗಳನ್ನು ಖುದ್ದು ಪರಿಶೀಲಿಸಿದರೆ, ಗೃಹ ಸಚಿವರ ವಿಶೇಷ ರಕ್ಷಣೆಯ ಅಸಿಸ್ಟೆಂಟ್ ಕಮಾಂಡರ್ ಮಹೇಶ್ ಅವರ ಉಸ್ತುವಾರಿಯಲ್ಲಿ ಕಟ್ಟೆಚ್ಚರ ವಹಿಸಲಾಗಿತ್ತು. ದೇವಸ್ಥಾನದಲ್ಲಿ ಗೃಹ ಸಚಿವರಿಗೆ ಪೂಜೆಗಾಗಿ ಮಾಡಿಕೊಂಡ ಸಿದ್ಧತೆಗಳು ಭದ್ರತಾ ಸಿಬಂದಿಗಳಿಂದ ತಪಾಸಣೆಗೆ ಒಳಪಟ್ಟಿತ್ತು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮರಾಜನ್, ಎಎಸ್‌ಪಿ ಸುಂದರರಾಜ್ ನೇತೃತ್ವದಲ್ಲಿ ನಗರದಲ್ಲಿ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಮನೆಯಲ್ಲೇ ಮತದಾನ ಆರಂಭ

ಪರಿಚಯಿಸಲಾಗಿರುವ 80 ವರ್ಷ ದಾಟಿದ ಹಿರಿಯ ಮತದಾರರು ಹಾಗೂ ವಿಶೇಷ ಚೇತನರಿಗೆ ಮನೆಯಲ್ಲೇ ಮತದಾನ ಅವಕಾಶಕ್ಕೆ ಉತ್ತಮ ಸ್ಪಂದನೆ ಸಿಕ್ಕಿದ್ದು, ಶನಿವಾರದಿಂದ ಮತದಾನ ಆರಂಭ ವಾಗಿದೆ. ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯದ ಇತರ ಎಲ್ಲ ಕಡೆ ಈಗಾಗಲೇ ನೋಂದಾಯಿಸಲ್ಪಟ್ಟ ಈ ವಿಭಾ ಗದ ಮತದಾರರ ಬಳಿ ಚುನಾವಣಾ ಅಧಿಕಾರಿ ಗಳೇ ತೆರಳಿ ಬ್ಯಾಲೆಟ್ ಪೇಪರ್ ಮೂಲಕ ಮತದಾನ ಮಾಡಿಸಿದರು. ಈ ವೇಳೆ 80 ವರ್ಷ ದಾಟಿದ ಹಿರಿಯ ಮತದಾರರು ಹಾಗೂ ವಿಶೇಷಚೇತನರು ತಮ್ಮ ಹಕ್ಕನ್ನು ಉತ್ಸಾಹದಿಂದ ಚಲಾವಣೆ ಮಾಡಿದರು.

ಈ ವೇಳೆ ಮೂರೂ ಪಕ್ಷಗಳ ಏಜೆಂಟ್‌ಗಳು ಚುನಾವಣೆ ಅಧಿಕಾರಿಗಳ ಜತೆಗಿದ್ದರು. ಚುನಾವಣೆ ಅಧಿಕಾರಿಗಳ ಸಹಿತ ಎಲ್ಲರೂ ಮತದಾರರ ಮನೆಗೆ ತೆರಳಿದ್ದಾರೆ. ಹೀಗೆ ಎಲ್ಲರ ಸಮ್ಮುಖದಲ್ಲಿಯೇ ಎಲ್ಲಾ ಕಡೆಯೂ ಮತ ಚಲಾವಣೆ ಮಾಡಿಸಲಾ ಗುತ್ತಿದೆ. ಜತೆಗೆ ಗೌಪ್ಯತೆಯನ್ನು ಕಾಯ್ದುಕೊಳ್ಳಲಾಗುತ್ತಿದೆ. ರಾಜ್ಯದಲ್ಲಿ 80 ವರ್ಷ ದಾಟಿದ 12,15,920 ಮತ ದಾರರಿದ್ದರೆ, 19,279 ವಿಶೇಷಚೇತನ ಮತದಾರ ರಿದ್ದಾರೆ. ಇವರೆಲ್ಲರೂ ಮನೆಯಿಂದ ವೋಟ್ ಮಾಡಲು ಅವಕಾಶ ಪಡೆದಿದ್ದಾರೆ. ಚುನಾವಣೆ ಅಧಿಕಾರಿಗಳು ಇವರಿಂದ ಮತ ಹಾಕಿಸಿಕೊಳ್ಳುವಾಗ ಗೌಪ್ಯತೆ ಕಾಪಾಡು ವಲ್ಲಿ ಎಚ್ಚರ ವಹಿಸುತ್ತಿದ್ದಾರೆ. ಚುನಾವಣೆ ಆಯೋಗದ ಮಾಹಿತಿ ಪ್ರಕಾರ, ರಾಜ್ಯದಲ್ಲಿ 80 ವರ್ಷ ದಾಟಿದ ಪುರುಷರು 5,46,487 ಇದ್ದರೆ, ಮಹಿಳೆಯರ ಸಂಖ್ಯೆ 6,69,417 ಇದೆ. 80 ಸಾವಿರಕ್ಕೂ ಅಧಿಕ ಜನ ಮಾತ್ರ ಮನೆಯಿಂದಲೇ ಮತದಾನ ಮಾಡಲು ಹೆಸರು ನೋಂದಾಯಿಸಿ ಕೊಂಡಿದ್ದಾರೆ. ಮೇ 6ರ ಸಂಜೆ 6 ಗಂಟೆವರೆಗೆ ಹಿರಿಯ ಮತದಾರರು ಮನೆ ಯಿಂದಲೇ ತಮ್ಮ ಹಕ್ಕನ್ನು ಚಲಾಯಿಸಬಹುದಾಗಿದೆ.



ಚಾಮರಾಜ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಲ್. ನಾಗೇಂದ್ರ ಅವರು ಮೈಸೂರಿನ ವಿನಾಯಕನಗರದಲ್ಲಿ (ಪಡುವಾರಹಳ್ಳಿ) ಪಾದಯಾತ್ರೆ ಮೂಲಕ ಮನೆ–ಮನೆಗೆ ಭೇಟಿ ನೀಡಿ ಮತಯಾಚನೆ ಮಾಡಿದರು. ಈ ಸಂದರ್ಭದಲ್ಲಿ ಕಾರ್ಪೋರೇಟರ್ ಚಿಕ್ಕವೆಂಕಟು ಇತರರು ಉಪಸ್ಥಿತರಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿ ಸಿದ್ದೇಗೌಡರ ಮತಯಾಚನೆ

ಮೈಸೂರು: ಚಾಮುಂಡೇಶ್ವರಿ ಕಾಂಗ್ರೆಸ್ ಅಭ್ಯರ್ಥಿ ಮಾವಿನಹಳ್ಳಿ ಸಿದ್ದೇಗೌಡ ಅವರು ಮೈಸೂರು ಮಹಾನಗರ ಪಾಲಿಕೆಯ 46ನೇ ವಾರ್ಡಿನ ಪಂಚಮುಖಿ ಗಣಪತಿ ದೇವಾಲಯಕ್ಕೆ ಪೂಜೆ ಸಲ್ಲಿಸಿ ರೋಡ್ ಷೋ ಮೂಲಕ ಮತಯಾಚಿಸಿದರು. ಮಾರ್ಬಳ್ಳಿ ಹುಂಡಿ ಮತ್ತು ಮಾರ್ಬಳ್ಳಿ ಗ್ರಾಮದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಿದ್ದೇಗೌಡರವರಿಗೆ ಕಾರ್ಯಕರ್ತರು ಅದ್ದೂರಿ ಸ್ವಾಗತ ಕೋರಿದರು. ಟಿ.ಕಾಟೂರು,ಅರಸಿನಕೆರೆ ಗ್ರಾಮಗಳಲ್ಲಿ ಮನೆ ಮನೆಗೆ ತೆರಳಿ ಮತಯಾಚಿಸಿದರು. ಕೆಪಿಸಿಸಿ ಸದಸ್ಯ ಕೆ.ಮರೀಗೌಡ ಸೇರಿದಂತೆ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.

ಮೇ 3ರಂದು ವಿಶ್ವ ಅಸ್ತಮಾ ದಿನ

ಮೈಸೂರು,ಏ.29– ಅಸ್ತಮಾದ ಬಗ್ಗೆ, ಜಾಗೃತಿ ಮೂಡಿಸಲು ಪ್ರತಿ ವರ್ಷ ಮೇ 3 ರಂದು ಪ್ರಪಂಚದಾದ್ಯಂತ ವಿಶ್ವ ಅಸ್ತಮಾ ದಿನವನ್ನು ಆಚರಿಸಲಾಗುತ್ತಿದೆ. ಇತ್ತೀಚಿನ ಕಲುಷಿತ ವಾತಾವರಣದಲ್ಲಿ ಹಲವಾರು ಮಂದಿಗೆ ಸಾಮಾನ್ಯ ಮತ್ತು ದೀರ್ಘಾವಧಿಯ ಖಾಯಿಲೆಯಾಗಿ ಕಂಡುಬರುವ ಆರೋಗ್ಯ ಸಮಸ್ಯೆಗಳಲ್ಲಿ ಅಸ್ತಮಾ ಕೂಡ ಒಂದಾಗಿದೆ.

ಉಸಿರಾಟದ ಗಾಳಿಯಲ್ಲಿ ಮನುಷ್ಯನ ದೇಹ ಸೇರುವ ಅತ್ಯಂತ ಸಣ್ಣ ಕಣಗಳು ಶ್ವಾಸನಾಳದ ಒಳ ಪದರಗಳನ್ನು ಊದಿಕೊಳ್ಳುವಂತೆ ಮಾಡಿ ಮೂಗಿನಲ್ಲಿ ನಗಡಿ ಸೋರಿಕೆ ಆಗುವಂತೆ ಮಾಡುತ್ತವೆ. ಇದರಿಂದ ಉಸಿರಾಡಲು ತೊಂದರೆಯಾಗಿ ಕೆಮ್ಮು, ದಮ್ಮು ಸಮಾನವಾಗಿ ಗೋಚರಿಸುತ್ತದೆ. ಕೆಲವರಿಗೆ ಇದು ಆರೋಗ್ಯದ ವಿಷಯದಲ್ಲಿ ಅಷ್ಟೇನೂ ಘಾಸಿ ಕೊಡದಿದ್ದರೂ ಇನ್ನೂ ಕೆಲವರಿಗೆ ಕೆಲವು ಅಸ್ತಮಾ ಪ್ರಕಾರಗಳು ತಮ್ಮ ಆರೋಗ್ಯದ ವಿಚಾರದಲ್ಲಿ ಯೋಚನೆ ಮಾಡುವಂತೆ ಮಾಡುತ್ತವೆ. ಇದರ ಸಂಭವಿಸುವಿಕೆ ಕಾಲಾನಂತರದಲ್ಲಿ ಬದಲಾಗುತ್ತದೆ ಮತ್ತು ರಾತ್ರಿಯಲ್ಲಿ ಹೆಚ್ಚು ತೀವ್ರವಾಗಿರುತ್ತದೆ. ಅಸ್ತಮಾವನ್ನು ಶಾಶ್ವತವಾಗಿ ಗುಣಪಡಿಸಲು ಸಾಧ್ಯವಾಗದಿದ್ದರೂ, ಅದನ್ನು ದೊಡ್ಡ ಪ್ರಮಾಣದಲ್ಲಿ ನಿಯಂತ್ರಿಸಬಹುದು. ವಿಶ್ವ ಆರೋಗ್ಯ ಸಂಸ್ಥೆಯ (WHO) 2021ರ ವರದಿಯ ಪ್ರಕಾರ, ಭಾರತದಲ್ಲಿ ಸುಮಾರು 15 ರಿಂದ 20 ಮಿಲಿಯನ್ ಜನರು ಅಸ್ತಮಾದಿಂದ ಬಳಲುತ್ತಿದ್ದಾರೆ, ಇದರಲ್ಲಿ ಪತಿ ವಯಸ್ಸಿನ ರೋಗಿಗಳೂ ಸೇರಿದ್ದಾರೆ.

ಅಸ್ತಮಾದ ಮೊದಲ ಚಿಕಿತ್ಸೆಯೇ ಇನ್‌ಹೇಲರ್. ಬಹಳಷ್ಟು ಜನರಿಗೆ ಇನ್‌ಹೇಲರ್ ರಾಮಬಾಣದಂತೆ ಕೆಲಸ ಮಾಡುತ್ತದೆ. ಇನ್‌ಹೇಲರ್‌ನನ್ನು ವೈದ್ಯರ ಸಲಹೆ ಮೇರೆಗೆ ತೆಗೆದುಕೊಳ್ಳಿ, ವೀಸಿಂಗ್ ಸಮಸ್ಯೆ ಇರುವ ಎಲ್ಲರಿಗೂ ಇನ್‌ಹಲರ್‌ನನ್ನೇ ಸಲಹೆ ನೀಡುವುದಿಲ್ಲ. ಇದಕ್ಕೆ ಇತರೆ ಚಿಕಿತ್ಸೆಗಳಿವೆ. ಹೀಗಾಗಿ ವೀಸಿಂಗ್ ಅಥವಾ ಅಸ್ತಮಾದ ಸಮಸ್ಯೆ ಕಂಡು ಬಂದರೆ ನಿರ್ಲಕ್ಷಿಸದೇ ವೈದ್ಯರನ್ನು ಭೇಟಿ ಮಾಡುವುದು ಒಳ್ಳೆಯದು. ಒಂದು ವೇಳೆ ಅಸ್ತಮಾವನ್ನು ನಿರ್ಲಕ್ಷಿಸಿದರೆ ನಿಮ್ಮ ಉಸಿರಾಟ ಕ್ಷೀಣಿಸುವ ಸಾಧ್ಯತೆ ಹೆಚ್ಚು. ಅದ್ದರಿಂದ ಹತ್ತಿರ ಆಸ್ಪತ್ರೆಯಲ್ಲಿ ಪರೀಕ್ಷೆಯನ್ನು ಮಾಡಿಸಿಕೊಳ್ಳುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ.ಪ್ರಸಾದ್ ಅವರು ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

ವಾಸಿಯಾಗದ ಅಶುದ್ಧ ಗಾಯಗಳ ಚಿಕಿತ್ಸಾ ಶಿಬಿರ

ಮೈಸೂರು, ಏ.29– ಮೈಸೂರಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಮೇ 1 ರಿಂದ 10 ರವರೆಗೆ ದೃಷ್ಟವ್ರಣ– ದೀರ್ಘಕಾಲೀನ ವಾಸಿಯಾಗದ ಅಶುದ್ಧ ಗಾಯಗಳ ಬಗ್ಗೆ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ದೃಷ್ಟವ್ರಣ– ಮಧುಮೇಹದಿಂದ, ವೆರಿಕೋಸ್ ವೇನ್ ನಿಂದ ಅಥವಾ ಆಕ್ಸಿಡೆಂಟ್‌ನಿಂದ ಆಗುವ ದೀರ್ಘಕಾಲಿನ ವಾಸಿಯಾಗದ ಅಶುದ್ಧ ಗಾಯಗಳಿಗೆ ಚಿಕಿತ್ಸೆ ನೀಡಲಾಗುವುದು. ಹೆಚ್ಚಿನ ಮಾಹಿತಿಗೆ ಮೊ. 9740835668, ದೂ. 0821–2548231 ಸಂಪರ್ಕಿಸಬಹುದು.

ತಲೆನೋವಿಗೆ ಚಿಕಿತ್ಸಾ ಶಿಬಿರ

ಮೈಸೂರಿನ ಲಲಿತಾದ್ರಿಪುರ ರಸ್ತೆ ಯಲ್ಲಿರುವ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಮೇ 1 ರಿಂದ 6 ರವರೆಗೆ ತಲೆನೋವುಗಳಿಗೆ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9448211075 ದೂ. 0821–2548231 ಸಂಪರ್ಕಿಸಬಹುದು.

ನಾಗಮ್ಮ ಕೊಟ್ರಪ್ಪ ಶೆಟ್ಟಿ ನಿಧನ



ಮೈಸೂರು, ಏ.29– ಮೈಸೂರಿನ ಶ್ರೀನಗರದ ನಿವಾಸಿ, ನಾಗಮ್ಮ ಕೊಟ್ರಪ್ಪ ಶೆಟ್ಟಿ(86) ಅವರು ಶನಿವಾರ ನಿಧನರಾದರು. ಇವರು ಮೂಲತಃ ಶಿವಮೊಗ್ಗ ಜಿಲ್ಲೆ ಶಿರಾಳಕೊಪ್ಪದವರು.

ವಕೀಲೆ ನಿರ್ಮಲಾ ರೂಪ ಸೇರಿದಂತೆ ಮಕ್ಕಳು, ಮೊಮ್ಮಕ್ಕಳು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ವಿದ್ಯಾರಣ್ಯಪುರಂನ ವೀರಶೈವ ರುದ್ರಭೂಮಿಯಲ್ಲಿ ಭಾನುವಾರ ಅಂತ್ಯ ಸಂಸ್ಕಾರ ನೆರವೇರಿ ಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸರ್ಕಾರಿ ಆಸ್ಪತ್ರೆ, ಶಾಲೆಗಳಿಗೆ ಹೈಟೆಕ್ ಸ್ಪರ್ಶ

ಚಾಮರಾಜ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಮೇಶ್ ಭರವಸೆ



ಮೈಸೂರು, ಏ.29–ವಿಧಾನಸಭಾದ ಸಾರ್ವತ್ರಿಕ ಚುನಾವಣೆ ಹಿನ್ನೆಲೆಯಲ್ಲಿ ಚಾಮರಾಜ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಮೇಶ್ ಅವರು ವಾರ್ಡ್ 40ರ ವ್ಯಾಪ್ತಿಯಲ್ಲಿ ಬಿರುಸಿನ ಮತಯಾಚನೆ ಮಾಡಿದರು.

ಮೈಸೂರಿನ ನಜರ್‌ಬಾದ್‌ನ ವಾರ್ಡ್ ನಂ. 40ರ ವ್ಯಾಪ್ತಿಯ ಮರಗಮ್ಮ ದೇವ ಸ್ಥಾನದಲ್ಲಿ ಕಾರ್ಯಕರ್ತ ಬೆಂಬಲಿಗ ರೊಂದಿಗೆ ವಿಶೇಷ ಪೂಜೆ ಸಲ್ಲಿಸಿ, ಮನೆ ಮನೆಗೆ ಪಾದಯಾತ್ರೆ ಕೈಗೊಂಡು ಮತ ಬೇಟೆ ನಡೆಸಿದರು. ಬಳಿಕ ಅವರು ಮಾತ ನಾಡಿ, ಕ್ಷೇತ್ರದ ಜನತೆಯಿಂದ ಉತ್ತಮ ಪ್ರತಿ ಕ್ರಿಯೆ ವ್ಯಕ್ತವಾಗುತ್ತಿದೆ. ಇಲ್ಲಿನ ಮತ ದಾರರು ಬದಲಾವಣೆ ಬಯಸುತ್ತಿದ್ದಾರೆ. ಇಲ್ಲಿ ನೀರಿನ ಸಮಸ್ಯೆ ತುಂಬಾ ಇದೆ. ರಸ್ತೆ ಕಾಮಗಾರಿ ಕಳಪೆಯಿಂದ ಕೂಡಿದೆ. ಮುಂದೆ ಸರ್ಕಾರಿ ಆಸ್ಪತ್ರೆ ಹಾಗೂ ಶಾಲೆ ಗಳಿಗೆ ದೆಹಲಿ ಮಾದರಿಯಲ್ಲಿ ಹೈಟೆಕ್ ಸ್ಪರ್ಶ ನೀಡುತ್ತೇವೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಆಗುವುದು ಖಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಜೆಡಿಎಸ್ ನಗರಾಧ್ಯಕ್ಷ ಕೆ.ಟಿ.ಚಲುವೇಗೌಡ, ಮಾಜಿ ಮೇಯರ್ ರವಿಕುಮಾರ್(ಚಿನ್ನಿರವಿ), ಚಾಮರಾಜ ಕ್ಷೇತ್ರದ ಅಧ್ಯಕ್ಷ ಪಿ.ಮಂಜುನಾಥ್, ಜೆಡಿಎಸ್ ನಗರ ಸಂಘಟನಾ ಕಾರ್ಯದರ್ಶಿ ಪಿ. ರವಿಕುಮಾರ್, ವಾರ್ಡ್ ನಂ40ರ ಅಧ್ಯಕ್ಷ ಟಿ.ಸುರೇಶ್ ಗೋಲ್ಡ್, ಜೆಡಿಎಸ್ ಮುಖಂಡ ವಿನೋದ್, ಮಹಿಳಾ ಅಧ್ಯಕ್ಷೆ ಸವಿತಾ ಸೇರಿದಂತೆ ಅನೇಕ ಬೆಂಬಲಿಗರು ಮತಯಾಚನೆಯಲ್ಲಿ ಪಾಲ್ಗೊಂಡಿದ್ದರು.



ನಾರಿ ಒಲಿದರೆ ಜಯಭೇರಿ

“ಇಡೀ ರಾಷ್ಟ್ರದ ಗಮನ ಸೆಳೆದಿರುವ ಕರ್ನಾಟಕ ವಿಧಾನಸಭಾ ಚುನಾವಣೆ ಸಮೀಪಿಸುತ್ತಿದ್ದಂತೆ ಮೈಸೂರು ಜಿಲ್ಲೆಯಲ್ಲಿ ಪ್ರಮುಖ ಪಕ್ಷಗಳ ಅಭ್ಯರ್ಥಿಗಳು ಬಿರುಸಿನ ಮತಯಾಚನೆಯಲ್ಲಿ ತೊಡಗಿದ್ದಾರೆ. ಗೆಲುವು ಸಾಧಿಸಲು ತಂತ್ರ-ಪ್ರತಿತಂತ್ರ ರೂಪಿಸುತ್ತಿದ್ದಾರೆ. ಇದರ ನಡುವೆ ರಾಜಕೀಯ ಪಕ್ಷಗಳು 'ಸ್ತ್ರೀ ಶಕ್ತಿ'ಯನ್ನು ಒಲಿಸಿಕೊಳ್ಳುವ ಮೂಲಕ ವಿಜಯದ ಮಾಲೆ ಹಾಕಿಕೊಳ್ಳಲು ಹವಣಿಸುತ್ತಿವೆ.

■ ಎಂ.ಟಿ.ಯೋಗೇಶ್‌ಕುಮಾರ್

ಕರ್ನಾಟಕ ವಿಧಾನಸಭಾ ಚುನಾವಣೆ ಇಡೀ ರಾಷ್ಟ್ರದ ಗಮನ ಸೆಳೆದಿದೆ. ಮೈಸೂರು ಜಿಲ್ಲೆಯಲ್ಲಿ ಪ್ರಮುಖ ಪಕ್ಷಗಳ ಅಭ್ಯರ್ಥಿಗಳು ಬಿರುಸಿನ ಮತಯಾಚನೆಯಲ್ಲಿ ತೊಡಗಿದ್ದಾರೆ. ಗೆಲುವು ಸಾಧಿಸಲು ತಂತ್ರ-ಪ್ರತಿತಂತ್ರ ರೂಪಿಸುತ್ತಿದ್ದಾರೆ. ಇದರ ನಡುವೆ ರಾಜಕೀಯ ಪಕ್ಷಗಳು 'ಸ್ತ್ರೀ ಶಕ್ತಿ' ಮೊರೆ ಹೋಗಿದ್ದಾರೆ. ಸ್ತ್ರೀ ಶಕ್ತಿ ಒಲಿಸಿಕೊಂಡರೆ ಜಯಭೇರಿ ಎಂಬುದು ಖಚಿತವಾಗಿದೆ.

ಮೈಸೂರು ಜಿಲ್ಲೆಯಲ್ಲಿ 11 ವಿಧಾನಸಭಾ ಕ್ಷೇತ್ರಗಳಿವೆ. ನಂಜನಗೂಡು ಹೊರತುಪಡಿಸಿದರೆ ಬಹುತೇಕ ಎಲ್ಲಾ ಕ್ಷೇತ್ರಗಳಲ್ಲೂ ತ್ರಿಕೋನ ಸ್ಪರ್ಧೆ ಖಚಿತ. ಬಿಜೆಪಿ ಅಧಿಕಾರ ಉಳಿಸಿಕೊಳ್ಳುವುದಕ್ಕಾಗಿ ಚುನಾವಣೆಯನ್ನು ಗಂಭೀರವಾಗಿ ಪರಿಗಣಿಸಿದ್ದರೆ, ಕಾಂಗ್ರೆಸ್ ಅಧಿಕಾರವನ್ನು ಪಡೆಯಲೇಬೇಕೆಂದು ಹರಸಾಹಸಪಡುತ್ತಿದೆ. ಇನ್ನು ಜೆಡಿಎಸ್ ಅಸ್ತಿತ್ವ ಸಾಬೀತಿಗೆ ಹೋರಾಡುತ್ತಿದೆ. ಅದು ಸರ್ಕಾರ ರಚನೆಯಲ್ಲಿ ಕಿಂಗ್ ಮೇಕರ್

ಸ್ತ್ರೀ ಶಕ್ತಿ ಒಲಿದರೆ ಜಯ ಗ್ಯಾರಂಟಿ

ಇದುವರೆಗೂ ನಡೆದಿರುವ ಚುನಾವಣೆಗಳಲ್ಲಿ 'ಸ್ತ್ರೀ ಶಕ್ತಿ'ಯದ್ದೇ ಪಾರುಪತ್ಯ ಮೆರೆದಿದೆ. ಹಾಗಾಗಿ ರಾಜಕೀಯ ಪಕ್ಷಗಳು ಈ ಚುನಾವಣೆಯಲ್ಲೂ ಸ್ತ್ರೀ ಶಕ್ತಿಗಳಲ್ಲಿ ಓಲೈಕೆಗೆ ಇನ್ನಿಲ್ಲದ ಕಸರತ್ತು ಆರಂಭಿಸಿವೆ. ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲೂ ಮೊದಲಿನಿಂದಲೂ ಸಂಘಟನೆಯಲ್ಲಿ ಸ್ತ್ರೀ ಶಕ್ತಿ ಸಂಸ್ಥೆಗಳು ಎತ್ತಿದ ಕೈ ಎಂದು ಈಗಾಗಲೇ ಹಲವು ಸಂದರ್ಭದಲ್ಲಿ ಸಾಬೀತಾಗಿದೆ. ಅಲ್ಲದೇ, ಈ ಸಂಘಟನೆಗಳು ಇತ್ತೀಚಿನ ವರ್ಷಗಳಲ್ಲಿ ಪ್ರತೀ ಚುನಾವಣೆಯಲ್ಲಿ ಪ್ರಮುಖ ಪಾತ್ರ ವಹಿಸುವುದು ಖಾತ್ರಿಯಾಗಿದೆ. ಈ ಹಿನ್ನೆಲೆಯಲ್ಲಿ ಪ್ರತಿ ಗ್ರಾಮ, ಪಟ್ಟಣ ಹಾಗೂ ನಗರ ಪ್ರದೇಶ ಅಂದರೆ ಬಡಾವಣೆಗಳ ಮಹಿಳಾ ಸಂಘಟನೆಗಳಿಗೆ ಗಾಳ ಹಾಕಲು ರಾಜಕೀಯ ಪಕ್ಷಗಳು ತೆರೆಮರೆಯ ಕಸರತ್ತು ನಡೆಸುತ್ತಿವೆ. ಇದರಿಂದ ಸಹಜವಾಗಿಯೇ ಸ್ತ್ರೀಶಕ್ತಿ ಸಂಘಟನೆಗಳು, ಸ್ತ್ರೀ ಸ್ವಸಹಾಯ ಸಂಘ'ಗಳಲ್ಲಿ ಚಟುವಟಿಕೆ ಗರಿಗೆದರಿದೆ.



ಆದರೂ ಅಚ್ಚರಿಯಿಲ್ಲ. ಹಾಗಾಗಿ ಮೂರು ಪಕ್ಷಗಳ ಅಭ್ಯರ್ಥಿಗಳಿಗೆ ಈ ಚುನಾವಣೆ ಸತ್ವಪರೀಕ್ಷೆ. ಇದರ ಪರಿಣಾಮ ಚುನಾವಣಾ ಕಣ ಪ್ರತಿಷ್ಠೆಯಾಗಿ ಮಾರ್ಪಟ್ಟಿದೆ. ಪ್ರಮುಖ ಪಕ್ಷಗಳ ಅಭ್ಯರ್ಥಿಗಳು ಚುನಾವಣೆಯಲ್ಲಿ ತಮ್ಮ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸುವ ಮಹಿಳಾ ಮತದಾರರನ್ನು ಓಲೈಸಿಕೊಳ್ಳಲು 'ಸ್ತ್ರೀ ಶಕ್ತಿ' ಸಂಘಟನೆಗಳ ಮೊರೆ ಹೋಗುತ್ತಿದ್ದಾರೆ.

ಮಹಿಳಾ ಮತದಾರರೇ ಮೇಲುಗೈ: ಮೈಸೂರು ಜಿಲ್ಲೆಯಲ್ಲಿ ಈ ಬಾರಿ **26,38,487** ಮಂದಿ ಮತದಾನ ಹಕ್ಕು ಹೊಂದಿದ್ದಾರೆ. ಅವರಲ್ಲಿ **13,08,771** ಪುರುಷ ಮತದಾರರಿದ್ದರೆ, **13,29,493** ಮಹಿಳಾ ಮತದಾರರು. ಅಂದರೆ ಪುರುಷ ಮತದಾರರಿಗಿಂತ **20,722** ಮಹಿಳಾ ಮತದಾರರೇ ಹೆಚ್ಚಾಗಿದ್ದಾರೆ. ಎಲ್ಲಾ ಕ್ಷೇತ್ರಗಳಲ್ಲೂ ಮಹಿಳಾ ಮತದಾರರೇ ಮುನ್ನಡೆ ಕಾಯ್ದುಕೊಂಡು ರಾಜಕೀಯ ಪಕ್ಷಗಳ ಚಿತ್ತವನ್ನು ತಮ್ಮತ್ತ ಸೆಳೆಯುತ್ತಿದ್ದಾರೆ.

ಸ್ವಸಹಾಯ ಗುಂಪುಗಳಲ್ಲಿ: ಒಂದೆಡೆ ಸ್ತ್ರೀ ಶಕ್ತಿ ಸಂಘಗಳು, ಮತ್ತೊಂದೆಡೆ ಕೆಲ ಸಂಸ್ಥೆಗಳು ನಡೆಸುವ ಸ್ವಸಹಾಯ ಗುಂಪುಗಳ ಸಂಖ್ಯೆಯೂ ಅಧಿಕವಾಗಿವೆ. ಓಡಿಪಿ, ಧರ್ಮಸ್ಥಳ ಸ್ವಸಹಾಯ ಗುಂಪು ಹೀಗೆ ನೂರಾರು ಗುಂಪುಗಳಿವೆ. ಖಾಸಗಿ ಸಂಸ್ಥೆಗಳು ರಚಿಸಿರುವ ಒಕ್ಕೂಟಗಳಲ್ಲಿಯೂ ನೂರಾರು ಮಹಿಳಾ ಸ್ವಸಹಾಯ ಗುಂಪುಗಳು ನೋಂದಣಿಯಾಗಿವೆ. ಈ ಎಲ್ಲಾ ಗುಂಪುಗಳನ್ನು ಚುನಾವಣೆಗಳಲ್ಲಿ ಸೆಳೆಯಲು ರಾಜಕೀಯ ಪಕ್ಷಗಳು ಪೈಪೋಟಿಗಿಳಿಯುತ್ತವೆ.

ಸ್ಥಳೀಯರ ಸಂಪರ್ಕ: ಚುನಾವಣೆಯಲ್ಲಿ ಗೆಲುವು ಸಾಧಿಸಲೇಬೇಕೆಂದು ಪಣತೊಡುವ ಪ್ರಮುಖ ಪಕ್ಷಗಳ ಅಭ್ಯರ್ಥಿಗಳು ಒಂದೆಡೆ ಕಾರ್ಯಕರ್ತರ ಮೂಲಕ ಪ್ರಚಾರ, ಮತದಾರರ ಓಲೈಕೆಯ ತಂತ್ರಗಾರಿಕೆ ನಡೆಸುತ್ತವೆ. ಅದರೊಂದಿಗೆ ಸ್ಥಳೀಯ ಮುಖಂಡರು ಹಾಗೂ ಕಾರ್ಯಕರ್ತರ ಮೂಲಕ 'ಸ್ತ್ರೀ ಶಕ್ತಿ'ಗಳನ್ನು ಸಂಪರ್ಕಿಸಲು ಮುಂದಾಗುತ್ತಿವೆ. ಆಯಾ ಸಂಘಟನೆಯ ಮುಖ್ಯಸ್ಥರನ್ನು ಸಂಪರ್ಕಿಸಿ, ಬೆಂಬಲ ನೀಡುವಂತೆ ಮನವಿ ಮಾಡಲಾರಂಭಿಸಿದ್ದಾರೆ. ಇದರಿಂದ ಸ್ತ್ರೀ ಶಕ್ತಿ ಹಾಗೂ ಮಹಿಳಾ ಸ್ವಸಹಾಯ ಗುಂಪುಗಳಲ್ಲಿ ರಾಜಕೀಯ ಚರ್ಚೆ, ಅಭ್ಯರ್ಥಿ, ಪಕ್ಷಗಳ ಬಗ್ಗೆ ಚರ್ಚೆ ಶುರುವಾಗಿದೆ.

ಕೊನೆ ಮೂರು ದಿನ

ಮತದಾನಕ್ಕೆ 2-3 ದಿನ ಇರುವಾಗ ಸ್ತ್ರೀ ಶಕ್ತಿ ಹಾಗೂ ಇನ್ನಿತರ ಸಂಘಟನೆಗಳು ತಮ್ಮ ನಿಲುವನ್ನು ಸ್ಪಷ್ಟಪಡಿಸುತ್ತವೆ. ಅಲ್ಲಿಯವರೆಗೂ ಸ್ತ್ರೀ ಶಕ್ತಿ ಸಂಘಟನೆಗಳ ನಿರ್ಧಾರ ಮೀನಿನ ಹೆಜ್ಜೆಯಂತಿರುತ್ತದೆ. ಒಟ್ಟಿನಲ್ಲಿ ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ ಹೇಳುವುದೇ ಆದರೆ ಈ ಬಾರಿ ನಾರಿ ಒಲಿದರೆ ಜಯಭೇರಿ!

ಎಲ್ಲೆಲ್ಲಿ? ಎಷ್ಟೆಷ್ಟು

ಮೈಸೂರು ನಗರದಲ್ಲಿ 255, ಗ್ರಾಮಾಂತರ ಪ್ರದೇಶದಲ್ಲಿ 1017, ಹೆಚ್.ಡಿ.ಕೋಟೆ ತಾಲೂಕಿನಲ್ಲಿ 896, ಕೆ.ಆರ್.ನಗರ ತಾಲೂಕಿನಲ್ಲಿ 1209, ನಂಜನಗೂಡು ತಾಲೂಕಿನಲ್ಲಿ 1147, ಬಿಳಿಗೆರೆ (ನಂಜನಗೂಡು ತಾಲೂಕು) ಹೋಬಳಿಯಲ್ಲಿ 983, ಹುಣಸೂರು ತಾಲೂಕಿನಲ್ಲಿ 1215, ಪಿರಿಯಾಪಟ್ಟಣ ತಾಲೂಕಿನಲ್ಲಿ 987 ಹಾಗೂ ಇನ್ನಿತರೆ ಪ್ರದೇಶಗಳಲ್ಲಿ 897 ಸ್ತ್ರೀಶಕ್ತಿ ಸಂಘಗಳು ನೋಂದಾಯಿಸಿಕೊಂಡಿವೆ. ಮೈಸೂರು ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳಲ್ಲಿ 8606 ಸ್ತ್ರೀಶಕ್ತಿ ಸಂಘಟನೆಗಳಿವೆ. ಇದರೊಂದಿಗೆ ಪರಿಶಿಷ್ಟ ಜಾತಿಗೆ ಸೇರಿರುವ 787 ಸಂಘಗಳಿದ್ದರೆ, ಪರಿಶಿಷ್ಟ ಪಂಗಡಕ್ಕೆ ಸೇರಿದ 570 ಮಹಿಳಾ ಸಂಘಗಳು ನೋಂದಣಿಯಾಗಿವೆ. ಒಟ್ಟಾರೆ ಈ ಎಲ್ಲಾ ವರ್ಗಗಳಿಗೆ ಸೇರಿದ 9963 ಮಹಿಳಾ ಸಂಘಗಳು ಸಕ್ರಿಯವಾಗಿವೆ.



ವಾರಭವಿಷ್ಯ

23.4.2023 ರಿಂದ 29.4.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಮೇಷ, ಚಂದ್ರ-ಮೇಷ, ವೃಷಭ, ಮಿಥುನ, ಕಟಕ, ಕುಜ-ಮಿಥುನ, ಬುಧ-ಮೇಷ, ಗುರು-ಮೀನ, ಶುಕ್ರ-ವೃಷಭ, ಶನಿ-ಕುಂಭ, ರಾಹು-ಮೇಷ ಮತ್ತು ಕೇತು-ತುಲಾ.



ವಿ.ಕೇಶವಮೂರ್ತಿ

ಜ್ಯೋತಿಷ್ಯ ವಿದ್ವಾಂಸರು 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಕೆಲವೊಮ್ಮೆ ನಾವು ಬಯಸದೇ ಇದ್ದರೂ ಕೌಟುಂಬಿಕ ಘರ್ಷಣೆಗಳು ನಡೆದು ಬಿಡುತ್ತವೆ. ನಿಮ್ಮ ತಾಳ್ಮೆಗೆಡಲು ನಿಮ್ಮ ರಾಶಿಯಲ್ಲಿ ಸ್ಥಿತನಿರುವ ರಾಹುವೇ ಕಾರಣ. ಪಶು ಸಂಗೋಪನೆ ಹಾಗೂ ಕೃಷಿ ಉಪಕರಣ ಮಾರಾಟಗಾರರಿಗೆ ಉತ್ತಮ ಧನಲಾಭವಾಗುವುದು. ನಿಮ್ಮ ರಾಶಿಯಲ್ಲಿ ನಾಲ್ಕು ಗ್ರಹಗಳ 'ಗ್ರಹಯುದ್ಧ' ನಡೆದಿದ್ದು ನಂಬಲರ್ಹರಲ್ಲದವರೊಡನೆ ಹಣಕಾಸಿನ ವ್ಯವಹಾರ ಮಾಡಬೇಡಿ.

ಶ್ರೀ ಗಣಪತಿಗೆ ಗರಿಕೆ ಸಮರ್ಪಣೆ. ಶುಭ ಸಂಖ್ಯೆ-4.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಬೃಹಸ್ಪತಿ ಎಂಬ ಶುಭ ಗ್ರಹದ ವೀಕ್ಷಣೆ ನಿಮ್ಮ ರಾಶಿಯ ಮೇಲೆ ಬಂದಾಗಿದೆ. ಇದೇ ಸಮಯಕ್ಕೆ ಗುರು ದರ್ಶನದಿಂದ ಗುರಿ ಕಾಣುತ್ತದೆ. ಸುದ್ದಿ ಸಂಚಾಲಕರಿಗೂ, ದೃಶ್ಯ ಮಾಧ್ಯಮದವರಿಗೂ ತಪ್ಪನ್ನು ಅವಲೋಕಿಸಿಕೊಳ್ಳುವ ಸಮಯವಾಗಿದೆ. ಕೇತು-ರಾಹುಗಳು ಶುಭ ಪ್ರದರಲ್ಲ ಕೃತ್ರಿಮ ಗೆಳೆಯರ ಬಗ್ಗೆ ಎಚ್ಚರಿಕೆಯಿಂದ ಇರಿ. ಸಾಧ್ಯವಾಗಲು ಅಶಕ್ಯವಾದ ಕೆಲಸಗಳನ್ನು ಒಪ್ಪಿಕೊಳ್ಳಬೇಡಿ.

ಶ್ರೀ ಪದ್ಮಾವತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-3.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಪರಿಶ್ರಮ ಹಾಗೂ ಏಕಾಗ್ರತೆಯಿಂದ ಜೀವನ ಪಥದಲ್ಲಿ ಯಶಸ್ಸನ್ನು ಗಳಿಸುವಿರಿ. ನಿಮ್ಮ ಪ್ರತಿಜ್ಞಾ ಪಾಲನೆಯನ್ನು ಇತರರು ಮೆಚ್ಚುವರು. ಉಚ್ಚಚಂದ್ರನ ಸಂಚಾರದಿಂದ ಕೈತುಂಬಾ ಹಣ ಬರುವುದು. ಆದರೆ ನೀವು ಹಣದಾಸೆಗೆ ಒಳಪಟ್ಟು ಸಮಾಜಬಾಹಿರ ಕೃತ್ಯಗಳನ್ನು ಎಸಗುವಿರಿ. ದುಡುಕು ಹಾಗೂ ನಡುಕು ಸ್ವಭಾವದಿಂದ ಸಂಬಂಧಗಳಲ್ಲಿ ಬಿರುಕು ಉಂಟಾಗುವುದು.

ಶ್ರೀ ಅಪರಾಜಿತಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-4.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)

'ಶ್ರದ್ಧಾವಾನ್ ಲಭತೇ ಫಲಂ' ಎಂಬ ಆರ್ಯೋಕ್ತಿಯಂತೆ ನೀವು ತೊಡಗಿಸಿಕೊಂಡ ಕೆಲಸದಲ್ಲಿ ತನ್ಮಯತೆ ಇರಲಿ. ಶುಭ ಫಲ ನಿಮ್ಮದಾಗಲಿದೆ. ಉಚ್ಚ ಚಂದ್ರನ ದೃಷ್ಟಿ ಫಲವಾಗಿ ಮನೆಯಲ್ಲಿ ಸಂತಸದ ವಾತಾವರಣ, ಆಪ್ತ ಬಂಧಗಳ ಮಿಲನ. ಈ ನಡುವೆ ನಿಮ್ಮ ಸಹವಾಸಗಳು ನೆಟ್ಟಗಿರಲಿ ಅನ್ಯಥಾ ಆರಕ್ಷಕ ಠಾಣೆಯ ದರ್ಶನ ಮಾಡಬೇಕಾದೀತು. ಕಫ ಸಂಬಂಧಿ ಕಾಯಿಲೆ ಕಾಡಬಹುದು.

ಶ್ರೀ ಸುಬ್ರಹ್ಮಣ್ಯ ಸ್ತುತಿ. ಶುಭ ಸಂಖ್ಯೆ-6.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಈ ವಾರ ನಿಮ್ಮ ವಿವೇಚನಾ ಶಕ್ತಿ ಉತ್ತಮ ಮಟ್ಟದ್ದಾಗಿರುತ್ತದೆ. ನಿಮ್ಮ ಕಾರ್ಯತತ್ಪರತೆ ಉತ್ಕೃಷ್ಟ ಫಲವನ್ನು ನೀಡುವುದು. ಚಂದ್ರ ಸಂಚಾರ ಶುಭವಿದ್ದು ಅಂದುಕೊಂಡ ಕೆಲಸಗಳು ಅಂದುಕೊಂಡಂತೆ ನಡೆಯುವುದರಿಂದ ಪ್ರಸನ್ನ ಚಿತ್ತರಾಗಿರುತ್ತೀರಾ. ಕೇತುವು ಬಾಧಕನಾಗಿದ್ದು ನಿಮ್ಮ ಆಕ್ರಮಣಕಾರಿ ಬುದ್ಧಿಯಿಂದ ಹೊಸ ಶತ್ರುಗಳು ಹುಟ್ಟಿಕೊಳ್ಳುವರು. ಮಿತ್ರರು ದೂರ ಸರಿಯುವರು.

ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ-5.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

'ಮಂಥನ ಮಾಡದೆ ಅಮೃತ ಸಿಗದು' ಬೃಹಸ್ಪತಿಯು ಶುಭ ಸ್ಥಾನಕ್ಕೆ ಪಲ್ಲಟವಾಗಿದೆ. ಮನೆಯಲ್ಲಿ ಮಂಗಳ ಕಾರ್ಯಕ್ಕೆ ನಾಂದಿ ಆಗುವುದು. ಬಹು ನಿರೀಕ್ಷಿತ ಕೆಲಸಗಳು ಮರು ಚಾಲನೆ ಹೊಂದುವುದು. ಸುವರ್ಣ, ರಜತ ವ್ಯಾಪಾರಿಗಳಿಗೆ ಹೇರಳ ಧನಲಾಭವಾಗುವುದು. ಶತ್ರುಗಳು ಹಿಂದೆ ಸರಿಯುವರು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಕ್ಯಾಂಪಸ್ ಸೆಲೆಕ್ಷನ್ ಆಗುವ ಸಾಧ್ಯತೆ ಇರುತ್ತದೆ.

ಶ್ರೀ ಗುರು ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-8.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ಈ ವಾರದ ನಿಮ್ಮ ಕಾರ್ಯ ಕಲಾಪಗಳೆಲ್ಲವೂ ಶುಭ ಸ್ಥಿತಿಯಲ್ಲಿ ಸಾಗುವುದು. ನಿಮ್ಮ ಆರ್ಥಿಕ ಸ್ಥಿತಿಯಲ್ಲಿ ಸುಧಾರಣೆ ಆಗುವುದು. ತತ್ವಜ್ಞಾನ ಹಾಗೂ ಧಾರ್ಮಿಕ ಕಾರ್ಯಗಳಲ್ಲಿ ಆಸಕ್ತರಾಗಿರುವಿರಿ. ಮನೆಯಲ್ಲಿ ಪ್ರೀತಿ ವಾತ್ಸಲ್ಯದ ವಾತಾವರಣ ಇರುವುದು. ಮನೆಯಲ್ಲೆ ಮಂಗಳ ಕಾರ್ಯಗಳು ನಡೆಯುವ ಸಾಧ್ಯತೆ ಇದೆ. ಸುರಕ್ಷಿತವಾಗಿ ವಾಹನ ಚಲಿಸಿ. ಇತರರೂ ಸುರಕ್ಷಿತವಾಗಿರಲಿ.

ಶ್ರೀ ದುರ್ಗಾಸ್ತುತಿ. ಶುಭ ಸಂಖ್ಯೆ-8.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಭಾಗ್ಯವಿದ್ದಂತೆ ಫಲ, ವಿದ್ಯೆ, ಪೌರುಷ ಯಾವುದೂ ಪ್ರಯೋಜನಕ್ಕೆ ಬರದು. ದೈನಂದಿನ ಕೆಲಸಗಳು ಮಾಮೂಲಿನಂತೆ ನಡೆಯುವುದು. ಹಣಕಾಸು ವಿಚಾರದಲ್ಲಿ ಆತಂಕಪಡುವ ಅಗತ್ಯವಿಲ್ಲ. ನ್ಯಾಯಾಲಯದ ವಿಚಾರಗಳು ನಿಮಗೆ ಅನುಕೂಲಕರವಾಗಿ ಇರುವುದಿಲ್ಲ. ಹಿರಿಯರ ಮಾತಿಗೆ ಮನ್ನಣೆ ನೀಡಿ ನಡೆದರೆ ಕಾರ್ಯ ಜಯ. ಆಧ್ಯಾತ್ಮದತ್ತ ಒಲವು ಮೂಡುವುದು. ದೂರ ಪ್ರಯಾಣಗಳನ್ನು ಮುಂದೂಡಿ.

ಶ್ರೀ ವೆಂಕಟೇಶ್ವರ ದರ್ಶನ. ಶುಭ ಸಂಖ್ಯೆ-7.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಬರೀ ಕಷ್ಟಪಡುವುದರಿಂದಲೇ ಜಯ-ಸುಖವನ್ನು ಸಾಧಿಸಲು ಆಗುವುದಿಲ್ಲ. ದೈವ ಸಹಾಯವೂ ಬೇಕಾಗುತ್ತದೆ. ಇದೀಗ ಭಾಗ್ಯ ಭಾವಕ್ಕೆ ಬಂದಿರುವ ಗುರು ನಿಮ್ಮ ಜೀವನದಲ್ಲಿ ಗುರುತರವಾದ ಬದಲಾವಣೆಗೆ ಪೀಠಿಕೆ ಆಗಲಿದೆ. ಮಾಡುವ ಕೆಲಸವನ್ನು ನಿರ್ಮಲ ಚಿತ್ತರಾಗಿ ನಿರ್ವಹಿಸಿ ಪ್ರತಿಫಲವನ್ನು ದೈವದ ಮೇಲೆ ಬಿಡಿ. ಮನಸ್ವೀ ಪ್ರಾರ್ಥಿಸುವಾಗ ಪ್ರಸಾದದ ಚಿಂತೆ ಏಕೆ? ಸಮಯ ಸೇರಿದಂತೆ ನಿಮ್ಮ ಬವಣೆಗಳು ಸವೆಯುವುದು.

ಶ್ರೀ ಆದಿತ್ಯ ಹೃದಯ ಪಠಿಸಿ. ಶುಭ ಸಂಖ್ಯೆ-9.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಆರ್ಥಿಕ ಪರಿಸ್ಥಿತಿಯಲ್ಲಿ ಅಲ್ಪಸ್ವಲ್ಪ ಸುಧಾರಣೆ ಕಂಡು ಬರುವುದು. ವೃತ್ತಿಪರ ಕೆಲಸಗಳ ಹೊರೆ ಜಾಸ್ತಿಯಾಗಿ ದೇಹಯಾಸ. ಕುಟುಂಬ ಸದಸ್ಯರ ನೆರವಿನಿಂದ ಕೆಲವು ಕಾರ್ಯಗಳು ಪೂರ್ಣಗೊಳ್ಳಲಿವೆ. ಮನೆಯ ಹೊರಗೆ ಪ್ರತಿಕೂಲ ವಾತಾವರಣ ಇರುತ್ತದೆ. ವಿನಾಕಾರಣ ವಾಗ್ವಾದಗಳು ಉಂಟಾಗಲಿವೆ. ಸಾಲದ ಪ್ರಯತ್ನಗಳು ವಿಫಲಗೊಳ್ಳಲಿದೆ. ವಾಹನ ಚಲಿಸುವಾಗ ಜಾಗ್ರತೆ ತಪ್ಪಿದರೆ ಜಾರುತ್ತೀರ.

ಶ್ರೀ ಮಾರುತಿ ಉಪಾಸನೆ. ಶುಭ ಸಂಖ್ಯೆ-2.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ವಾರದಾರಂಭಕ್ಕೆ ಸಜ್ಜನರ ಭೇಟಿ, ಸುವಾರ್ತೆಗಳ ಸಂವಾದ. ಆರ್ಥಿಕ ಪರಿಸ್ಥಿತಿ ಸುಧಾರಿಸುವುದು. ಆದರೆ ದುಂದುವೆಚ್ಚದಿಂದ ಪರ್ಸ್ ಖಾಲಿ. ಯಾವುದು ಬೇಕು-ಬೇಡ ಎಂಬ ಪರ್ಯಾಪ್ತ ಪ್ರಜ್ಞೆ ಇಲ್ಲದೆ ತೊಂದರೆಗೆ ಒಳಗಾಗುವಿರಿ. ಗುಪ್ತ ಪ್ರೇಮ ಸಂಬಂಧಗಳಿಂದ ಸಂಕಷ್ಟ ಎದುರಿಸಬೇಕಾದೀತು. ಸರ್ಕಾರಿ ನೌಕರರು ವರ್ಗಾವಣೆ ನಿಮಿತ್ತ ವಾಸ್ತವ್ಯ ಬದಲಿಸಬೇಕಾಗಬಹುದು.

ಶ್ರೀ ಸತ್ಯನಾರಾಯಣ ಪೂಜೆ. ಶುಭ ಸಂಖ್ಯೆ-7.


ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ಶುಭ ಗುರು ನಿಮ್ಮ ರಾಶ್ಯಾಧಿಪತಿ, ಇದೀಗ ಶುಭ ಸ್ಥಾನಕ್ಕೆ ಪಲ್ಲಟವಾಗಿದೆ. ಗುರು ಕೃಪೆಯಿಂದ ಬದುಕು ಸಮೃದ್ಧವಾಗಲಿದೆ. ಇದುವರೆಗೆ ಅನುಭವಿಸಿದ ಕಷ್ಟ ಕಾರ್ಪಣ್ಯಗಳು ಕ್ರಮೇಣ ಶಮನವಾಗಲಿದೆ. ಮನೆಯಲ್ಲಿ ಮಂಗಳ ಕಾರ್ಯಗಳು ಜರುಗುವ ಸಾಧ್ಯತೆ ಇದೆ. ವ್ಯವಸ್ಥಾನದಲ್ಲಿರುವ ಶನಿದೇವ ಸ್ವಯಂಕೃತಾಪರಾಧದಿಂದ ಬುದ್ಧಿ ಕಲಿಸುತ್ತಾರೆ. ಮಾರಕ ಸ್ಥಾನದಲ್ಲಿರುವ ರಾಹು-ಕೇತು ಅಪಘಾತಗಳಿಗೆ ಕಾರಣರಾಗಬಹುದು.

ಶ್ರೀ ರಾಘವೇಂದ್ರ ಪೂಜೆ. ಶುಭ ಸಂಖ್ಯೆ-5.

ಮಕ್ಕಳ ಚಿತ್ರಕಥೆ: ಆ ವ್ಯಕ್ತಿಯ ಕೈಗಳು ವಿಪರೀತ ನಡುಗುತ್ತಿದ್ದವು

-ಹೆಚ್.ಜಿ.ಎನ್.ಪ್ರಸಾದ್, ಮೊ: 9845376199



ನೀತಿ: "ನೋಡಿ ಎಂತಹ ವ್ಯಕ್ತಿತ್ವ ಮಂಡೇಲಾರದ್ದು, ಮಹಾನ್ ವ್ಯಕ್ತಿಗಳ ಈ ತರಹ ಕ್ಷಮಾಗುಣ, ಉದಾರತೆಗಳೇ ಅವರನ್ನು ಆ ಮೇರುತನಕ್ಕೆ ಕೊಂಡೊಯ್ಯುವವು ಅಲ್ಲವೇ...?"


ಆನೆಕಾಡು ವಿಭಾಗದಲ್ಲಿ ಸ್ವಚ್ಛತಾ ಕಾರ್ಯ

ಗುಡ್ಡೆಹೊಸೂರು, ಏ.29– ಆನೆಕಾಡಿನ ರಸ್ತೆಬದಿಯಲ್ಲಿ ಅರಣ್ಯ ಇಲಾಖೆ ಮತ್ತು ವಿರಾಜಪೇಟೆಯ ಸೇಂಟ್ ಅನ್ನಸ್ ಕಾಲೇಜಿನ ಎನ್‌ಎಸ್‌ಎಸ್ ಘಟಕದ ವಿದ್ಯಾರ್ಥಿಗಳ ಸಹಯೋಗದಲ್ಲಿ ಸಂಪೂರ್ಣ ಸ್ವಚ್ಛತಾ ಕಾರ್ಯ ನಡೆಸಲಾಯಿತು.

ಪ್ರವಾಸಿಗರು ರಸ್ತೆ ಬದಿಯಲ್ಲಿ ಬಿಸಾಕಿದ ಪ್ಲಾಸ್ಟಿಕ್ ಬಾಟಲ್‌ಗಳು ಇನ್ನಿತರ ವಸ್ತುಗಳು ರಸ್ತೆಯ ಎರಡು ಬದಿಯಲ್ಲಿ ಸಾಕಷ್ಟು ಬಿದ್ದಿತ್ತು. ಗುಡ್ಡೆಹೊಸೂರಿನ ಗ್ರಾಮ ಪಂಚಾಯ್ತಿಯ ಟ್ರಾಕ್ಟರ್‌ನಲ್ಲಿ ಎರಡು ಲೋಡ್ ಕಸವನ್ನು ತುಂಬಿ ಇಲ್ಲಿನ ಕಸವಿಲೇವಾರಿ ಘಟಕಕ್ಕೆ ಸಾಗಿಸಲಾಯಿತು. ಈ ಸಂದರ್ಭ ಕಾಲೇಜಿನ ಸುಮಾರು 50 ವಿದ್ಯಾರ್ಥಿಗಳು ಮತ್ತು ಕುಶಾಲನಗರ ವ್ಯಾಪ್ತಿಯ ಅರಣ್ಯ ಸಿಬ್ಬಂದಿ ಭಾಗವಹಿಸಿದ್ದರು. ಈ ಸಂದರ್ಭ ಇಲ್ಲಿನ ವಲಯ ಅರಣ್ಯಾಧಿಕಾರಿ ಶಿವರಾಮ್ ಕೆ.ವಿ. ಮತ್ತು ಉಪವಲಯ ಅರಣ್ಯಾಧಿಕಾರಿಗಳಾದ ಕೆ.ಎನ್. ದೇವಯ್ಯ ಮತ್ತು ಅನಿಲ್ ಡಿಸೋಜಾ ಮತ್ತು ಇಲಾಖಾ ಸಿಬ್ಬಂದಿ ಹಾಜರಿದ್ದರು. ಈ ಸಂದರ್ಭ ಕಾಲೇಜಿನ ಎನ್‌ಎಸ್‌ಎಸ್ ಘಟಕದ ಮುಖ್ಯಸ್ಥ ಅರ್ಜುನ್ ಹಾಜರಿದ್ದರು.



ಚೌಡೇಶ್ವರಿ ದೇವಾಲಯದಲ್ಲಿ ಅಮಿತ್ ಶಾ...



ಶನಿವಾರ ಮಡಿಕೇರಿಯಲ್ಲಿ ಬಿಜೆಪಿ ಅಭ್ಯರ್ಥಿಗಳ ಪರವಾಗಿ ಮತಯಾಚಿಸುವ ಸಲುವಾಗಿ ಏರ್ಪಡಿಸಲಾಗಿದ್ದ ಬೃಹತ್ ರೋಡ್ ಶೋನಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಶ್ರೀ ಚೌಡೇಶ್ವರಿ ದೇವಾಲಯಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಬಿಜೆಪಿ ರಾಜ್ಯಾಧ್ಯಕ್ಷ ನಳೀನ್ ಕುಮಾರ್ ಕಟೀಲ್, ಮಡಿಕೇರಿ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಅಪ್ಪಚ್ಚು ರಂಜನ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

'ನಾನು ವೋಟ್ ಹಾಕುವೆ' ಸಂದೇಶ

ಮಡಿಕೇರಿ, ಏ.29– ಕರ್ನಾಟಕ ವಿಧಾನಸಭಾ ಚುನಾವಣೆ ಹಿನ್ನೆಲೆ ಮತದಾರರ ಶಿಕ್ಷಣ ಹಾಗೂ ಜಾಗೃತಿ ಕಾರ್ಯಕ್ರಮದಡಿ ಕೊಡಗು ಜಿಲ್ಲೆಯಲ್ಲಿ ಮತದಾನದ ಪ್ರಮಾಣ ಹೆಚ್ಚಿಸುವ ಉದ್ದೇಶದಿಂದ ಕೊಡಗು ಜಿಲ್ಲಾಡಳಿತ, ಕೊಡಗು ಜಿಲ್ಲಾ ಸ್ವೀಪ್ ಸಮಿತಿ, ಮಡಿಕೇರಿಯಲ್ಲಿನ ರೋಟರಿ ಸಂಸ್ಥೆಗಳ ಸಹಯೋಗದಲ್ಲಿ ಹಾಗೂ ಜಿಲ್ಲೆಯ ವಿವಿಧ ಸಂಘ ಸಂಸ್ಥೆಗಳ ಸಹಭಾಗಿತ್ವದಲ್ಲಿ ಏ.30 ರಂದು ಸಂಜೆ 6.30 ಗಂಟೆಗೆ ನಗರದ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ನೂರಾರು ಜನರು ನಿಗದಿತ ಸ್ಥಳದಲ್ಲಿ ಸಾಲಾಗಿ ನಿಂತು 'ಮೊಬೈಲ್ ಲೈಟ್ ಬೆಳಗಿಸಿ ನಾನು ವೋಟ್ ಹಾಕುವೆ' ಎಂಬ ಸಂದೇಶ ಸಾರುವ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ವಿನೂತನ ರೀತಿಯಲ್ಲಿ ಆಯೋಜಿಸಿರುವ ಮತದಾರರ ಶಿಕ್ಷಣ, ಅರಿವು ಹಾಗೂ ಜಾಗೃತಿ ಕಾರ್ಯಕ್ರಮದ ಸಂದರ್ಭದಲ್ಲಿ ವಿಶೇಷವಾಗಿ ಸಂಜೆ 7.15 ರಿಂದ 30 ನಿಮಿಷಗಳ ಕಾಲ ಬಸವರಾಜ ಬಡಿಗೇರ್ ಮತ್ತು ತಂಡದವರಿಂದ ಹಾಡುಗಾರಿಕೆ ಕಾರ್ಯಕ್ರಮ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಜಿಲ್ಲೆಯ ಎಲ್ಲಾ ಸಾರ್ವಜನಿಕರು, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಮತದಾನದ ಮಹತ್ವದ ಸಂದೇಶವನ್ನು ಎಲ್ಲರಿಗೂ ತಲುಪಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಜಿಲ್ಲಾಡಳಿತ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ಕೋರಿದೆ ಎಂದು ಸ್ವೀಪ್ ಸಮಿತಿ ಅಧ್ಯಕ್ಷರು ಹಾಗೂ ಜಿ.ಪಂ.ಸಿಇಒ ಡಾ.ಎಸ್.ಆಕಾಶ್ ಅವರು ತಿಳಿಸಿದ್ದಾರೆ.

ಕೊಡಗು ಜಿಲ್ಲೆಯಲ್ಲಿ ಅಂಚೆ ಮತದಾನ ಪ್ರಕ್ರಿಯೆಗೆ ಚಾಲನೆ



ಮಡಿಕೇರಿ, ಏ.29– ಹೆಸರು ನೋಂದಾಯಿಸಿದ 80 ವರ್ಷ ಮೇಲ್ಪಟ್ಟವರು ಹಾಗೂ ವಿಶೇಷಚೇತನರು ಮನೆಯಿಂದಲೇ ಮತ ಹಕ್ಕು ಚಲಾಯಿಸುವ ಪ್ರಕ್ರಿಯೆಗೆ ಶನಿವಾರ ಚಾಲನೆ ದೊರೆಯಿತು. ಕೊಡಗು ಜಿಲ್ಲೆಯ 542 ಮತಗಟ್ಟೆ ವ್ಯಾಪ್ತಿಯಲ್ಲಿ ಸೆಕ್ಟರ್ ಅಧಿಕಾರಿಗಳ ನೇತೃತ್ವದಲ್ಲಿ ಅಂಚೆ ಮತದಾನ ಪ್ರಕ್ರಿಯೆಗೆ ಚಾಲನೆ ನೀಡಲಾಯಿತು.

ಮಡಿಕೇರಿ ವಿಧಾನಸಭಾ ಕ್ಷೇತ್ರದ ಮತಗಟ್ಟೆ ಸಂಖ್ಯೆ–106 ರ ಹುದುಗೂರು ಮತಗಟ್ಟೆ ವ್ಯಾಪ್ತಿಯಲ್ಲಿ ನಾಲ್ಕು ಜನ ಹಿರಿಯ ನಾಗರಿಕರು, ಮತಗಟ್ಟೆ ಸಂಖ್ಯೆ 151 ರ ಹುಲುಗುಂದ ಮತಗಟ್ಟೆಯಲ್ಲಿ ನಾಲ್ಕು ಮಂದಿ ಹಿರಿಯ ನಾಗರಿಕರು, ಒಬ್ಬರು ವಿಶೇಷಚೇತನರು, ಹಾಗೆಯೇ ಮತಗಟ್ಟೆ ಸಂಖ್ಯೆ 152 ರ ಚಿಕ್ಕತ್ತೂರಿನಲ್ಲಿ ಹಿರಿಯ ನಾಗರಿಕರು, ಮತಗಟ್ಟೆ 154 ರ ಸುಂದರ ನಗರದಲ್ಲಿ ಒಬ್ಬ ಹಿರಿಯ ನಾಗರಿಕರು ಸೇರಿದಂತೆ ಒಟ್ಟು ಮೊದಲ ದಿನ 10 ಮಂದಿ ಮತಹಕ್ಕು ಚಲಾಯಿಸಿದ್ದಾರೆ ಎಂದು ಹಾರಂಗಿ ಜಲಾಶಯದ ಕಾರ್ಯಪಾಲಕ ಎಂಜಿನಿಯರ್ ಹಾಗೂ ಸೆಕ್ಟರ್ ಅಧಿಕಾರಿ ಪುಟ್ಟಸ್ವಾಮಿ ಅವರು ಮಾಹಿತಿ ನೀಡಿದ್ದಾರೆ.

ಮಡಿಕೇರಿ ನಗರದ ವಿವಿಧ ಮತಗಟ್ಟೆ ವ್ಯಾಪ್ತಿಯಲ್ಲಿ ಈಗಾಗಲೇ ಹೆಸರು ನೋಂದಾಯಿಸಿರುವ 80 ವರ್ಷ ಮೇಲ್ಪಟ್ಟವರು ಹಾಗೂ ವಿಶೇಷ ಚೇತನರು ಮತ ಹಕ್ಕು ಚಲಾಯಿಸಿದ್ದಾರೆ.

ಈ ಪ್ರಕ್ರಿಯೆಯು ಮೇ, 6 ರವರೆಗೆ ನಡೆಯಲಿದೆ. ಜಿಲ್ಲೆಯಲ್ಲಿ ಒಟ್ಟು 2,474 ಮಂದಿ ಅಂಚೆ ಮತಪತ್ರದ ಮೂಲಕ ಮತಹಕ್ಕು ಚಲಾಯಿಸಲು ಮುಂದಾಗಿದ್ದಾರೆ.

ಕೊಡ್ಲಿಪೇಟೆಯಲ್ಲಿ ಭವಾನಿ ರೋಡ್ ಶೋ

ಜೆಡಿಎಸ್ ಅಭ್ಯರ್ಥಿ ನಾಪಂಡ ಮುತ್ತಪ್ಪರನ್ನು ಗೆಲ್ಲಿಸಿಕೊಡಲು ಮನವಿ

ಮಡಿಕೇರಿ,ಏ.29– ಮಡಿಕೇರಿ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ನಾಪಂಡ ಮುತ್ತಪ್ಪ ಅವರ ಪರವಾಗಿ ಪಕ್ಷದ ನಾಯಕಿ ಭವಾನಿ ರೇವಣ್ಣ ಅವರು ಕೊಡ್ಲಿಪೇಟೆ ಪಟ್ಟಣದಲ್ಲಿ ರೋಡ್ ಶೋ ನಡೆಸುವ ಮೂಲಕ ಮತಯಾಚಿಸಿದರು.

ಕೊಡ್ಲಿಪೇಟೆಯ ಹೊಸ ಮುನ್ಸಿಪಾಲಿಟಿ ಗಣಪತಿ ದೇವಸ್ಥಾನದಿಂದ ಪಟ್ಟಣದ ಮುಖ್ಯ ಬೀದಿಗಳಲ್ಲಿ ಜೆಡಿ ಎಸ್ ಅಭ್ಯರ್ಥಿ ನಾಪಂಡ ಮುತ್ತಪ್ಪ ಪಕ್ಷದ ಜಿಲ್ಲಾಧ್ಯಕ್ಷ ಕೆ.ಎಂ.ಗಣೇಶ್ ಅವರೊಂದಿಗೆ ಭವಾನಿ ರೇವಣ್ಣ ತೆರೆದ ವಾಹನದಲ್ಲಿ ರೋಡ್ ಶೋ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಭವಾನಿ ರೇವಣ್ಣ ಅವರು, ಮಡಿಕೇರಿ ಕ್ಷೇತ್ರದಲ್ಲಿ ಜೆಡಿಎಸ್ ಪಕ್ಷವನ್ನು ಬೆಂಬಲಿಸಿ ನಾಪಂಡ ಮುತ್ತಪ್ಪ ಅವರನ್ನು ಗೆಲ್ಲಿಸಿದರೆ ಕುಮಾರಸ್ವಾಮಿ ಅವರು ರಾಜ್ಯದ ಮುಖ್ಯಮಂತ್ರಿಯಾಗಲಿದ್ದು, ಕೊಡಗಿನ ಸರ್ವಾಂಗೀಣ ಅಭಿವೃದ್ಧಿ ಸಾಧಿಸಲಿದೆ ಎಂದು ಭರವಸೆ ನೀಡಿದರು.

ಜೆಡಿಎಸ್ ಅಭ್ಯರ್ಥಿ ನಾಪಂಡ ಮುತ್ತಪ್ಪ ಮಾತನಾಡಿ, ಕಳೆದ 25 ವರ್ಷಗಳಿಂದ ಕ್ಷೇತ್ರದಲ್ಲಿ ಶಾಸಕರಾಗಿರುವವರು ಕ್ಷೇತ್ರದ ಅಭಿವೃದ್ಧಿಯತ್ತ ಗಮನ ಹರಿಸಿಲ್ಲವೆಂದು ಹೇಳಿದರಲ್ಲದೇ, ಈ ಬಾರಿ ಕ್ಷೇತ್ರದಲ್ಲಿ ಬದಲಾವಣೆಯ ಕೂಗು ಕೇಳಿ ಬರುತ್ತಿದೆ. ಈ ಬದಲಾವಣೆ ಜೆಡಿಎಸ್ ಮೂಲಕ ಆಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ರೈತ ಪರ ಕಾಳಜಿ ಹೊಂದಿರುವ ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಬೇಕು. ರೈತರು, ಬಡವರು, ಕಾರ್ಮಿಕರು, ದೀನ ದಲಿತರ ಪರವಿರುವ ಜೆಡಿಎಸ್ ಪಕ್ಷವನ್ನು ಅಧಿಕಾರಕ್ಕೆ ತರಬೇಕೆಂದು ನಾಪಂಡ ಮುತ್ತಪ್ಪ ಮನವಿ ಮಾಡಿದರು.

ಈ ಸಂದರ್ಭ ಪಕ್ಷದ ಜಿಲ್ಲಾಧ್ಯಕ್ಷ ಕೆ.ಎಂ.ಗಣೇಶ್, ಜಿಲ್ಲಾ ಕಾರ್ಯದರ್ಶಿ ಮೋಹನ್ ಮೌರ್ಯ, ಪ್ರಮುಖರಾದ ನಾಪಂಡ ಮುದ್ದಪ್ಪ, ಜಿಪಂ ಮಾಜಿ ಸದಸ್ಯ ಪುಟ್ಟರಾಜು ಸೇರಿದಂತೆ ಇತರ ಪ್ರಮುಖರು ಉಪಸ್ಥಿತ ರಿದ್ದರು. ಪಕ್ಷದ ನಾಯಕಿ ಭವಾನಿ ರೇವಣ್ಣ ಅವರ ರೋಡ್‌ಶೋ ಸಂದರ್ಭ ನೂರಾರು ಬೈಕ್‌ಗಳಲ್ಲಿ ಜೆಡಿಎಸ್ ಕಾರ್ಯಕರ್ತರು ರ‍್ಯಾಲಿ ನಡೆಸಿದರು. ಕೊಡ್ಲಿಪೇಟೆ, ಹ್ಯಾಂಡ್ ಪೋಸ್ಟ್, ಬ್ಯಾಡಗೊಟ್ಟ ಮೂಲಕ ಶನಿವಾರ ಸಂತೆವರೆಗೆ ಬೈಕ್ ರ‍್ಯಾಲಿ ನಡೆಯಿತು.



ವಿರಾಜಪೇಟೆ ವಾರ್ಡ್‌ಗಳಲ್ಲಿ ಎ.ಎಸ್.ಪೊನ್ನಣ್ಣ ಮತಯಾಚನೆ

ವಿರಾಜಪೇಟೆ, ಏ.29– ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎ.ಎಸ್.ಪೊನ್ನಣ್ಣ ವಿರಾಜಪೇಟೆ ಪಟ್ಟಣದ ಪ್ರಮುಖ ವಾರ್ಡ್‌ಗಳಲ್ಲಿ ಬಿರುಸಿನ ಚುನಾವಣಾ ಪ್ರಚಾರ ನಡೆಸಿ ಮತಯಾಚಿಸಿದರು.



ಪಟ್ಟಣದ ಶಿವಕೇರಿ ವಾರ್ಡ್‌ಗೆ ಮತಯಾಚನೆಗೆ ಬಂದ ಅಭ್ಯರ್ಥಿ ಎ.ಎಸ್.ಪೊನ್ನಣ್ಣರಿಗೆ ಅಲ್ಲಿನ ನಿವಾಸಿಗಳು ಹೂವಿನ ಸುರಿಮಳೆಗೈದು ಭವ್ಯ ಸ್ವಾಗತ ಕೋರಿದರು. ಬಳಿಕ ಏರ್ಪಡಿಸಿದ್ದ ವೇದಿಕೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಪೊನ್ನಣ್ಣ ಮಾತನಾಡಿ, ಕೊಡಗಿನಲ್ಲಿ ಪ್ರಕೃತಿ ವಿಕೋಪದ ಸಂದರ್ಭದಲ್ಲಿ ನಮ್ಮ ತಂದೆಯ ಹೆಸರಿನಲ್ಲಿ ಈ ಕ್ಷೇತ್ರದ ಅನೇಕ ಜನರಿಗೆ ಆಹಾರ ಮತ್ತು ಔಷಧಿ ಕಿಟ್ ವಿತರಿಸಿದ್ದೇನೆ. ವಿದ್ಯಾರ್ಥಿಗಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಕೊಡಗಿನ ಹಲವು ವಿದ್ಯಾರ್ಥಿಗಳಿಗೆ ಸಹಾಯ ಹಸ್ತನೀಡಿ ಎಲ್ಲರಿಗೂ ಪರಿಚಿತನಾಗಿದ್ದು, ಇದನ್ನು ಸಹಿಸದ ವಿರೋಧ ಪಕ್ಷದವರು ಇಲ್ಲ ಸಲ್ಲದ ಅಪವಾದಗಳನ್ನು ಮಾಡುತ್ತಿದ್ದಾರೆ ಎಂದರು.

ಈ ಭಾಗದಲ್ಲಿ ಕಾಡುಪ್ರಾಣಿಗಳ ಸಂಘರ್ಷ ಇದ್ದರು ಗಮನ ಹರಿಸಿಲ್ಲ, ಯುವಕರಿಗೆ ಉದ್ಯೋಗದ ಕೊರತೆ ಇದ್ದರು ಬಗೆಹರಿಸಿಲ್ಲ. ಕಳೆದ 20 ವರ್ಷಗಳ ಆಡಳಿತದಲ್ಲಿ ಈ ಕ್ಷೇತ್ರದ ಅಭಿವೃದ್ಧಿ ಇಲ್ಲದಂತಾಗಿದ್ದು ಈ ಕಾರಣದಿಂದ ಮತದಾರರು ಈ ಬಾರಿ ಬದಲಾವಣೆಯನ್ನು ಬಯಸಿದ್ದಾರೆ ಎಂದರಲ್ಲದೆ ಈ ಕ್ಷೇತ್ರದಲ್ಲಿ ಉತ್ತಮವಾದ ಪ್ರತಿಕ್ರಿಯೆ ದೊರಕಿದ್ದು ಈ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಗೆಲುವು ಖಚಿತ ಎಂದರು.

ಇದಕ್ಕೂ ಮೊದಲು ಶಿವಕೇರಿ ಮಾರಿಯಮ್ಮ ದೇವಸ್ಥಾನದಲ್ಲಿ ಅಭ್ಯರ್ಥಿ ಪೊನ್ನಣ್ಣ ಪೂಜೆ ಸಲ್ಲಿಸಿದರು. ಕಾಂಗ್ರೆಸ್ ಪಕ್ಷದ ಪ.ಜಾತಿ ಪಂಗಡದ ಜಿಲ್ಲಾ ಅಧ್ಯಕ್ಷ ವಿ.ಕೆ.ಸತೀಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯಲ್ಲಿ ಕಾಂಗ್ರೆಸ್ ಪಕ್ಷದ ಜಿಲ್ಲಾ ಅಧ್ಯಕ್ಷ ಧರ್ಮಜ ಉತ್ತಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಿ.ರಂಜಿಪೂಣಚ್ಚ, ನಗರ ಕಾಂಗ್ರೆಸ್ ಅಧ್ಯಕ್ಷ ಮಾದಂಡ ತಿಮ್ಮಯ್ಯ, ಗ್ರಾಮದ ಹಿರಿಯರಾದ ಪಾಪಯ್ಯ, ಪ್ರಮುಖರಾದ ಮಹಾದೇವ, ಗಣೇಶ್, ಪುರಸಭೆ ಸದಸ್ಯರಾದ ಡಿ.ಪಿ.ರಾಜೇಶ್, ಎಸ್.ಹೆಚ್.ಮತೀನ್, ಮುಹಮ್ಮದ್ ರಫಿ, ಪೂರ್ಣಿಮಾ ಮತ್ತಿತರರು ಉಪಸ್ಥಿತರಿದ್ದರು.

ಮತದಾನಕ್ಕಾಗಿ ಇಂದು ರಂಗೋಲಿ ಸ್ಪರ್ಧೆ

ಮಡಿಕೇರಿ ಏ.29– ಕರ್ನಾಟಕ ವಿಧಾನಸಭಾ ಚುನಾವಣೆ ಹಿನ್ನೆಲೆ ಮತದಾರರ ಶಿಕ್ಷಣ ಮತ್ತು ಜಾಗೃತಿ(ಸ್ವೀಪ್) ಕಾರ್ಯಕ್ರಮದಡಿ ಕೊಡಗು ಜಿಲ್ಲೆಯಲ್ಲಿ ಮತದಾನದ ಪ್ರಮಾಣವನ್ನು ಹೆಚ್ಚಿಸುವ ಉದ್ದೇಶದಿಂದ ಕೊಡಗು ಜಿಲ್ಲಾಡಳಿತ, ಕೊಡಗು ಜಿಲ್ಲಾ ಸ್ವೀಪ್ ಸಮಿತಿ, ತಾಲ್ಲೂಕು ಸ್ವೀಪ್ ಸಮಿತಿ ಹಾಗೂ ಸ್ತ್ರೀಶಕ್ತಿ ಒಕ್ಕೂಟಗಳ ವತಿಯಿಂದ ನಗರದ ಗಾಂಧಿ ಮೈದಾನದಲ್ಲಿ ಏ.30 ಬೆಳಗ್ಗೆ 11 ರಿಂದ ಮಧ್ಯಾಹ್ನ 12 ಗಂಟೆವರೆಗೆ ರಂಗೋಲಿ ಸ್ಪರ್ಧೆ ನಡೆಯಲಿದೆ ಎಂದು ಸ್ವೀಪ್ ಸಮಿತಿ ಅಧ್ಯಕ್ಷರು ಹಾಗೂ ಜಿ.ಪಂ. ಸಿಇಒ ಡಾ.ಎಸ್.ಆಕಾಶ್ ಅವರು ತಿಳಿಸಿದ್ದಾರೆ.

ವರುಣ ಕ್ಷೇತ್ರದ ಅಭಿವೃದ್ಧಿಯನ್ನು ಇಬ್ಬರೂ ನೋಡೋಣ ಬನ್ನಿ

ಮಾಜಿ ಸಿಎಂ ಸಿದ್ದರಾಮಯ್ಯಗೆ ಬಿಜೆಪಿ ಅಭ್ಯರ್ಥಿ ಸೋಮಣ್ಣ ಸವಾಲು



ತಾಲೂಕಿನ ಉಗೇದನಹುಂಡಿ ಗ್ರಾಮದಲ್ಲಿ ಸಚಿವ ವಿ. ಸೋಮಣ್ಣ ತಮ್ಮ ಬೆಂಬಲಿಗರೊಂದಿಗೆ ಮತಯಾಚಿಸುತ್ತಿರುವುದು.

> ಗೋವಿಂದರಾಜನಗರದಲ್ಲಿ ಮಾಡಿರುವ ಅಭಿವೃದ್ಧಿ ಕೆಲಸಗಳನ್ನು ಮೈಸೂರು ಹಾಗೂ ಚಾಮರಾಜನಗರದಲ್ಲಿ ಮಾಡಲು ಬಂದಿದ್ದೇನೆ. ಸಮಾಜ ಬದಲಾವಣೆಯನ್ನು ಬಯಸುತ್ತಿದೆ. ಬದಲಾವಣೆಯಾದರೆ ಕ್ಷೇತ್ರದ ಅಭಿವೃದ್ಧಿ ಸಾಧ್ಯ. ಹೀಗಾಗಿ ಎಲ್ಲರೂ ಒಗ್ಗೂಡಿ ಬಿಜೆಪಿ ಬೆಂಬಲಿಸಿ.
>
> –ವಿ.ಸೋಮಣ್ಣ, ಬಿಜೆಪಿ ಅಭ್ಯರ್ಥಿ, ಚಾಮರಾಜನಗರ

ಚಾಮರಾಜನಗರ, ಏ.29– ಸಿದ್ದರಾಮಯ್ಯ ಅವರು ಒಂದು ಬಾರಿ ವರುಣಾ ಕ್ಷೇತ್ರದಲ್ಲಿ ಓಡಾಡಲಿ. ಅದೆಷ್ಟು ಚೆನ್ನಾಗಿ ರಸ್ತೆಗಳಿವೆ, ಯಾವ ರೀತಿ ಅವ್ಯವಸ್ಥೆ ಇದೆ. ಯಾವ ರೀತಿ ಜನರು ಸಂಕಷ್ಟ ಪಡುತ್ತಿದ್ದಾರೆ ಎಂದು ನೋಡಲಿ. ನಾನು ಒಬ್ಬನೇ ಅವರ ಜೊತೆಗೆ ಬರುತ್ತೇನೆ, ಹೋಗೋಣ. ಸಿದ್ದರಾಮಯ್ಯ ಕರೆದರೆ ನಾನು ಹೋಗಲೂ ಸಿದ್ಧ. ಹೋಗಿ ಸುತ್ತಾಡೋಣ ಎಂದು ಮಾಜಿ ಸಿಎಂ ಸಿದ್ದರಾಮಯ್ಯ ಅವರಿಗೆ ಚಾಮರಾಜನಗರ ಹಾಗೂ ವರುಣ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ. ಸೋಮಣ್ಣ ಸವಾಲು ಹಾಕಿದರು.

ತಾಲೂಕಿನ ಉಗೇದನಹುಂಡಿ ಗ್ರಾಮದಲ್ಲಿ ಶನಿವಾರ ಪ್ರಚಾರ ನಡೆಸುವ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿ, ಮೈಸೂರು ಜಿಲ್ಲೆಯ ವರುಣ ವಿಧಾನಸಭಾ ಕ್ಷೇತ್ರದಲ್ಲಿ ರಸ್ತೆ, ಚರಂಡಿ ಸೇರಿದಂತೆ ಯಾವುದೇ ಅಭಿವೃದ್ಧಿ ಕಾರ್ಯ ಸಮರ್ಪಕವಾಗಿ ಆಗಿಲ್ಲ. ಅವ್ಯವಸ್ಥೆಯಿಂದ ಕೂಡಿದೆ. ಇದನ್ನು ಸಿದ್ದರಾಮಯ್ಯ ಅವರು ಒಂದು ಬಾರಿ ಕ್ಷೇತ್ರದಲ್ಲಿ ಓಡಾಡಿಕೊಂಡು ನೋಡಬೇಕು. ಅವರು ಕರೆದರೆ ಅವರೊಂದಿಗೆ ನಾನು ಕೂಡ ಹೋಗುತ್ತೇನೆ ಎಂದರು.

ಕ್ಷೇತ್ರದಲ್ಲಿ ಅವರು ಮಾಡಿರುವ ಕೆಲಸ ಅವರಿಗೆ ತೃಪ್ತಿ ಕೊಟ್ಟಿದೆ ಅಂದರೆ, ಅವರಿಗೆ ನಮಸ್ಕಾರ ಮಾಡಿ ಏನೂ ಮಾತನಾಡಲ್ಲ. ನಿಜಲಿಂಗಪ್ಪ, ದೇವರಾಜ ಅರಸುಗಿಂತ ಸಿದ್ದರಾಮಯ್ಯ ದೊಡ್ಡವರಲ್ಲ. ಎಲ್ಲವನ್ನೂ ಜನರು ತೀರ್ಮಾನ ಮಾಡುತ್ತಾರೆ. ಅವರ ತೀರ್ಮಾನಕ್ಕೆ ಎಲ್ಲರೂ ತಲೆಬಾಗೋಣ. ಸಿದ್ದರಾಮಯ್ಯ ಅವರು ಇನ್ನೊಬ್ಬರ ಮೇಲೆ ಗೂಬೆ ಕೂರಿಸುವುದು ಬಿಟ್ಟು ವಾಸ್ತವಾಂಶಕ್ಕೆ ಗಮನ ನೀಡಿದರೆ ಒಳ್ಳೆಯದು ಎಂದರು.

ವರುಣದಲ್ಲಿ ಪ್ರಚಾರಕ್ಕೆ ಅಡ್ಡಿಪಡಿಸಿದ ಸಂಬಂಧ ಪ್ರತಿಕ್ರಿಯಿಸಿದ ಸೋಮಣ್ಣ, ವರುಣದಲ್ಲಿ ಪ್ರಚಾರಕ್ಕೆ ಹೋದಾಗೆಲ್ಲಾ ಅಡ್ಡಿಪಡಿಸುತ್ತಿದ್ದಾರೆ. ನಾವು ಪ್ರಚಾರಕ್ಕೆ ಹೋದರೆ ರಸ್ತೆಗೆ ಅಡ್ಡಲಾಗಿ ನೊಗ ಇಡ್ತಾರೆ. ಆಚೆಗೆ ಹೋಗಬಾರದು ಅಂತಾರೆ. ಇವೆಲ್ಲ ಮಾಡುತ್ತಿರುವುದು ಸರಿಯಲ್ಲ. ಈ ರಾಜ್ಯದ ಮಾಜಿ ಸಿಎಂಗೆ ಮುಜುಗರವಾಗಬಾರದೆಂದು ನಾನು ಸಹಿಸಿಕೊಂಡಿದ್ದೇನೆ. ಆದರೂ ಅರ್ಥ ಮಾಡಿಕೊಂಡಿಲ್ಲ ಅಂದ್ರೆ ಹೇಗೆ? ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಗ್ರಾಮೀಣ ಪ್ರದೇಶದಲ್ಲಿ ಅಬ್ಬರದ ಪ್ರಚಾರ: ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಗ್ರಾಮೀಣ ಪ್ರದೇಶಗಳಲ್ಲಿ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಬಿರುಸಿನ ಪ್ರಚಾರ ನಡೆಸಿ ಮತಯಾಚಿಸಿದರು.

ತಾಲೂಕಿನ ಉಡಿಗಾಲ, ದೇವಲಾಪುರ, ಉಗೇದನಹುಂಡಿ, ಚಿಕ್ಕಕೆಂಪಿಸಿಹುಂಡಿ, ಕಟ್ನವಾಡಿ, ಕೊತ್ತಲವಾಡಿ ಸೇರಿದಂತೆ ಸುಮಾರು 20ಕ್ಕೂ ಹೆಚ್ಚು ಗ್ರಾಮಗಳಲ್ಲಿ ಸೋಮಣ್ಣ ಉರಿಬಿಸಿಲನ್ನೂ ಲೆಕ್ಕಿಸದೆ ಪ್ರಚಾರ ನಡೆಸಿ, ಮತಯಾಚಿಸಿದರು.

ಇವರೊಂದಿಗೆ ಮಾಜಿ ಶಾಸಕ ಪ್ರೊ.ಕೆ. ಆರ್. ಮಲ್ಲಿಕಾರ್ಜುನಪ್ಪ, ಕೇಂದ್ರ ಬರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ. ರಾಮಚಂದ್ರ, ಜಿಪಂ ಮಾಜಿ ಅಧ್ಯಕ್ಷರಾದ ನಾಗಶ್ರೀ ಪ್ರತಾಪ್, ಮುಖಂಡರಾದ ವೃಷಬೇಂದ್ರಪ್ಪ, ಚಿನ್ನಸ್ವಾಮಿ, ಚಂದ್ರು, ರೂಪಾ ಶೇಖರ್ ಸೇರಿದಂತೆ ಸ್ಥಳೀಯ ಮುಖಂಡರು, ಕಾರ್ಯಕರ್ತರು, ಶಕ್ತಿ ಕೇಂದ್ರಗಳ ಪದಾಧಿಕಾರಿಗಳು ಹಾಜರಿದ್ದರು.

ನಾಳೆ ಚಾ.ನಗರಕ್ಕೆ ರಾಹುಲ್, ಖರ್ಗೆ



ರಾಹುಲ್‌ಗಾಂಧಿ



ಮಲ್ಲಿಕಾರ್ಜುನ ಖರ್ಗೆ

ಚಾಮರಾಜನಗರ, 29– ಚಾಮರಾಜನಗರ ಜಿಲ್ಲಾ ಕೇಂದ್ರಕ್ಕೆ ಮೇ 1ರಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಮಾಜಿ ಅಧ್ಯಕ್ಷ ರಾಹುಲ್‌ಗಾಂಧಿ ಭೇಟಿ ನೀಡುತ್ತಿದ್ದಾರೆ ಎಂದು ಕಾಂಗ್ರೆಸ್‌ನ ಜಿಲ್ಲಾ ಘಟಕದ ಅಧ್ಯಕ್ಷ ಮರಿಸ್ವಾಮಿ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಂದು ಮಧ್ಯಾಹ್ನ 3.30ಕ್ಕೆ ಹಾಸನ ಜಿಲ್ಲೆಯ ಅರಸಿಕೆರೆಯಿಂದ ಹೆಲಿಕಾಪ್ಟರ್‌ನಲ್ಲಿ ನಗರದ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣಕ್ಕೆ ರಾಹುಲ್ ಗಾಂಧಿ ಹಾಗೂ ಮಲ್ಲಿಕಾರ್ಜುನ ಖರ್ಗೆ ಆಗಮಿಸಲಿದ್ದಾರೆ. ಬಳಿಕ ಸಂತೇಮರಹಳ್ಳಿ ರಸ್ತೆಯಲ್ಲಿರುವ ಆದಿಶಕ್ತಿ ದೇವಸ್ಥಾನದ ಪಕ್ಕದ ಮೈದಾನದಲ್ಲಿ ನಡೆಯುವ ಬಹಿರಂಗ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಚಾಮರಾಜನಗರ ವಿಧಾನಸಭಾ ಕ್ಷೇತ್ರ ಕಾಂಗ್ರೆಸ್‌ನ ಭದ್ರಕೋಟೆಯಾಗಿದ್ದು, ಇಲ್ಲಿ ಪಕ್ಷದ ವರಿಷ್ಠರು ಕ್ಷೇತ್ರದ ಕಾಂಗ್ರೆಸ್‌ನ ಅಭ್ಯರ್ಥಿ ಸಿ.ಪುಟ್ಟರಂಗಶೆಟ್ಟಿ ಅವರ ಪರವಾಗಿ ಮತಯಾಚಿಸಲಿದ್ದಾರೆ. ಈ ಕಾರ್ಯಕ್ರಮಕ್ಕೆ ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳಿಂದ ಸುಮಾರು 15 ಸಾವಿರಕ್ಕೂ ಹೆಚ್ಚು ಜನರು ಪಾಲ್ಗೊಳ್ಳುವ ನಿರೀಕ್ಷೆ ಮಾಡಲಾಗಿದ್ದು, ಪಕ್ಷದಿಂದ ಸಕಲ ಸಿದ್ಧತೆ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಮೇ 4ರಂದು ಸಿದ್ದರಾಮಯ್ಯ ಪ್ರವಾಸ: ಮೇ 4ರಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿ ಬಹಿರಂಗ ಸಭೆ ನಡೆಸಲಿದ್ದಾರೆ ಎಂದು ಮರಿಸ್ವಾಮಿ ಹೇಳಿದರು.

ಅಂದು ಬೆಳಗ್ಗೆ 10.30ಕ್ಕೆ ಹನೂರು, ಮಧ್ಯಾಹ್ನ 12.30 ಕೊಳ್ಳೇಗಾಲ, 3.30ಕ್ಕೆ ಚಾಮರಾಜನಗರ ಹಾಗೂ ಸಂಜೆ 6.30ಕ್ಕೆ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ನಡೆಯುವ ಕಾಂಗ್ರೆಸ್‌ನ ಪ್ರಜಾಧ್ವನಿ ಯಾತ್ರೆಯ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಉಪಾಧ್ಯಕ್ಷ ಬಿ.ಕೆ. ರವಿಕುಮಾರ್, ಮುಖಂಡರಾದ ಲತಾ ಜತ್ತಿ, ಮಹದೇವಶೆಟ್ಟಿ, ಆರ್.ಮಹದೇವು, ಸೋಮೇಶ್ ಇದ್ದರು.

ಇಂದು ನಮ್ಮ ನಡೆ ಮತಗಟ್ಟೆ ಕಡೆ ಕಾರ್ಯಕ್ರಮ

ಚಾಮರಾಜನಗರ, ಏ.29– ಮತದಾರರಲ್ಲಿ ಮತಗಟ್ಟೆಯ ಕುರಿತು ಜಾಗೃತಿ ಮೂಡಿಸುವ ಸಲುವಾಗಿ ಏ.30ರಂದು ಜಿಲ್ಲೆಯಲ್ಲಿ ನಮ್ಮ ನಡೆ ಮತಗಟ್ಟೆ ಕಡೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ವಿಧಾನಸಭಾ ಚುನಾವಣೆಯ ಮತದಾನವು ಮೇ 10ರಂದು ನಡೆಯಲಿದೆ. ಮತದಾರರಲ್ಲಿ ಮತಗಟ್ಟೆಯ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ರಾಷ್ಟ್ರೀಯ ಹಬ್ಬದ ಮಾದರಿಯಲ್ಲಿ ಏಕಕಾಲದಲ್ಲಿ ಏ.30ರಂದು ನಮ್ಮ ನಡೆ ಮತಗಟ್ಟೆಯ ಕಡೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಏ.30ರಂದು ಬೆಳಗ್ಗೆ 8.30 ಗಂಟೆಗೆ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಚುನಾವಣಾಧಿಕಾರಿಗಳ ನೇತೃತ್ವದಲ್ಲಿ ಜಿಲ್ಲಾಡಳಿತ ಭವನದ ಮುಂಭಾಗ ನಮ್ಮ ನಡೆ ಮತಗಟ್ಟೆಯ ಕಡೆ ಕಾರ್ಯಕ್ರಮ ಆರಂಭವಾಗಲಿದೆ.

ಮತದಾನ, ಮತ ಎಣಿಕೆ ಹಿನ್ನೆಲೆ

ಮದ್ಯ ಮಾರಾಟ ನಿಷೇಧಿಸಿ ಜಿಲ್ಲಾಧಿಕಾರಿ ಆದೇಶ

ಚಾಮರಾಜನಗರ, ಏ.29– ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಮತದಾನ ಹಾಗೂ ಮತ ಎಣಿಕೆಯು ಶಾಂತ ರೀತಿಯಲ್ಲಿ ಮತ್ತು ಮುಕ್ತವಾಗಿ ನಡೆಸಲು ಜಿಲ್ಲೆಯಾದ್ಯಂತ ಎಲ್ಲಾ ರೀತಿಯ ಮದ್ಯದಂಗಡಿ (ಪರವಾನಗಿ)ಗಳನ್ನು ಮೇ 8ರಂದು ಸಂಜೆ 5ರಿಂದ ಮತದಾನ ದಿನವಾದ ಮೇ 10ರ ಮಧ್ಯರಾತ್ರಿ 12 ಗಂಟೆಯವರೆಗೆ ಹಾಗೂ ಮತ ಎಣಿಕೆ ನಿಮಿತ್ತ ಮೇ 12ರ ಮಧ್ಯರಾತ್ರಿಯಿಂದ ಮೇ 13ರ ಮಧ್ಯರಾತ್ರಿಯವರೆಗೆ ಮುಚ್ಚಲು ಹಾಗೂ ಯಾವುದೇ ರೀತಿಯ ಮದ್ಯದ ಸಾಗಾಣಿಕೆ, ಮಾರಾಟ, ಶೇಖರಣೆ ಹಾಗೂ ಹಂಚಿಕೆಯನ್ನು ನಿಷೇಧಿಸಿ ಒಣದಿನ (Dry Days) ಗಳೆಂದು ಘೋಷಿಸಿ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಅವರು ಆದೇಶ ಹೊರಡಿಸಿದ್ದಾರೆ.

ಒಣದಿನಗಳ ಸಂದರ್ಭದಲ್ಲಿ ಯಾವುದೇ ರೀತಿಯಲ್ಲಿ ಸನ್ನದು ಹೊಂದಿರುವ ಬಾರ್, ಕ್ಲಬ್, ರೆಸ್ಟೋರೆಂಟ್, ಸ್ಟಾರ್ ಹೋಟೆಲ್ ಇತ್ಯಾದಿಗಳಲ್ಲಿ ಹಾಗೂ ಹೋಟೆಲ್, ಡಾಬಾ ಅಥವಾ ಯಾವುದೇ ತರಹದ ಸಾರ್ವಜನಿಕ ಸ್ಥಳಗಳಲ್ಲಿ ಮದ್ಯ ಮಾರಾಟ ಮತ್ತು ಸರಬರಾಜು ಮಾಡುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ. ಒಣ ದಿನಗಳೆಂದು ಘೋಷಿಸಿರುವ ಸಮಯದಲ್ಲಿ ಮದ್ಯ ಸಾಗಾಣಿಕೆ, ಮಾರಾಟ, ಶೇಖರಣೆ, ಹಂಚಿಕೆಯು ಅಪರಾಧವಾಗಿರುತ್ತದೆ ಎಂದು ಜಿಲ್ಲಾಧಿಕಾರಿಯವರು ಆದೇಶದಲ್ಲಿ ತಿಳಿಸಿದ್ದಾರೆ.

ಮನೆಯಿಂದಲೇ 313 ಮಂದಿ ಮತ ಚಲಾವಣೆ



ಚಾಮರಾಜನಗರ, ಏ.29– ಜಿಲ್ಲೆಯಲ್ಲಿ ಮನೆಯಿಂದಲೇ ಮತದಾನ ಮಾಡಲು ಕೋರಿಕೆ ಸಲ್ಲಿಸಿದ್ದ ಎಂಭತ್ತು ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು ಹಾಗೂ ವಿಶೇಷಚೇತನರ ಮತದಾರರ ಪೈಕಿ 313 ಮಂದಿ ತಮ್ಮ ಹಕ್ಕು ಚಲಾಯಿಸಿದ್ದಾರೆ.

ಹನೂರು ವಿಧಾನಸಭಾ ಕ್ಷೇತ್ರದಲ್ಲಿ ಎಂಭತ್ತು ವರ್ಷ ಮೇಲ್ಪಟ್ಟ 50 ಹಿರಿಯ ನಾಗರಿಕರು, 25 ವಿಶೇಷಚೇತನರು ಮತ ಚಲಾಯಿಸಿದ್ದಾರೆ. ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದಲ್ಲಿ ಎಂಭತ್ತು ವರ್ಷ ಮೇಲ್ಪಟ್ಟ 49 ಹಿರಿಯ ನಾಗರಿಕರು, 31 ವಿಶೇಷಚೇತನರು ಮತ ಚಲಾಯಿಸಿದ್ದಾರೆ. ಚಾಮರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಎಂಭತ್ತು ವರ್ಷ ಮೇಲ್ಪಟ್ಟ 51 ಹಿರಿಯ ನಾಗರಿಕರು, 26 ವಿಶೇಷಚೇತನರು ಮತ ಚಲಾಯಿಸಿದ್ದಾರೆ. ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಎಂಭತ್ತು ವರ್ಷ ಮೇಲ್ಪಟ್ಟ 59 ಹಿರಿಯ ನಾಗರಿಕರು, 22 ವಿಶೇಷಚೇತನರು ಮತ ಚಲಾಯಿಸಿದ್ದಾರೆ.

ಕೋರಿಕೆ ಅರ್ಜಿ ಸಲ್ಲಿಸಿ ನೋಂದಣಿಯಾದ ಅವಧಿಯ ಬಳಿಕ 8 ಮಂದಿ ಹಿರಿಯ ನಾಗರಿಕರು ಮೃತಪಟ್ಟಿದ್ದಾರೆ. ಮೂವರು ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲಾಗಿದ್ದಾರೆ. ಇಬ್ಬರು ಮನೆಯಲ್ಲಿ ಲಭ್ಯವಿಲ್ಲದೆ ಹೊರಗೆ ತೆರಳಿದ್ದಾರೆ. ಮೂವರು ನಿರಾಕರಿಸಿದ್ದಾರೆ. ಈ ಎಲ್ಲಾ ಉಳಿದ ಎಂಟು ಮಂದಿಗೆ ಮೇ 6ರಂದು ಮತ್ತೊಮ್ಮೆ ಮತದಾನಕ್ಕೆ ಅವಕಾಶ ಮಾಡಿಕೊಡಲಾಗುತ್ತದೆ.

ಡಾ.ಪರಮೇಶ್ವರ್‌ಗೆ ಕಲ್ಲೇಟು ಖಂಡಿಸಿ ಕಾಂಗ್ರೆಸ್ ಪ್ರತಿಭಟನೆ



ಚಾಮರಾಜನಗರ, ಏ.29– ಚುನಾವಣಾ ಪ್ರಚಾರದ ವೇಳೆ ಕೊರಟಗೆರೆ ತಾಲೂಕು ಬೈರೇನಹಳ್ಳಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮಾಜಿ ಡಿಸಿಎಂ ಡಾ.ಪರಮೇಶ್ವರ್ ಅವರ ಪ್ರಚಾರ ನಡೆಸುತ್ತಿದ್ದ ವೇಳೆ ಕಲ್ಲು ತೂರಾಟ ನಡೆದಿರುವುದನ್ನು ಖಂಡಿಸಿ, ನಗರದ ಭುವನೇಶ್ವರಿ ವೃತ್ತದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿ ಕೂಡಲೇ ಕಲ್ಲು ತೂರಿದ ದುಷ್ಕರ್ಮಿಗಳನ್ನು ಬಂಧಿಸಬೇಕು ಎಂದು ಒತ್ತಾಯಿಸಿ ಪ್ರತಿಭಟನೆ ನಡೆಸಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ. ರವಿಕುಮಾರ್, ಪರಿಶಿಷ್ಟ ಜಾತಿ ಜಿಲ್ಲಾ ಕಾಂಗ್ರೆಸ್ ವಿಭಾಗದ ಅಧ್ಯಕ್ಷ ನಲ್ಲೂರು ಸೋಮೇಶ್ವರ್, ಪ್ರಚಾರ ಸಮಿತಿ ತಾಲೂಕು ಅಧ್ಯಕ್ಷ ಆಲೂರು ಪ್ರದೀಪ್, ಜಿಪಂ ಮಾಜಿ ಸದಸ್ಯ ರಮೇಶ್, ಮಹದೇವಶೆಟ್ಟಿ, ಜಿಲ್ಲಾ ಪ್ರಧಾನ ಕಾಂಗ್ರೆಸ್ ಆರ್.ಮಹದೇವ್ ರಾಮಸಮುದ್ರ ನಾಗರಾಜು, ಸುರೇಶ್, ಸಂಘಸೇನಾ, ಶಿವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎ.ಎಸ್.ಗುರುಸ್ವಾಮಿ, ಮಹಮದ್ ಅಸ್ಗರ್ ಮುನ್ನಾ, ಕಮಲ್ನಾಗ್ ಕಾಗಲವಾಡಿ ಶಿವಸ್ವಾಮಿ, ನಾಗಯ್ಯ, ಲಿಂಗಯ್ಯ, ಹನುಮಂತು, ಗೋವಿಂದ ರಾಜು, ಸ್ವಾಮಿ ಗ್ರಾಮಾಂತರ ಪರಿಶಿಷ್ಟ ಜಾತಿ ವಿಭಾಗದ ಅಧ್ಯಕ್ಷ ಸೋಮಣ್ಣ, ಕೂಬೇಶ್ವರ್, ಶಂಬಪ್ಪದೊರೆ ಮುತ್ತಿಗೆ, ಉಮೇಶ್, ಮಹದೇವಸ್ವಾಮಿ, ಮರಿ ಯಾದಹುಂಡಿ ಕುಮಾರ್, ರಾಮೇಗೌಡ, ಪುಟ್ಟಸ್ವಾಮಿ, ಎಚ್.ಎಂ. ಮಹದೇವಸ್ವಾಮಿ, ಬ್ಯಾಡಮೂಡ್ಲು ನಾಗರಾಜು, ಜಯರಾಜ್, ದೊರೆಸ್ವಾಮಿ, ಸಿದ್ದರಾಜು, ಪಕ್ಷ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು ಇದ್ದರು.

ಮೂರನೇ ಪುಟದಿಂದ

ಮೋದಿ ಮೋಡಿ

ಎರಡೂ ಬದಿಯ 200 ಮೀಟರ್ ವ್ಯಾಪ್ತಿಯಲ್ಲಿರುವ ಕಟ್ಟಡಗಳಲ್ಲಿ ವಾಸಿಸುತ್ತಿರುವವರ ಮಾಹಿತಿ ಕಲೆ ಹಾಕಿರುವ ಪೊಲೀಸರು, ಮಾರ್ಗದಲ್ಲಿರುವ ಮರಗಳ ಒಣಗಿದ, ನಿಶ್ಶಕ್ತ ರೆಂಬೆಗಳನ್ನು ತೆರವುಗೊಳಿಸಿ ಅಪಾಯ ಸಂಭವಿಸದಂತೆ ಕ್ರಮ ವಹಿಸಲಾಗಿದೆ.

ಪ್ರಧಾನಿಗಳು ಸಾಗುವ ರಸ್ತೆ, ಜಂಕ್ಷನ್, ರಿಂಗ್ ರಸ್ತೆಗಳಲ್ಲಿ ಕೆಲ ಗಂಟೆಗಳ ಕಾಲ ಸಾರ್ವಜನಿಕ ವಾಹನ ಸಂಚಾರ ನಿರ್ಬಂಧಿಸಿ ಬದಲಿ ಮಾರ್ಗ ಸೂಚಿಸಿರುವುದಲ್ಲದೆ, ವಾಹನ ನಿಲುಗಡೆಗೆ ಸ್ಥಳ ನಿಗದಿಪಡಿಸಿ ನಗರ ಪೊಲೀಸ್ ಆಯುಕ್ತರು ಅಧಿಸೂಚನೆ ಹೊರಡಿಸಿದ್ದಾರೆ. ಇಂದು ಬೆಳಗ್ಗೆ ಆಯುಕ್ತರಾದ ಬಿ.ರಮೇಶ್ ಅವರು ಮೈಸೂರಿನ ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನದಲ್ಲಿ ಅಧೀನ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಗಳಿಗೆ ಪ್ರಧಾನಮಂತ್ರಿಗಳ ಬಂದೋಬಸ್ತ್ ಕರ್ತವ್ಯದ ಬಗ್ಗೆ ಬ್ರೀಫ್ ಮಾಡಿದರು. ಮಧ್ಯಾಹ್ನದ ನಂತರ ಎಸ್‌ಪಿಜಿ ಅಧಿಕಾರಿಗಳೊಂದಿಗೆ ಪ್ರಧಾನಿಗಳನ್ನು ಕರೆದೊಯ್ಯುವ ಮಾರ್ಗ, ರೋಡ್ ಶೋ ಮಾರ್ಗದಲ್ಲಿ ಭದ್ರತಾ ವ್ಯವಸ್ಥೆಯ ತಾಲೀಮು ನಡೆಸಿದರು.

ಈ ವೇಳೆ ಚಾಮರಾಜ ಜೋಡಿ ರಸ್ತೆ, ರಾಜಮಾರ್ಗ ಹಾಗೂ ರಿಂಗ್ ರಸ್ತೆ, ನಂಜನಗೂಡು ರಸ್ತೆಯ ಮಂಡಕಳ್ಳಿ ವಿಮಾನ ನಿಲ್ದಾಣದವರೆಗೆ ಇಂದು ಸಂಜೆ ಸಾರ್ವಜನಿಕರ ವಾಹನ ಸಂಚಾರ ಸ್ಥಗಿತಗೊಂಡಿದ್ದ ಕಾರಣ ವಾಹನ ಸವಾರರು ಪರದಾಡುವಂತಾಯಿತು. ಮೂರು ದಿನ ರಜೆ ಇರುವ ಕಾರಣ ಮೈಸೂರಿಗೆ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಿದ್ದು, ರಸ್ತೆಗಳ ಸಂಚಾರ ನಿರ್ಬಂಧದಿಂದಾಗಿ ಅವರೂ ಸಹ ಪರಿತಪಿಸುವಂತಾಗಿದೆ. ಪ್ರಧಾನಿಗಳು ರೋಡ್ ಶೋ ಮಾಡುವ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಸಿವಿಲ್, ಸಂಚಾರ, ಕೆಎಸ್‌ಆರ್‌ಪಿ, ಸಿಎಆರ್, ಕಮಾಂಡೋ ಪಡೆ, ಮೌಂಟೆಡ್, ಹೋಂ ಗಾರ್ಡ್ ಹಾಗೂ ಅರೆಸೇನಾ ಪಡೆ ಸೇರಿದಂತೆ ಸುಮಾರು ಎರಡೂವರೆ ಸಾವಿರ ಮಂದಿ ಪೊಲೀಸ್ ಸಿಬ್ಬಂದಿಯನ್ನು ಭದ್ರತೆಗಾಗಿ ನಿಯೋಜಿಸಿದ್ದು, ಭಾರೀ ಕಟ್ಟೆಚ್ಚರ ವಹಿಸಲಾಗಿದೆ.

ಮೊಬೈಲ್ ಕಮಾಂಡ್ ಸೆಂಟರ್, ರಾಜಮಾರ್ಗದ ಸಿಸಿ ಟಿವಿ ಕ್ಯಾಮರಾಗಳಲ್ಲಿ ಸೆರೆಯಾಗುವ ದೃಶ್ಯಾವಳಿಯನ್ನು ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಮಾಡಿರುವ ನಿರ್ವಹಣಾ ಘಟಕದಲ್ಲಿ ಪರಿಶೀಲಿಸಿ ನಿಗಾ ವಹಿಸಲಾಗುತ್ತಿದೆ. ಇಂದು ಸಂಜೆ ಎಸ್‌ಪಿಜಿ ಮತ್ತು ಹಿರಿಯ ಪೊಲೀಸ್ ಅಧಿಕಾರಿಗಳು ಪ್ರಧಾನಮಂತ್ರಿಗಳ ಭದ್ರತಾ ವ್ಯವಸ್ಥೆಯ ಅಂತಿಮ ಮೇಲ್ವಿಚಾರಣೆ ನಡೆಸಿದರು. ಭಾನುವಾರ ಮಧ್ಯಾಹ್ನ 12 ರಿಂದ ರಾತ್ರಿ 8 ಗಂಟೆವರೆಗೆ ಕೆಲ ಪ್ರಮುಖ ರಸ್ತೆಗಳಲ್ಲಿ ಸಂಚಾರ ನಿರ್ಬಂಧಿಸುವುದರಿಂದ ಸಾರ್ವಜನಿಕರಿಗೆ ಓಡಾಡಲು ತೀವ್ರ ತೊಂದರೆ ಉಂಟಾಗಲಿದೆ.

ಜನರಿಗೆ ತೊಂದರೆ ಕೊಡ್ತಿದ್ದಾರೆ

ಮೇಕೆದಾಟು ಯೋಜನೆಗೆ ಡಿ.ಕೆ.ಶಿವಕುಮಾರ್ ಚಳವಳಿ ನಡೆಸಿದರು. ರಾಹುಲ್ ಗಾಂಧಿ ಭಾರತ್ ಜೋಡೋ ಯಾತ್ರೆ ನಡೆಸಿ ದೇಶದ ಜನರ ಸಮಸ್ಯೆಗಳನ್ನು ತಿಳಿದಿದ್ದಾರೆ. ಧೈರ್ಯದಿಂದ ನಾವು ಮುನ್ನುಗ್ಗುತ್ತೇವೆ. ಯಾರು ಹೆದರಬೇಕಿಲ್ಲ. ನಾವೆಲ್ಲರೂ ಒಗ್ಗಟ್ಟಾಗಿ ಹೋರಾಟ ನಡೆಸೋಣ. ಬಿಜೆಪಿಯವರು ಕಾಂಗ್ರೆಸ್ 70 ವರ್ಷದಲ್ಲಿ ಏನು ಮಾಡಿದ್ದಾರೆ ಅಂತ ಕೇಳುತ್ತಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಸಾಕ್ಷರತೆ ಶೇ.16% ಇತ್ತು. ನಮ್ಮ ಸರ್ಕಾರ ಇರುವವರೆಗೆ ಅದು ಶೇ.75%ರಷ್ಟು ಆಗಿತ್ತು. ಆದರೆ ಬಿಜೆಪಿಯವರು ಬೆಲೆ ಏರಿಕೆ ಮಾಡಿ ಜನರಿಗೆ ತೊಂದರೆ ನೀಡುತ್ತಿದ್ದಾರೆ ಎಂದು ದೂರಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾತನಾಡಿ, ಮಹಾತ್ಮ ಗಾಂಧೀಜಿ ಕುಳಿತಿದ್ದ ಜಾಗದಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರು ಕಾಂಗ್ರೆಸ್ ಪಕ್ಷದ ಚುಕ್ಕಾಣಿ ಹಿಡಿದಿದ್ದಾರೆ. ಕಾಂಗ್ರೆಸ್ ಶಕ್ತಿ ಈ ದೇಶದ ಶಕ್ತಿ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ರಾಜ್ಯ ಅಭಿವೃದ್ಧಿಯಾಗುತ್ತದೆ. ಮಲ್ಲಿಕಾರ್ಜುನ ಖರ್ಗೆ ಅವರ ನಾಯಕತ್ವವನ್ನು ಮಳವಳ್ಳಿ ಜನರು ಬೆಂಬಲಿಸಬೇಕು ಎಂದರು. ಕಳೆದ ಬಾರಿ ಬಿಜೆಪಿ ದೂರ ಇಟ್ಟು ಕುಮಾರಸ್ವಾಮಿ ಅವರಿಗೆ ಅಧಿಕಾರ ನೀಡಿದ್ದೀರಿ. ಆದರೆ ಅದನ್ನು ಅವರು ಉಳಿಸಿಕೊಳ್ಳಲಿಲ್ಲ. ಜೆಡಿಎಸ್ ಅಭ್ಯರ್ಥಿ ಡಾ.ಕೆ.ಅನ್ನದಾನಿ ನನ್ನ ಸ್ನೇಹಿತ. ಅವರು ಹಾಡು ಹಾಡಿಕೊಂಡು ಇರಲಿ. ಅಭಿವೃದ್ಧಿಗಾಗಿ ನಮ್ಮ ಅಭ್ಯರ್ಥಿ ಪಿ.ಎಂ.ನರೇಂದ್ರಸ್ವಾಮಿ ಅವರಿಗೆ ಮತ ನೀಡಿ, ಇಲ್ಲಿ ನಾನೇ ಅಭ್ಯರ್ಥಿ ಎಂದು ಭಾವಿಸಿ ಎಂದು ಹೇಳಿದರು. ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದು ಕೆಟ್ಟ ಆಡಳಿತ ನೀಡಿರುವುದನ್ನು ನೋಡಿದ್ದೀರಿ. ನಿಮಗೆ ಅಚ್ಛೇದಿನ ಬರುತ್ತದೆ ಎಂದು ಹೇಳಿದ್ದರು. ಅವರ ಅವಧಿಯಲ್ಲಿ ಏನಾದರೂ ಬದಲಾವಣೆ ಆಗಿದೆಯೇ ಎಂಬುದನ್ನು ಅರಿತುಕೊಳ್ಳಿ. ಪ್ರತಿದಿನ ಘಟಾನುಘಟಿ ನಾಯಕರು ಬಿಜೆಪಿ ತೊರೆದು ಕಾಂಗ್ರೆಸ್ ಸೇರುತ್ತಿದ್ದಾರೆ. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಸಚಿವರು ಸೇರಿದಂತೆ ಹಲವರು ಕಾಂಗ್ರೆಸ್‌ಗೆ ಬಂದಿದ್ದಾರೆ ಎಂದರು.

ಮಂಡ್ಯದಲ್ಲಿ ಕಳೆದ ಬಾರಿ ಒಂದು ಕ್ಷೇತ್ರವನ್ನು ಗೆಲ್ಲಲು ಸಾಧ್ಯವಾಗಿರಲಿಲ್ಲ. ಆದರೂ ವಿಧಾನ ಪರಿಷತ್ ಚುನಾವಣೆಯಲ್ಲಿ ನಮ್ಮ ಇಬ್ಬರು ಅಭ್ಯರ್ಥಿಗಳು ಗೆಲುವು ಸಾಧಿಸಿದರು. ಜಿಲ್ಲೆಯಲ್ಲಿ 7 ಮಂದಿ ಜೆಡಿಎಸ್ ಶಾಸಕರು ಇದ್ದರೂ ಮಧು ಜಿ.ಮಾದೇಗೌಡ ಅವರು ಗೆದ್ದಿದ್ದಾರೆ ಎಂದರೆ ಜನತೆ ಬದಲಾವಣೆ ಬಯಸುತ್ತಿದ್ದಾರೆ. 20 ಮಂದಿ ಜೆಡಿಎಸ್‌ನವರು ಕಾಂಗ್ರೆಸ್‌ಗೆ ಬಂದಿದ್ದಾರೆ ಎಂದರು.

ಮಲ್ಲಿಕಾರ್ಜುನ ಖರ್ಗೆ ಅವರ ನಾಯಕತ್ವವನ್ನು ಮತ್ತಷ್ಟು ಗಟ್ಟಿಗೊಳಿಸಬೇಕಿದೆ. ನಾನು, ಸಿದ್ದರಾಮಯ್ಯ, ಪರಮೇಶ್ವರ್ ಅವರ ಜೊತೆಗೂಡಿದ್ದರಿಂದ ಪಕ್ಷ ಸಾಕಷ್ಟು ಬಲವರ್ಧನೆಯಾಗಿದೆ. ಕಾಂಗ್ರೆಸ್ ಪಕ್ಷ 5 ಗ್ಯಾರಂಟಿಗಳನ್ನು ಜಾರಿ ಮಾಡದಿದ್ದರೆ ನಾವು ಮತ್ತೆ ಮತ ಕೇಳಲು ಬರುವುದಿಲ್ಲ ಎಂದು ಶಪಥ ಮಾಡಿದರು. ನಮ್ಮ ಭರವಸೆಗಳನ್ನು ಬಿಜೆಪಿಯವರು ಬೋಗಸ್ ಎಂದು ಹೇಳುತ್ತಾರೆ. ಅವರು ನೀಡಿದ್ದ ಎಷ್ಟು ಭರವಸೆ ಈಡೇರಿಸಿದ್ದಾರೆ ಎಂದು ಪ್ರಶ್ನಿಸಿದ ಅವರು ಹೊಸ ಸರ್ಕಾರ ಬಂದು ಜೂ.1ರಿಂದ ನಮ್ಮ ಐದು ಯೋಜನೆಗಳು ಜಾರಿಯಾಗುತ್ತವೆ. ಬೆಲೆ ಏರಿಕೆಯಿಂದ ತತ್ತರಿಸಿರುವ ಜನರ ನೋವುಗಳಿಗೆ ಸ್ಪಂದಿಸಲಿದೆ ಎಂದರು. ಜೆಡಿಎಸ್ ಜಿಲ್ಲಾ ಘಟಕದ ಸಂಘಟನಾ ಕಾರ್ಯದರ್ಶಿ ಟಿ.ಎಂ.ಪ್ರಕಾಶ್ ಜೆಡಿಎಸ್ ತೊರೆದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸಮ್ಮುಖದಲ್ಲಿ ಕಾಂಗ್ರೆಸ್ ಸೇರ್ಪಡೆಗೊಂಡರು.

ಖರ್ಗೆ ಸ್ವಾಗತಿಸಿದ ಜೆಡಿಎಸ್‌ನ ಮರಿತಿಬ್ಬೇಗೌಡ: ಪಟ್ಟಣದ ಜೂನಿಯರ್ ಕಾಲೇಜು ಮೈದಾನದ ಹೆಲಿಪ್ಯಾಡ್‌ನಲ್ಲಿ ಬಂದಿಳಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕೆಪಿಸಿಸಿ ಡಿ.ಕೆ.ಶಿವಕುಮಾರ್ ಅವರನ್ನು ಸ್ವಾಗತಿಸಲು ಜೆಡಿಎಸ್‌ನ ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ ಆಗಮಿಸಿದರು. ವೇದಿಕೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪಿ.ಎಂ.ನರೇಂದ್ರಸ್ವಾಮಿ, ಮಾಜಿ ಸಚಿವ ಬಿ.ಸೋಮಶೇಖರ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ದಡದಪುರ ಬಿ.ಎಸ್.ಶಿವಣ್ಣ, ಕಾಂಗ್ರೆಸ್ ಮುಖಂಡ ಡಾ.ಮೂರ್ತಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಜಿಲ್ಲಾ ಪ್ರಚಾರ ಸಮಿತಿ ಅಧ್ಯಕ್ಷ ಡಾ.ಕೃಷ್ಣ, ಪುರಸಭೆ ಮಾಜಿ ಅಧ್ಯಕ್ಷ ದೊಡ್ಡಯ್ಯ, ಮುಖಂಡರಾದ ಕೆ.ಜೆ.ದೇವರಾಜು, ಎಸ್.ಪಿ.ಸುಂದರ್ ರಾಜ್, ಬಿ.ಪುಟ್ಟಬಸವಯ್ಯ, ಎಂ.ಎನ್.ಸುರೇಶ್, ವಿ.ಪಿ.ನಾಗೇಶ್, ಆರ್.ಎನ್.ವಿಶ್ವಾಸ್, ಸುಜಾತಾ ಕೆ.ಎಂ.ಪುಟ್ಟು, ಸುಷ್ಮಾರಾಜು, ಪುಟ್ಟರಾಮು, ಎಂ.ಬಿ.ಮಲ್ಲಯ್ಯ, ಸಿ.ಮಾಧು ಇದ್ದರು.

ಹತಾಶೆಯಿಂದ ವಿಷಸರ್ಪಕ್ಕೆ ಹೋಲಿಕೆ

ತಲುಪಿದ್ದೇವೆ. ಪ್ರತೀ ಕುಟುಂಬಕ್ಕೆ ಶೌಚಾಲಯ, ನಲ್ಲಿ ಮೂಲಕ ಕುಡಿಯುವ ನೀರು ಸೇರಿದಂತೆ ಜನರ ಮೂಲ ಸೌಲಭ್ಯ ತಲುಪಿಸುವಲ್ಲಿ ನಮ್ಮ ಸರ್ಕಾರ ಸಫಲವಾಗಿದೆ ಎಂದರು. ಮೆಟ್ರೋ ರೈಲು, ಹೆಚ್‌ಎಎಲ್ ಹೆಲಿಕಾಪ್ಟರ್ ನಿರ್ಮಾಣ ಕಾರ್ಖಾನೆ ಸ್ಥಾಪಿಸಿ ಮೇಕ್-ಇನ್-ಇಂಡಿಯಾ ಸಂಕಲ್ಪ ಸಾಕಾರಗೊಳಿಸಲಾಗಿದೆ. ಮೋದಿ ಸರ್ಕಾರದಲ್ಲಿ ಭ್ರಷ್ಟಾಚಾರದ ಬಗ್ಗೆ ಯಾರೂ ಬೆರಳು ಮಾಡಿ ತೋರಿಸಲು ಸಾಧ್ಯವಿಲ್ಲ. ಭ್ರಷ್ಟಾಚಾರ ರಹಿತ ಸರ್ಕಾರ ಕೊಟ್ಟಿರುವ ಪ್ರಧಾನಮಂತ್ರಿಗಳು, ರಾಜ್ಯದಲ್ಲೂ ಭ್ರಷ್ಟಾಚಾರ ಮಾಡಲು ಅವಕಾಶ ಕೊಡುವುದಿಲ್ಲ. ಭ್ರಷ್ಟಾಚಾರ ಮಾಡಿದವರ ಮನೆಯನ್ನು ವಶಕ್ಕೆ ಪಡೆಯುತ್ತೇವೆ ಎಂದು ರಾಜನಾಥ ಸಿಂಗ್ ತಿಳಿಸಿದರು.

ಈ ಹಿಂದೆ ಅಧಿಕಾರ ನಡೆಸಿದ ರಾಜೀವ್ ಗಾಂಧಿ ಅವರ ಅವಧಿಯಲ್ಲಿ ದೆಹಲಿಯಿಂದ ಹೊರಟ 100 ಪೈಸೆ ಪೈಕಿ ಜನರಿಗೆ ತಲುಪುತ್ತಿದ್ದುದು ಕೇವಲ 16 ಪೈಸೆ. ಆ ವೇಳೆ ಅಷ್ಟು ಭ್ರಷ್ಟಾಚಾರ ತಾಂಡವವಾಡುತ್ತಿತ್ತು. ನಾವು ವ್ಯವಸ್ಥೆ ಸುಧಾರಿಸಿ ನೂರಕ್ಕೆ ನೂರರಷ್ಟು ಹಣವನ್ನು ನೇರವಾಗಿ ಅರ್ಹ ಫಲಾನುಭವಿಗಳಿಗೆ ತಲುಪಿಸುತ್ತಿದ್ದೇವೆ ಎಂದು ಅವರು ತಿಳಿಸಿದರು. ಕಳೆದ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಸ್ಪಷ್ಟ ಬಹುಮತ ಬಾರದ ಕಾರಣ 18 ದಿನಗಳ ಕಾಲ ಬಿ.ಎಸ್.ಯಡಿಯೂರಪ್ಪ, ನಂತರ ಒಂದೂವರೆ ವರ್ಷ ಹೆಚ್.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಗಳಾಗಬೇಕಾಯಿತು. ನಂತರ ಮತ್ತೆ ಯಡಿಯೂರಪ್ಪ, ಬಳಿಕ ಬಸವರಾಜ ಬೊಮ್ಮಾಯಿ ಅಧಿಕಾರ ನಡೆಸಿದ್ದಾರೆ. ಈ ಬಾರಿ ಪೂರ್ಣ ಬಹುಮತದೊಂದಿಗೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರಬೇಕು. ಶ್ರೀವತ್ಸ ಅವರು ತಳಮಟ್ಟದ ಬಿಜೆಪಿ ಕಾರ್ಯಕರ್ತರೆಂಬುದನ್ನು ಕೇಳಿದ್ದೇನೆ. ನಿಜವಾದ ಜನಸೇವಕನಿಗೆ ಅವಕಾಶ ಸಿಕ್ಕಿದೆ. ಅವರನ್ನು ಬೆಂಬಲಿಸಿ ಅಭಿವೃದ್ಧಿ ಪರ ಕೆಲಸ ಮಾಡಲು ಅವಕಾಶ ಕೊಡಿ ಎಂದು ಅವರು ಮನವಿ ಮಾಡಿದರು. ಶಾಸಕ ಎಸ್.ಎ.ರಾಮದಾಸ್, ಕೆಆರ್ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀವತ್ಸ, ಮೇಯರ್ ಶಿವಕುಮಾರ್, ಉಪಮೇಯರ್ ಡಾ. ಆರ್.ರೂಪಾ, ಮಾಜಿ ಮೇಯರ್ ಸುನಂದ ಪಾಲನೇತ್ರ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್, ಮಾಜಿ ವಿಧಾನಪರಿಷತ್ ಸದಸ್ಯ ಗೋ. ಮಧುಸೂದನ್, ಮುಖಂಡರಾದ ವಡಿವೇಲು, ರಾಜೀವ್ ಬಬ್ಬರ್ ಸೇರಿದಂತೆ ಹಲವರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಮೈಸೂರಲ್ಲಿ ಬಿರುಸಿನ ಮಳೆ

ನಡೆದಿತ್ತು. ಜೆಎಸ್‌ಎಸ್ ಮಹಾವಿದ್ಯಾಪೀಠದ ಬಳಿ ನಾಲ್ಕು ಬದಿಗೆ ಸ್ವಾಗತ ಕಮಾನು, ಬೃಹತ್ ಫ್ಲೆಕ್ಸ್, ಕಟೌಟ್ ಅಳವಡಿಸಲಾಗುತ್ತಿತ್ತು. ಅಲ್ಲದೆ ರೋಡ್ ಶೋ ಮಾರ್ಗದ ನಿಗದಿತ ಸ್ಥಳಗಳಲ್ಲೂ ಫ್ಲೆಕ್ಸ್ ಹಾಕಲಾಗುತ್ತಿತ್ತು. ವಾಹನ ಸಂಚಾರ ಕಡಿಮೆಯಾದ ಬಳಿಕ ಈ ಎಲ್ಲಾ ಸಿದ್ಧತೆ ಮಾಡಿಕೊಳ್ಳಲಾಗುತ್ತಿತ್ತು. ಆದರೆ ಜೋರು ಮಳೆಯಿಂದ ಇದಕ್ಕೆ ಸ್ವಲ್ಪ ಮಟ್ಟಿನ ಅಡ್ಡಿಯಾಯಿತು. ಆದರೆ ರೋಡ್ ಶೋ ಭಾನುವಾರ ಸಂಜೆ ಇರುವುದರಿಂದ ಸಿದ್ಧತೆಗೆ ಸಮಯಾವಕಾಶವಿದೆ ಎಂದು ಸಂಬಂಧಪಟ್ಟವರು ತಿಳಿಸಿದ್ದಾರೆ.

ವರುಣ ಕ್ಷೇತ್ರದಲ್ಲಿ ಸೋಮಣ್ಣ ಪರ ಜಗ್ಗೇಶ್ ಮತಯಾಚನೆ

ಐದು ಲಕ್ಷ ಜನರಿಗೆ ಮನೆ ಕಟ್ಟಿಸಿಕೊಟ್ಟ, ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣ ಮಾಡಿದ ಇಂತಹ ನಾಯಕನ ಉಳಿಸಿಕೊಳ್ಳಿ



ವರುಣ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಪರವಾಗಿ ರಾಜ್ಯಸಭಾ ಸದಸ್ಯ ಜಗ್ಗೇಶ್ ಬಿರುಸಿನ ಮತಯಾಚನೆ ಮಾಡಿದರು



ವರುಣ ಕ್ಷೇತ್ರ ವ್ಯಾಪ್ತಿಯ ಬುಗತಗಳ್ಳಿ ಗ್ರಾಮದ ನೂರಾರು ಕಾರ್ಯಕರ್ತರು ಜೆಡಿಎಸ್, ಕಾಂಗ್ರೆಸ್ ಪಕ್ಷವನ್ನು ತ್ಯಜಿಸಿ ಮೈಸೂರು ಬಿಜೆಪಿ ಕಾರ್ಯದರ್ಶಿ ಶಿವಪ್ರಕಾಶ್, ಪ್ರಭು, ಸಿದ್ದಪ್ಪ ನೇತೃತ್ವದಲ್ಲಿ ಇದೇ ವೇಳೆ ಬಿಜೆಪಿಗೆ ಸೇರ್ಪಡೆಯಾದರು.

ಮೈಸೂರು, ಏ. 29– ವರುಣ ಕ್ಷೇತ್ರದ ಭಾರತೀಯ ಜನತಾ ಪಕ್ಷದ ಅಭ್ಯರ್ಥಿ ವಿ. ಸೋಮಣ್ಣ ಪರವಾಗಿ ರಾಜ್ಯಸಭಾ ಸದಸ್ಯ ಜಗ್ಗೇಶ್ ಬಿರುಸಿನ ಮತಯಾಚನೆ ಮಾಡಿದರು.

ಕೆಂಪಯ್ಯನಹುಂಡಿ ಹಾಗೂ ರಂಗಸಮುದ್ರ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮತದಾರರ ಭೇಟಿ ಮಾಡಿ ಮತಯಾಚನೆ ಮಾಡಿದರು.

ಈ ವೇಳೆ ಮಾತನಾಡಿದ ಜಗ್ಗೇಶ್, ಸಿದ್ದರಾಮಯ್ಯನವರು ಈ ಕ್ಷೇತ್ರವನ್ನು ಪ್ರತಿನಿಧಿಸಿದ್ದರೂ ವರುಣ ವಿಧಾನಸಭಾ ಕ್ಷೇತ್ರ ಮೈಸೂರು ಜಿಲ್ಲೆಯಲ್ಲಿ ಅತೀ ಹಿಂದುಳಿದ ವಿಧಾನಸಭಾ ಕ್ಷೇತ್ರವಾಗಿದೆ. ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ವರುಣ ಕ್ಷೇತ್ರದ ಅಭಿವೃದ್ಧಿಗೆ ಯಾವುದೇ ರೀತಿಯ ಕಾರ್ಯವನ್ನು ಮಾಡದೇ ಇಡೀ ವರುಣವನ್ನು ಅನಾಥವನ್ನಾಗಿ ಮಾಡಿದ್ದಾರೆ ಎಂದು ಕುಟುಕಿದರು.

ಅಭಿವೃದ್ಧಿಗೆ ಇನ್ನೊಂದು ಹೆಸರೇ ಸೋಮಣ್ಣ. ಬಡವರಿಗೆ ಐದು ಲಕ್ಷ ಮನೆ ಕಟ್ಟಿಸಿದ್ದಾರೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಮಾಡಿದ್ದಾರೆ. ಅಭಿವೃದ್ಧಿ ಜಪ ಮಾಡುವ ನಾಯಕರು ಕ್ಷೇತ್ರದಲ್ಲಿರಬೇಕು. ಹೀಗಾಗಿ ಮತದಾರರು ಸೋಮಣ್ಣರನ್ನು ಬೆಂಬಲಿಸಬೇಕು ಎಂದು ಜಗ್ಗೇಶ್ ಮನವಿ ಮಾಡಿದರು.

ಯಾವುದೇ ಶಾಲಾ-ಕಾಲೇಜುಗಳು, ಸುಸಜ್ಜಿತ ಹಾಸ್ಪಿಟಲ್, ಕಾರ್ಖಾನೆಗಳು, ಸರ್ಕಾರಿ ಕಚೇರಿಗಳು ನಿರ್ಮಾಣ ಮಾಡಲು ಸಿದ್ದರಾಮಯ್ಯಗೆ ಸಾಧ್ಯವಾಗಿಲ್ಲ. ಮುಖ್ಯಮಂತ್ರಿ ಆಗಿದ್ದಾಗಲೇ ಈ ಕ್ಷೇತ್ರಕ್ಕೆ ಏನನ್ನು ಮಾಡದೇ ಇರುವ ಸಿದ್ದರಾಮಯ್ಯನವರು ಮುಂದೆ ಯಾವ ಅಭಿವೃದ್ಧಿಯನ್ನು ಮಾಡಲು ಸಾಧ್ಯ ಹೇಳಿ ಎಂದು ಜಗ್ಗೇಶ್ ಪ್ರಶ್ನಿಸಿದರು.

ರಾಷ್ಟ್ರದಲ್ಲಿ ನರೇಂದ್ರ ಮೋದಿ ಪ್ರಗತಿಯ ಪರ್ವ ಆರಂಭಿಸಿದ್ದಾರೆ. ಸೋಮಣ್ಣ ಕೂಡ ಇದೇ ಹಾದಿಯಲ್ಲಿ ಸಾಗುತ್ತಾ ಬಂದಿದ್ದಾರೆ. ಗೋವಿಂದರಾಜನಗರ ಕ್ಷೇತ್ರದಲ್ಲಿ ಮಾಡಿರುವ ಅಭಿವೃದ್ಧಿ ಬೇರೆ ಯಾವ ಕ್ಷೇತ್ರದಲ್ಲಿಯೂ ಆಗಿಲ್ಲ. ಈ ರೀತಿಯ ನಾಯಕರನ್ನು ಬೆಂಬಲಿಸುವುದು ನಮ್ಮ ಧರ್ಮ ಎಂದು ಜಗ್ಗೇಶ್ ವಿವರಿಸಿದರು.

ಮತದಾರ ಬಂಧುಗಳು ಗೋವಿಂದರಾಜನಗರದ ಅಭಿವೃದ್ಧಿಯ ಹರಿಕಾರ ವಿ. ಸೋಮಣ್ಣಗೆ ಅಮೂಲ್ಯವಾದ ಮತವನ್ನು ನೀಡಿ ಗೆಲ್ಲಿಸಿ ಕೊಡಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮುಖಂಡರಾದ ಚಿನ್ನಂಬಳ್ಳಿ ಮಂಜು, ವಿಜಯಕುಮಾರ್, ಮಲ್ಲೇಶ್, ಶಿವಪ್ರಕಾಶ್ ಹಾಗೂ ಊರಿನ ಮುಖಂಡರು ಉಪಸ್ಥಿತರಿದ್ದರು.

ನಂದಿನಿ ವಿವಾದ ಕಾಂಗ್ರೆಸ್ ಪಕ್ಷದ ಟೂಲ್ ಕಿಟ್

ಮೈಸೂರು: ನಂದಿನಿ ಹಾಲಿನ ಉತ್ಪನ್ನಗಳ ವಿಚಾರ ಕಾಂಗ್ರೆಸ್ ಪಕ್ಷದ ಟೂಲ್ ಕಿಟ್ ಎಂದು ರಾಜ್ಯಸಭಾ ಸದಸ್ಯ ಹಾಗೂ ನಟ ಜಗ್ಗೇಶ್ ಕಟುವಾಗಿ ಟೀಕಿಸಿದರು.



2016ರಲ್ಲಿ ಅಮೂಲ್‌ಗೆ ಕರ್ನಾಟಕ ರಾಜ್ಯದಲ್ಲಿ ಹಾದಿ ಮಾಡಿಕೊಟ್ಟಿದ್ದೇ ಇದೇ ಸಿದ್ದರಾಮಯ್ಯ ಎಂದು ವ್ಯಂಗ್ಯವಾಗಿ ನುಡಿದರು.

ರೈತಾಪಿ ಮನೆ ಹಾಗೂ ಮನಸ್ಸುಗಳಲ್ಲಿ ಇಂದಿಗೂ ನಂದಿನಿ ನೆಲೆಸಿದೆ. ಆದರೆ, ಚುನಾವಣೆ ಸಮೀಪಿಸುತ್ತಿದ್ದಂತೆ ನಂದಿನಿ ಹಾಗೂ ಅಮೂಲ್ ವಿಚಾರವನ್ನು ಮುನ್ನೆಲೆಗೆ ತರುವ ಮುಖೇನ ರೈತಾಪಿ ವರ್ಗದ ಮನ ಕದಡುವ ಕೆಲಸ ಸಿದ್ದರಾಮಯ್ಯ ಹಾಗೂ ಅವರ ಪಕ್ಷದವರಿಂದ ನಡೆದಿದೆ. ಇದನ್ನೇ ಟೂಲ್ ಕಿಟ್ ಅನ್ನುವುದು. ಹಳ್ಳಿಯ ಭಾಷೆಯಲ್ಲಿ ಅದನ್ನು ಬೆಂಕಿ ಹಚ್ಚುವ ಕೆಲಸ ಎನ್ನುತ್ತಾರೆ ಎಂದು ಮಾರ್ಮಿಕವಾಗಿ ನುಡಿದರು.

ಸೋಮಣ್ಣ ಗೆಲುವು ನಿಶ್ಚಿತ: ವರುಣ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಸೋಮಣ್ಣ ಅವರ ಗೆಲುವು ನಿಶ್ಚಿತ. ಏಕೆಂದರೆ, ಅವರು ಕೆಲಸದ ವಿಷಯಕ್ಕೆ ಬಂದರೆ ದೈತ್ಯ ಶಕ್ತಿ. ಅದಕ್ಕೆ ಬೆಂಗಳೂರಿನ ಗೋವಿಂದರಾಜನಗರ ಕ್ಷೇತ್ರ ಸಾಕ್ಷಿಯಾಗಿದೆ. ನಿರೀಕ್ಷೆಗೂ ಮೀರಿದ ಅಭಿವೃದ್ಧಿ ಕೆಲಸ ಆ ಕ್ಷೇತ್ರದಲ್ಲಿ ಆಗಿದೆ. ಆ ಕಾರಣದಿಂದಾಗಿಯೇ ಸೋಮಣ್ಣ ಅವರಿಗೆ ವರುಣ ಕ್ಷೇತ್ರಕ್ಕೆ ಟಿಕೆಟ್ ನೀಡಲಾಗಿದೆ. ಗೋವಿಂದರಾಜನಗರ ಕ್ಷೇತ್ರದ ರಸ್ತೆ ಆಸ್ಪತ್ರೆ, ಶಾಲೆಗಳು ಒಂದಕ್ಕಿಂತ ಒಂದು ಭಿನ್ನ ಹಾಗೂ ಆಕರ್ಷಕವಾಗಿವೆ ಸೋಮಣ್ಣನವರಿಗೆ ಸೋಮಣ್ಣನೇ ಸಾಟಿ ಎಂದು ಬಣ್ಣಿಸಿದರು.

ಇದೇ ನನ್ನ ಕೊನೆಯ ಚುನಾವಣೆ ಎಂದು ಹೇಳುವ ಮೂಲಕ ಸಿದ್ದರಾಮಯ್ಯ ವರುಣ ಕ್ಷೇತ್ರದಲ್ಲಿ ಸೆಂಟಿಮೆಂಟ್ ಸೃಷ್ಟಿಸುವ ಪ್ರಯತ್ನ ನಡೆಸಿದ್ದಾರೆ. ಕೊನೆಯ ಚುನಾವಣೆ ಎಂದು ಅವರು ಹೇಳಬಾರದು. ಏಕೆಂದರೆ, ಸಮರ್ಥ ನಾಯಕ. ಅವರು ಆ ಜಾಗದಲ್ಲಿ ಇರಬೇಕು ಎಂದು ಮಾರ್ಮಿಕವಾಗಿ ಹೇಳಿದರು.

ಸಿಎಂ ಆಯ್ಕೆ ದೈವಿಚ್ಛೆ: ನಾನು ಸಿಎಂ ಆಗಬೇಕೆಂಬ ಸಿದ್ದರಾಮಯ್ಯ ಇಚ್ಛೆ ತಪ್ಪು ಎನ್ನಲಾಗದು. ಆದರೆ, ಎಲ್ಲದಕ್ಕೂ ದೈವೇಚ್ಛೆ ಇರುತ್ತದೆ. ಜತೆಗೆ ಮತದಾರರ ವಿವೇಚನೆಗೆ ಬಿಟ್ಟದ್ದು. ಡಿ.ಕೆ. ಶಿವಕುಮಾರ್ ಸಿಎಂ ಆಗಬೇಕು ಎನ್ನುತ್ತೇವೆ. ಅದು ಅಗುತ್ತಾ. ಎಲ್ಲವೂ ಮತದಾರರ ಮೇಲೆ ಅವಲಂಬಿತವಾಗಿದೆ. ಎಂದರು.

ವರುಣ ಕ್ಷೇತ್ರದಲ್ಲಿ ಸೋಮಣ್ಣ ಪ್ರಚಾರಕ್ಕೆ ತೆರಳಿದ ವೇಳೆ ಕೆಲವರು ಗಲಾಟೆ ಮಾಡಿರುವುದು ಸರಿಯಲ್ಲ. ನಾವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬದುಕುತ್ತಿದ್ದೇವೆ ಎಂಬುದನ್ನು ಅವರು ಅರಿಯಬೇಕು. ಸಿದ್ದರಾಮಯ್ಯ ರಾಜಕೀಯ ಮುತ್ಸದ್ದಿ. ಅವರ ಕಡೆಯವರಿಗೆ ಆ ರೀತಿಯಲ್ಲಿ ನಡೆದುಕೊಳ್ಳದಂತೆ ತಿಳಿಹೇಳಬೇಕು ಎಂದರು.

ರಾಜ್ಯ ಸರ್ಕಾರದ ಮೇಲೆ ಕಾಂಗ್ರೆಸ್ಸಿಗರು 40% ಸರ್ಕಾರ ಎಂದು ಆರೋಪಿಸಿದ್ದಾರೆ. ಆದರೆ, ಸಾಬೀತುಪಡಿಸಲು ಅವರಿಂದ ಸಾಧ್ಯವಾಗಿಲ್ಲ. ಆರೋಪ ಮಾಡಿದ ಆ ಗುತ್ತಿಗೆದಾರರ ಸಂಘದ ಅಧ್ಯಕ್ಷ ಸಿದ್ದರಾಮಯ್ಯ ಅವರ ಶಿಷ್ಯ. ಅವರಿಂದ ಇನ್ನೇನು ನಿರೀಕ್ಷೆ ಮಾಡಲು ಸಾಧ್ಯ ಎಂದು ಹೇಳಿದರು.

ಮೋದಿಯಿಂದ ಲಾಭ: ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಪಾರದರ್ಶಕವಾಗಿರುವುದರಿಂದಲೇ ಇಂದು ಇಡೀ ಭಾರತ ಅವರನ್ನು ಮೆಚ್ಚಿ ಕೊಂಡಾಡುತ್ತಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಪ್ರವಾಸ ರಾಜ್ಯ ರಾಜಕೀಯದಲ್ಲಿ ಹೊಸ ಸಂಚಲನ ಸೃಷ್ಟಿಸಲಿದೆ. 40ರಿಂದ 50 ಕ್ಷೇತ್ರಗಳಲ್ಲಿ ಗರಿಷ್ಠ ಪ್ರಮಾಣದ ಪರಿಣಾಮ ಬೀರಲಿದೆ. ಬಿಜೆಪಿ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮಾತಿನ ಮೇಲೆ ಹಿಡಿತ ಮುಖ್ಯ: ಮೋದಿ ಕುರಿತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆಡಿರುವ ಮಾತು ಸರಿಯಲ್ಲ. ಖರ್ಗೆ ಅವರು ಮಿಕ್ಕವರಿಗೆ ಮಾದರಿ ಆಗಬೇಕು. ಅಂತಹವರೇ ಈ ರೀತಿ ನಡೆದುಕೊಂಡರೆ ಮಿಕ್ಕವರು ಅವರಿಚ್ಛೆಯಂತೆ ಪ್ರತಿಕ್ರಿಯೆ ನೀಡುವುದು ಸಹಜ. ಅದಕ್ಕೆ ಖರ್ಗೆ ಅವರು ಮಾತನಾಡುವ ಮುನ್ನ ಯೋಚಿಸುವುದು ಒಳಿತು ಎಂದು ಸೂಚ್ಯವಾಗಿ ಹೇಳಿದರು.



ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕವೀಶ್‌ಗೌಡ ಅವರು ವಾಲ್ಮೀಕಿ ಪೀಠದ ಶ್ರೀ ಪ್ರಸನ್ನಾನಂದ ಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದರು. ಈ ವೇಳೆ ಮೇಯರ್ ಶಿವಕುಮಾರ್, ಮುಖಂಡ ಟೆನ್ನಿಸ್ ಗೋಪಿ, ಸಮಾಜದ ಬಂಧುಗಳು ಉಪಸ್ಥಿತರಿದ್ದರು.

ಇಂದು ನಿವೃತ್ತ ಸರ್ಕಾರಿ ನೌಕರರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ


ಮೈಸೂರು, ಏ.29– ಕರ್ನಾಟಕ ರಾಜ್ಯ ವಿಶ್ರಾಂತ ಉದ್ಯೋಗಿಗಳ ಸಂಘದ ವತಿಯಿಂದ ನಾಳೆ(ಏ.30) 'ಉಚಿತ ಆರೋಗ್ಯ ತಪಾಸಣಾ ಶಿಬಿರ' ಆಯೋಜಿಸಲಾಗಿದೆ.

ಬೆಳಗ್ಗೆ 10.30ರಿಂದ 1.30ರವರೆಗೆ ಸಂಘದ ಕಚೇರಿಯಲ್ಲಿ ನಿವೃತ್ತ ಸರ್ಕಾರಿ ವೈದ್ಯರು ಹಾಗೂ ಎಎಸ್‌ಜಿ ಕಣ್ಣಿನ ಆಸ್ಪತ್ರೆ ವೈದ್ಯರಿಂದ ಕಣ್ಣಿನ ತಪಾಸಣೆ ನಡೆಯಲಿದ್ದು, ಸಂಘದ ಸದಸ್ಯರೆಲ್ಲರೂ ಭಾಗವಹಿಸುವಂತೆ ಪತ್ರಿಕಾ ಪ್ರಕಟಣೆಯಲ್ಲಿ ಕೋರಲಾಗಿದೆ.

ಆಪರೇಷನ್ ಕಮಲದವರು ದೇಶವನ್ನೇ ಆಪರೇಷನ್ ಮಾಡ್ತಾರೆ

● ರಾಜ್ಯಸಭಾ ಸದಸ್ಯ, ಕಾಂಗ್ರೆಸ್ ಮುಖಂಡ ಹನುಮಂತಯ್ಯ ಆತಂಕ ● ಸರ್ಜಿಕಲ್ ಸ್ಟ್ರೈಕ್‌ನಾದರೂ ನಡೆಸಿ ವಿರೋಧಿಗಳ ಹೊಡೆದುರುಳಿಸಬೇಕು ● ಮೈಸೂರು ಕಾಂಗ್ರೆಸ್ ಕಚೇರಿಯಲ್ಲಿ ಮುಂಚೂಣಿ ಘಟಕಗಳ ಮುಖಂಡರ ಸಭೆ

ಮೈಸೂರು, ಏ.29(ಎಂಕೆ)– ರಾಜಕೀಯ ಯುದ್ಧರಂಗಕ್ಕೆ ಇಳಿದಿದ್ದೇವೆ. ಸರ್ಜಿಕಲ್ ಸ್ಟ್ರೈಕ್ ನಡೆಸಿ, ವಿರೋಧಿಗಳನ್ನು ಹೊಡೆದು ಗೆಲ್ಲಲೇಬೇಕು. ಇಲ್ಲವಾದರೆ ಆಪರೇಷನ್ ಕಮಲ ಮಾಡುತ್ತಿದ್ದವರು ಮುಂದಿನ ದಿನಗಳಲ್ಲಿ ದೇಶವನ್ನೇ ಆಪರೇಷನ್ ಮಾಡುತ್ತಾರೆ ಎಂದು ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ ಆತಂಕ ವ್ಯಕ್ತಪಡಿಸಿದರು.



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿ ಕಾಂಗ್ರೆಸ್ ಕಚೇರಿಯಲ್ಲಿ ಆಯೋಜಿಸಿದ್ದ ಕಾಂಗ್ರೆಸ್‌ನ 22 ಮುಂಚೂಣಿ ಘಟಕಗಳ ರಾಜ್ಯ ಹಾಗೂ ಜಿಲ್ಲಾ ಪದಾಧಿಕಾರಿಗಳ ಸಭೆಯಲ್ಲಿ ರಾಜ್ಯಸಭಾ ಸದಸ್ಯ ಎಲ್.ಹನುಮಂತಯ್ಯ ರಚಿತ 'ಸಿದ್ದ ನಡಿಗೆ 75' ಕೃತಿಯನ್ನು ಸಿ.ಬಸವಲಿಂಗಯ್ಯ ಬಿಡುಗಡೆ ಮಾಡಿದರು

> ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವ ಅವಕಾಶವಿದೆ. ಬಾಯಿಗೆ ಬಂದಂತೆ ಏನೇನೋ ಮಾತನಾಡಿ ಅವಕಾಶ ತಪ್ಪಿಸಿಕೊಳ್ಳಬೇಡಿ. ಜನರ ಹಿತಕಾಯುವ ನಿಟ್ಟಿನಲ್ಲಿ ಕೆಲಸ ಮಾಡಿ, ಪಕ್ಷ ಸಂಘಟಿಸಿ.
> – ಎಲ್.ಹನುಮಂತಯ್ಯ, ರಾಜ್ಯಸಭಾ ಸದಸ್ಯ

ನಗರದ ಜೆಎಲ್‌ಬಿ ರಸ್ತೆಯಲ್ಲಿನ ಕಾಂಗ್ರೆಸ್ ಕಚೇರಿಯಲ್ಲಿ ಆಯೋಜಿಸಿದ್ದ ಕರ್ನಾಟಕ ಕಾಂಗ್ರೆಸ್ ಸಮಿತಿ ಮೈಸೂರು ವಿಭಾಗೀಯ ಮಟ್ಟದ ಕಾಂಗ್ರೆಸ್‌ನ ಎಲಾ 22 ಮುಂಚೂಣಿ ಘಟಕಗಳ ವಿಭಾಗ ಮಟ್ಟದ ಜಿಲ್ಲಾಧ್ಯಕ್ಷರು ಹಾಗೂ ರಾಜ್ಯ ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಮುಂದಿರುವ ರಾಜಕೀಯ ಯುದ್ದದಲ್ಲಿ ಗೆದ್ದು ಕಾಂಗ್ರೆಸ್ ಅಧಿಕಾರಕ್ಕೆ ಬರಲೇಬೇಕು ಎಂದರು.

ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕಾಗಿರುವುದು ಬಿಜೆಪಿಯವರಂತೆ 40 ಪರ್ಸೆಂಟ್ ಕಮಿಷನ್ ಹೊಡೆಯಲು ಅಲ್ಲ. ಬಡವರ ಶ್ರೇಯೋಭಿವೃದ್ಧಿಗಾಗಿ, ಆಶ್ರಯ ಇಲ್ಲದವರಿಗೆ ಆಶ್ರಯ ನೀಡಲು, ನಿರುದ್ಯೋಗಿಗಳಿಗೆ ಉದ್ಯೋಗ ದೊರಕಿಸಲು, ಹಸಿದವರ ಹೊಟ್ಟೆಗೆ ಅನ್ನ ನೀಡಲು, ಬೀದಿ ಬದಿ ವ್ಯಾಪಾರಿಗಳಿಗೆ ಶಕ್ತಿ ತುಂಬಲು ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕಾಗಿದೆ ಎಂದರು.

ಬಡವರಿಗ್ಯಾಕೆ ಬ್ಯಾಂಕ್!: ಕಾಂಗ್ರೆಸ್ ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸಲು ಮುಂದಾದಾಗ ವಿರೋಧಿಸಿದ್ದು ಬಿಜೆಪಿಯವರು. ಬಡವರಿಗ್ಯಾಕೆ ಬ್ಯಾಂಕ್ ಎಂದು ಪ್ರಶ್ನಿಸಿದವರಿಂದ ಬಡವರ ಸಾಲಮನ್ನಾ ಮಾಡಲು ಸಾಧ್ಯವಾಗಿಲ್ಲ. ಕೈಗಾರಿಕೋದ್ಯಮಿಗಳ 16 ಲಕ್ಷ ಕೋಟಿ ರೂ. ಸಾಲಮನ್ನಾ ಮಾಡಿರುವ ಬಿಜೆಪಿಗೆ ಬಡವರ ಕಷ್ಟ ತಿಳಿಯದು. ಬಿಜೆಪಿ ಎಂದಿಗೂ ಉಳ್ಳವರ ಪರವೇ ಹೊರತು ಇಲ್ಲದವರ ಪರವಾಗಿಲ್ಲ ಎಂದು ಕಿಡಿಕಾರಿದರು.

ಕಾಂಗ್ರೆಸ್‌ಗೆ ಮತ ನೀಡುವವರ ಸಂಖ್ಯೆ ಹೆಚ್ಚು: ಚುನಾವಣಾ ಪೂರ್ವ ಸಮೀಕ್ಷೆಗಳ ಪ್ರಕಾರ ಕಾಂಗ್ರೆಸ್‌ಗೆ ಶೇ.43 ರಷ್ಟು ಮತದಾನವಾಗುವ ನಿರೀಕ್ಷೆ ಇದೆ. ಕಳೆದ ಚುನಾವಣೆಯಲ್ಲಿಯೂ ಶೇಕಡಾವಾರು ಹೆಚ್ಚು ಮತದಾನ ಕಾಂಗ್ರೆಸ್ ಪರವಾಗಿದ್ದರೂ ಕ್ಷೇತ್ರಗಳ ಗೆಲುವಿನ ಅಂಕಿಗಳು ಮಾತ್ರ ಕಡಿಮೆಯಾಗಿದ್ದವು. ಈಗಲೂ ಕಾಂಗ್ರೆಸ್‌ಗೆ ಮತ ನೀಡುವವರ ಸಂಖ್ಯೆ ಹೆಚ್ಚಾಗಿದೆ. ಈ ಬಾರೀ ಕಾಂಗ್ರೆಸ್ ಪರ ಅಲೆ ಇದೆ ಎಂಬುದನ್ನರಿತ ಬಿಜೆಪಿ ಹಲವು ಅದ್ವಾನಗಳನ್ನು ಸೃಷ್ಟಿಸಲು ಹೊರಟಿದೆ ಎಂದರು.

ಬಿಜೆಪಿಯವರು ಪಿಎಸ್‌ಐ ಹುದ್ದೆಗೆ ಒಬ್ಬೊಬ್ಬರಿಂದ 80 ಲಕ್ಷ ವಸೂಲಿ ಮಾಡಿದ್ದಾರೆ. ಹಣಕೊಟ್ಟು ಕೆಲಸ ಪಡೆದವನು ಪ್ರಾಮಾಣಿಕನಾಗಿರುತ್ತಾನೆಯೇ... ಬಡವರ್‍ಯಾರು–ಶ್ರೀಮಂತರ್‍ಯಾರು ಎಂಬುದನ್ನು ನೋಡದೆ ವಸೂಲಿಗಿಳಿಯುತ್ತಾನೆ ಈಗಾದರೆ ನೊಂದವರಿಗೆ ನ್ಯಾಯ ಎಲ್ಲಿ ಸಿಗುತ್ತದೆ ಸಾಲು ಸಾಲು ಹಗರಣಗಳು, ಕಮಿಷನ್ ರೂಪದಲ್ಲಿ ಹಣ ದೋಚಿರುವ ಬಿಜೆಪಿಯವರು ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಒಂದೇ ಒಂದು ಹಗರಣವನ್ನು ಕೇಳಿದ್ದಾರಾ.. ನೋಡಿದ್ದಾರಾ... ಇದ್ದರೆ ತೋರಿಸಲಿ ಎಂದು ಸವಾಲೆಸೆದರು.

ಮತ್ತೊಮ್ಮೆ ಸ್ವಾತಂತ್ರ್ಯ ಹೋರಾಟ ಮಾಡಬೇಕಿದೆ: ರಾಜ್ಯಸಭಾ ಸದಸ್ಯ ಎಲ್.ಹನುಮಂತಯ್ಯ ರಚಿತ 'ಸಿದ್ದ ನಡಿಗೆ 75' ಕೃತಿ ಬಿಡುಗಡೆ ಮಾಡಿ ಮಾತನಾಡಿದ ಹಿರಿಯ ರಂಗಕರ್ಮಿ ಸಿ. ಬಸವ ಲಿಂಗಯ್ಯ, ಈ ದೇಶದಲ್ಲಿ ಮತ್ತೊಮ್ಮೆ ಸ್ವಾತಂತ್ರ್ಯ ಹೋರಾಟ ನಡೆಸಬೇಕಾಗಿದೆ. ಪ್ರಜಾಪ್ರಭುತ್ವದ ಮೂಲಕ ಅಧಿಕಾರಕ್ಕೆ ಬಂದವರು ಸರ್ವಾಧಿಕಾರಿಗಳಂತೆ ವರ್ತಿಸುತ್ತಿದ್ದಾರೆ. ಒಂದು ರಾಷ್ಟ್ರ, ಒಂದು ಭಾಷೆ, ಒಬ್ಬ ನಾಯಕ ಎಂಬ ಮಾತುಗಳನ್ನಾಡುತ್ತಿದ್ದಾರೆ. ಪ್ರಜಾಪ್ರಭುತ್ವದ ಮುಖೇನ ಬಂದವರು, ಈ ಬಾರಿ ನಾವು ಅಧಿಕಾರಕ್ಕೆ ಬಂದರೆ ಸಂವಿಧಾನ ತೆಗೆಯುತ್ತೇವೆ ಎನ್ನುತ್ತಿದ್ದಾರೆ. ಈ ರೀತಿಯ ಪರಿಸ್ಥಿತಿ ಇದ್ದಾಗ ನಮ್ಮಂತಹ ಕಲಾವಿದರು ಸುಮ್ಮನಿರಲು ಸಾಧ್ಯವಿಲ್ಲ. ನಾನು ನಿಮ್ಮ ಮುಂದೆ ಮಾತನಾಡುತ್ತಿದ್ದೇನೆ ಎಂದರೆ, ಈ ಹಕ್ಕನ್ನು ಕೊಟ್ಟಿದ್ದು ಭಾರತ ಸಂವಿಧಾನ. ಸ್ವಾತಂತ್ರ್ಯ ಹೋರಾಟದಲ್ಲಿ ಕಿಲುಬೆ ಕಾಸಿನ ಕೊಡುಗೆ ನೀಡದವರು ಹೆಚ್ಚು ಮಾತನಾಡುತ್ತಿದ್ದಾರೆ ಎಂದು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

ಕರ್ನಾಟಕ ಕಾಂಗ್ರೆಸ್ ಸಮಿತಿ ರಾಜ್ಯ ಮುಂಚೂಣಿ ಘಟಕಗಳ ಉಸ್ತುವಾರಿ ಎಂ.ಸಿ.ವೇಣುಗೋಪಾಲ್, ಪರಿಶಿಷ್ಟ ವಿಭಾಗದ ರಾಜ್ಯಾಧ್ಯಕ್ಷ ಆರ್.ಧರ್ಮಸೇನ, ವಿಶ್ರಾಂತ ಪ್ರಾಧ್ಯಾಪಕ ರಾಮೇಗೌಡ, ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮ್, ಮುಖಂಡರಾದ ಸಿ.ನಾರಾಯಣಸ್ವಾಮಿ, ಎನ್.ಆರ್.ನಾಗೇಶ್, ಬಸವಣ್ಣ ರಂಗಸ್ವಾಮಿ, ಕೆ.ರಮೇಶ್, ಕೆ.ಎಸ್. ಸಿದ್ದರಾಜು ಮತ್ತಿತರರು ಉಪಸ್ಥಿತರಿದ್ದರು.


ಯುಪಿಯವರ ಸಕೆ-ಪುಕೆ ಬೇಕಾಗಿರಲಿಲ್ಲ...!

ಯುಪಿಯಿಂದ ಬಂದವರು(ಯುಪಿ ಸಿಎಂ ಯೋಗಿ ಆದಿತ್ಯನಾಥ್) 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬುದನ್ನು ಹೇಳದೇ ಇದ್ದಿದ್ದರೂ ಪರವಾಗಿರಲಿಲ್ಲ. ಏಕೆಂದರೆ ಕನ್ನಡ ಭಾಷೆಗೆ ಎರಡೂವರೆ ವರ್ಷಗಳ ಚರಿತ್ರೆ ಇದೆ ಎಂಬುದು ಅವರಿಗೆ ಗೊತ್ತಿರಲಿಲ್ಲ. ಅದಕ್ಕೆ ಸಕೆ-ಪುಕೆ ಎಂದು ಏನೇನೋ ಹೇಳುತ್ತಿದ್ದರು. ಅದು ಬೇಕಾಗಿರಲಿಲ್ಲ. ಇದನ್ನು ಕೇಳಲು 6 ಕೋಟಿ ಜನರೇನು ಕಿವಿ ಮೇಲೆ ಹೂ ಇಟ್ಟುಕೊಂಡಿಲ್ಲ...

– ಸಿ.ಬಸವಲಿಂಗಯ್ಯ, ರಂಗಕರ್ಮಿ













ಕೆಕೆಆರ್ ಮಣಿಸಿ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದ ಜಿಟಿ



ಕೋಲ್ಕತ್ತಾ, ಏ.29– ಬ್ಯಾಟಿಂಗ್ ಹಾಗೂ ಬೌಲಿಂಗ್‌ನಲ್ಲಿ ಅಧಿಕಾರಯುತ ಪ್ರದರ್ಶನ ತೋರಿದ ಗುಜರಾತ್ ಟೈಟನ್ಸ್, ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ 7 ವಿಕೆಟ್‌ಗಳ ಭರ್ಜರಿ ಗೆಲುವು ಸಾಧಿಸಿದೆ. ಈ ಗೆಲುವಿನ ಮೂಲಕ ಹಾರ್ದಿಕ್ ಪಾಂಡ್ಯ ನಾಯಕತ್ವದ ಗುಜರಾತ್ ಟೈಟನ್ಸ್ ಅಂಕ ಪಟ್ಟಿಯಲ್ಲಿ ಅಗ್ರಸ್ಥಾನ ಅಲಂಕರಿಸಿದರೇ, ಕೆಕೆಆರ್ 7ನೇ ಸ್ಥಾನದಲ್ಲಿದೆ.

ಇಲ್ಲಿನ ಈಡನ್ ಗಾರ್ಡನ್ಸ್ ಮೈದಾನದಲ್ಲಿ ಶನಿವಾರ ಮಧ್ಯಾಹ್ನ ನಡೆದ ಪಂದ್ಯದಲ್ಲಿ ಕೋಲ್ಕತ್ತಾ ನೀಡಿದ್ದ 180 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಗುಜರಾತ್ ಟೈಟನ್ಸ್ 10 ರನ್ ಗಳಿಸಿದ್ದ ವೃದ್ಧಿಮಾನ್ ಸಹಾ ಅವರ ವಿಕೆಟ್ ಅನ್ನು ಬಹುಬೇಗ ಕಳೆದುಕೊಂಡಿತ್ತು. ನಂತರ ಬಂದ ನಾಯಕ ಹಾರ್ದಿಕ್ ಪಾಂಡ್ಯ 1 ಸಿಕ್ಸರ್, 2 ಬೌಂಡರಿ ಒಳಗೊಂಡ 26 ರನ್ ಗಳಿಸಿ ನಿರ್ಗಮಿಸಿದರು. ಮತ್ತೊಂದೆಡೆ ಶುಭಮನ್ ಗಿಲ್ 49 ರನ್ ಗಳಿಸಿ ಔಟಾದರು. ಈ ವೇಳೆ 4ನೇ ವಿಕೆಟ್‌ಗೆ ಜೊತೆಯಾದ ವಿಜಯ್ ಶಂಕರ್ ಹಾಗೂ ಡೇವಿಡ್ ಮಿಲ್ಲರ್ ಜೋಡಿ 87 ರನ್‌ಗಳ ಸ್ಫೋಟಕ ಜೊತೆಯಾಟದ ಮೂಲಕ ಇನ್ನೂ 13 ಎಸೆತಗಳು ಬಾಕಿ ಇರುವಾಗಲೇ ತಂಡವನ್ನು ಗೆಲುವಿನ ದಡ ಸೇರಿಸಿತು. ಮಿಂಚಿನ ಬ್ಯಾಟಿಂಗ್ ನಡೆಸಿದ ವಿಜಯ ಶಂಕರ್ 24 ಎಸೆತಗಳಲ್ಲಿ 5 ಸಿಕ್ಸರ್, 2 ಬೌಂಡರಿ ಒಳಗೊಂಡ 51 ರನ್ ಸಿಡಿಸಿದರೆ, ಮಿಲ್ಲರ್ 18 ಎಸೆತಗಳಲ್ಲಿ ಅಜೇಯ 32 ರನ್ ಸಿಡಿಸಿದರು. ಅಂತಿಮವಾಗಿ ಗುಜರಾತ್ 3 ವಿಕೆಟ್ ನಷ್ಟಕ್ಕೆ ಗೆಲುವಿನ ನಗೆ ಬೀರಿತು. ಕೆಕೆಆರ್ ಪರ ಹರ್ಷಿತ್ ರಾಣಾ, ಆಂಡ್ರೆ ರಸೆಲ್ ಹಾಗೂ ಸುನೀಲ್ ನರೇನ್ ತಲಾ ಒಂದೊಂದು ವಿಕೆಟ್ ಕಬಳಿಸಿದರು.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಕೋಲ್ಕತ್ತಾ ನೈಟ್ ರೈಡರ್ಸ್ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 179 ರನ್ ಗಳಿಸಿತು. ಇನ್ನಿಂಗ್ಸ್ ಆರಂಭದಲ್ಲೇ ಎನ್.ಜಗದೀಶನ್ 19 ರನ್ ಗಳಿಸಿ ನಿರ್ಗಮಿಸಿದರು. ಜೇಸನ್ ರಾಯ್ ಅನುಪಸ್ಥಿತಿಯಲ್ಲಿ ಇನಿಂಗ್ಸ್ ಆರಂಭಿಸಿದ ರೆಹಮಾನುಲ್ಲಾ ಗುರ್ಬಾಜ್ ಸ್ಫೋಟಕ ಬ್ಯಾಟಿಂಗ್ ನಡೆಸಿದರು. ಒಂದು ತುದಿಯಲ್ಲಿ ನಿಯಮಿತವಾಗಿ ವಿಕೆಟ್‌ಗಳು ಉರುಳುತ್ತಿದ್ದರೂ ಅಬ್ಬರಿಸಿದ ಗುರ್ಬಾಜ್ ಕೇವಲ 39 ಎಸೆತಗಳಲ್ಲಿ 7 ಸಿಕ್ಸರ್ ಹಾಗೂ 5 ಬೌಂಡರಿಗಳೊಂದಿಗೆ 81 ರನ್ ಸಿಡಿಸಿ ಔಟಾದರು.

ಡೆತ್ ಓವರ್‌ಗಳಲ್ಲಿ ಸ್ಫೋಟಕ ಬ್ಯಾಟಿಂಗ್ ಮಾಡಿದ ಆಂಡ್ರೆ ರಸೆಲ್ ಕೇವಲ 19 ಎಸೆತಗಳಲ್ಲಿ 34 ರನ್ ಚಚ್ಚಿದ್ದರು. ಉಳಿದಂತೆ ವೆಂಕಟೇಶ್ ಅಯ್ಯರ್ 11, ರಿಂಕು ಸಿಂಗ್ 19 ರನ್ ಗಳಿಸಿದರು. ಕೆಕೆಆರ್ ಪರ ಮೊಹಮ್ಮದ್ ಶಮಿ 3, ಜೊಶುವಾ ಲಿಟ್ಲ್ ಹಾಗೂ ನೂರ್ ಅಹ್ಮದ್ ತಲಾ ಎರಡೆರಡು ವಿಕೆಟ್ ಉರುಳಿಸಿದರು. ಜೊಶುವಾ ಲಿಟ್ಲ್ ಪಂದ್ಯ ಶ್ರೇಷ್ಠ ಪ್ರಶಸ್ತಿ ಪಡೆದರು.




ಡೆಲ್ಲಿ ವಿರುದ್ಧ ಹೈದರಾಬಾದ್‌ಗೆ ರೋಚಕ ಜಯ

ದೆಹಲಿ, ಏ.29– ಅಭಿಷೇಕ್ ಶರ್ಮಾ ಹಾಗೂ ಹೆನ್ರಿಕ್ ಕ್ಲಾಸೆನ್ ಅವರ ಅರ್ಧಶತಕಗಳ ನೆರವಿನಿಂದ ಸನ್‌ರೈಸರ್ಸ್ ಹೈದರಾಬಾದ್ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ 9 ರನ್‌ಗಳ ರೋಚಕ ಜಯ ಗಳಿಸಿದೆ.

ಇಲ್ಲಿನ ಅರುಣ್ ಜೇಟ್ಲಿ ಮೈದಾನದಲ್ಲಿ ಶನಿವಾರ ರಾತ್ರಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಸನ್‌ರೈಸರ್ಸ್ ಹೈದರಾಬಾದ್ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 197ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ಈ ಗುರಿ ಬೆನ್ನತ್ತಿದ ಡೆಲ್ಲಿ ಕ್ಯಾಪಿಟಲ್ಸ್ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 188ರನ್ ಗಳಿಸಲಷ್ಟೇ ಶಕ್ತವಾಗಿ ಸೋಲು ಅನುಭವಿಸಿತು. ಇದರೊಂದಿಗೆ ಬ್ಯಾಟಿಂಗ್ ಹಾಗೂ ಬೌಲಿಂಗ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ ಮಿಚೆಲ್ ಮಾರ್ಷ್ ಹೋರಾಟ ವ್ಯರ್ಥವಾಯಿತು.

ಹೈದರಾಬಾದ್ ಪರ ಇನ್ನಿಂಗ್ಸ್ ಆರಂಭಿಸಿದ ಮಯಾಂಕ್ ಅಗರ್ವಾಲ್ 5 ರನ್ ಗಳಿಸಿ ಬಹುಬೇಗ ನಿರ್ಗಮಿಸಿದರು. ಇವರ ಹಿಂದೆಯೇ ರಾಹುಲ್ ತ್ರಿಪಾಠಿ 10, ಏಡನ್ ಮಾರ್ಕ್ರಮ್ 8 ಹಾಗೂ ಹ್ಯಾರಿ ಬ್ರೂಕ್ ಶೂನ್ಯಕ್ಕೆ ಔಟಾಗುವ ಮೂಲಕ ನಿರ್ಗಮಿಸಿದರು. ಈ ವೇಳೆ ತಂಡದ ಮೊತ್ತ 4 ವಿಕೆಟ್ ನಷ್ಟಕ್ಕೆ 83ರನ್ ಆಗಿತ್ತು. ಒಂದೆಡೆ ವಿಕೆಟ್ ಬೀಳುತ್ತಿದ್ದರೂ ಮತ್ತೊಂದೆಡೆ ಬಿರುಸಿನ ಆಟವಾಡಿದ ಅಭಿಷೇಕ್ ಶರ್ಮಾ 36 ಎಸೆತಗಳಲ್ಲಿ 12 ಬೌಂಡರಿ, 1 ಸಿಕ್ಸರ್ ಒಳಗೊಂಡ 67ರನ್ ಗಳಿಸಿ ನಿರ್ಗಮಿಸಿದರು. ನಂತರ ಬಂದ ಹೆನ್ರಿಕ್ ಕ್ಲಾಸೆನ್ ಅಬ್ಬರದ ಬ್ಯಾಟಿಂಗ್ ನಡೆಸುವ ಮೂಲಕ ತಂಡದ ಮೊತ್ತ ಏರಿಸಿದರು. 27 ಎಸೆತಗಳಲ್ಲಿ 4 ಸಿಕ್ಸರ್, 2 ಬೌಂಡರಿ ಒಳಗೊಂಡ 53 ರನ್ ಗಳಿಸಿ ಅಜೇಯರಾಗಿ ಉಳಿದರೇ, ಅಬ್ದುಲ್ ಸಮದ್ 28, ಅಕೀಲ್ ಹೋಸೇನ್ 16ರನ್ ಗಳಿಸಿದರು. ಡೆಲ್ಲಿ ಪರ ಮಿಚೆಲ್ ಮಾರ್ಷ್ 4 ವಿಕೆಟ್ ಕಿತ್ತು ಮಿಂಚಿದರು. ಇಶಾಂತ್ ಶರ್ಮಾ, ಅಕ್ಷರ್ ಪಟೇಲ್ ತಲಾ ಒಂದೊಂದು ವಿಕೆಟ್ ಪಡೆದರು.



ಹೈದರಾಬಾದ್ ನೀಡಿದ ಗೆಲುವಿನ ಗುರಿ ಬೆನ್ನತ್ತಿದ ಡೆಲ್ಲಿ ಆರಂಭ ಉತ್ತಮವಾಗಿರಲಿಲ್ಲ. ಖಾತೆ ತೆರೆಯುವ ಮುನ್ನವೇ ನಾಯಕ ಡೇವಿಡ್ ವಾರ್ನರ್ ವಿಕೆಟ್ ಒಪ್ಪಿಸಿದರು. ಈ ವೇಳೆ 2ನೇ ವಿಕೆಟ್‌ಗೆ ಜೊತೆಯಾದ ಫಿಲಿಪ್ ಸಾಲ್ಟ್ ಹಾಗೂ ಮಿಚೆಲ್ ಮಾರ್ಷ್ 112 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಎಸ್‌ಆರ್‌ಹೆಚ್ ಬೌಲರ್‌ಗಳನ್ನು ದಂಡಿಸಿದ ಸಾಲ್ಟ್ ಬಿರುಸಿನ 59ರನ್ ಗಳಿಸಿದರೆ, ಮಿಚೆಲ್ ಮಾರ್ಷ್ 63ರನ್ ಗಳಿಸಿ ನಿರ್ಗಮಿಸಿದರು. ನಂತರ ಬಂದ ಅಕ್ಷರ್ ಪಟೇಲ್ 29ರನ್ ಗಳಿಸಿ ಅಲ್ಪ ಪ್ರತಿರೋಧ ಒಡ್ಡಿದರಾದರೂ ಉಳಿದವರಿಂದ ನಿರೀಕ್ಷಿತ ಪ್ರದರ್ಶನ ಮೂಡಿ ಬರಲಿಲ್ಲ. ಅಂತಿಮವಾಗಿ ಡೆಲ್ಲಿ ಹೈದರಾಬಾದ್ ವಿರುದ್ಧ ಸೋಲು ಅನುಭವಿಸಿತು.

ಹೈದರಾಬಾದ್ ಪರ ಭುವನೇಶ್ವರ ಕುಮಾರ್, ಅಕೀಲ್ ಹೋಸೇನ್, ಟಿ.ನಟರಾಜನ್, ಅಭಿಷೇಕ್ ಶರ್ಮಾ ತಲಾ ಒಂದೊಂದು ವಿಕೆಟ್, ಮಯಾಂಕ್ ಮಾರ್ಕಂಡೆ 2 ವಿಕೆಟ್ ಪಡೆದರು. ಮಿಚೆಲ್ ಮಾರ್ಷ್ ಪಂದ್ಯ ಪುರುಷ ಪ್ರಶಸ್ತಿ ಪಡೆದರು.

ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಗುಜರಾತ್	8	6	2	0	12
ರಾಜಸ್ಥಾನ್	8	5	3	0	10
ಲಕ್ನೋ	8	5	3	0	10
ಸಿಎಸ್‌ಕೆ	8	5	3	0	10
ಆರ್‌ಸಿಬಿ	8	4	4	0	8
ಪಂಜಾಬ್	8	4	4	0	8
ಕೋಲ್ಕತ್ತಾ	9	3	6	0	6
ಎಸ್‌ಆರ್‌ಹೆಚ್	8	3	5	0	6
ಮುಂಬೈ	7	3	4	0	6
ಡೆಲ್ಲಿ	8	2	6	0	4



[ಏಪ್ರಿಲ್ 30]

ಚೆನ್ನೈ V/S ಪಂಜಾಬ್
ಸ್ಥಳ: ಎಂ.ಎ. ಚಿದಂಬರಂ ಕ್ರೀಡಾಂಗಣ, ಚೆನ್ನೈ
ಸಮಯ: ಮಧ್ಯಾಹ್ನ 3.30

ಮುಂಬೈ V/S ರಾಜಸ್ಥಾನ್
ಸ್ಥಳ: ವಾಂಖೆಡೆ ಕ್ರೀಡಾಂಗಣ ಮುಂಬೈ
ಸಮಯ: ರಾತ್ರಿ 7.30



ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ.ಕವೀಶ್‌ಗೌಡ, ಸಂಘದ ಉಸ್ತುವಾರಿ ಗೋಪಿನಾಥಂ, ಮಾವಿನಹಳ್ಳಿ ಗ್ರಾಮಕ್ಕೆ ಭೇಟಿ ಕೊಟ್ಟಾಗ ಯುವ ಮೋರ್ಚಾ ಅಧ್ಯಕ್ಷ ದಾರಿಪುರ ಡಿ.ಚಂದ್ರಶೇಖರ್ ನೇತೃತ್ವದಲ್ಲಿ, ನಿಕಟ ಪೂರ್ವ ಯುವ ಮೋರ್ಚಾ ಅಧ್ಯಕ್ಷ ಅರಸನಕೆರೆ ಆನಂದ್, ನಿಕಟಪೂರ್ವ ಮಹಾಶಕ್ತಿ ಕೇಂದ್ರ ಅಧ್ಯಕ್ಷಮಾವಿನಹಳ್ಳಿ ಪ್ರಸನ್ನ, ಮಾರ್ಬಳ್ಳಿ ಕುಮಾರ್ ಸಮ್ಮುಖದಲ್ಲಿ ಗ್ರಾಮದ ಯುವಕರಾದ ಶಿವು ಆರ್‌ಟಿಓ, ನಾಗೇಗೌಡ, ಯೋಗೇಶ್ ಎಂ ಎಸ್, ಮಹೇಶ್, ಶಿವಕುಮಾರ್ ಎಸ್, ನಂಜುಂಡಸ್ವಾಮಿ, ಶ್ರೀಕಂಠ, ಡಿ.ಮನು, ಎ.ಶಿವಕುಮಾರ್, ನಾಗೇಶ್, ಕುಮಾರ್, ಶಿವಲಿಂಗೇಗೌಡ, ಚೆನ್ನಪ್ಪ, ನಿಂಗೇಗೌಡ, ಜಗದೀಶ್, ದೀಪಕ್, ಡ್ರಿಪ್ ಕುಮಾರ್, ಬಸವರಾಜು ಅವರುಗಳು ಬಿಜೆಪಿಗೆ ಸೇರ್ಪಡೆಯಾದರು.

ಸಾಧಕರಾದ ಡಾ.ವಸುಂಧರ ದೊರೆಸ್ವಾಮಿ, ಹೆಚ್.ಆರ್.ಲೀಲಾವತಿ ಅವರಿಗೆ ಸನ್ಮಾನ

ಮೈಸೂರು, ಏ.29(ಎಸ್‌ಪಿಎನ್)– ಅಂತರರಾಷ್ಟ್ರೀಯ ನೃತ್ಯಪಟು, ನಾಟ್ಯ ರಾಣಿ ಶಾಂತಲೆ ಪ್ರಶಸ್ತಿ ಪುರಸ್ಕೃತರಾದ ಡಾ.ವಸುಂಧರ ದೊರೆಸ್ವಾಮಿ ಹಾಗೂ ಸಂಗೀತ ವಿದುಷಿ ಹೆಚ್.ಆರ್.ಲೀಲಾವತಿ ಅವರನ್ನು ವಿವಿಧ ಗಣ್ಯರ ಉಪಸ್ಥಿತಿಯಲ್ಲಿ ಶನಿವಾರ ಸನ್ಮಾನಿಸಲಾಯಿತು.

ಮೈಸೂರು ರಾಮಕೃಷ್ಣನಗರದ ರಮಾಗೋವಿಂದ ಕಲಾಮಂದಿರದಲ್ಲಿ ಕಲಾಂಡಿಕಾ ಅಕಾಡೆಮಿ ಆಫ್ ಆರ್ಟ್ಸ್ ಹಾಗೂ ಕೇನ್ಸ್ ಟೆಕ್ನಾಲಜಿ ಇಂಡಿಯಾ ಲಿಮಿಟೆಡ್ ಸಹಯೋಗದೊಂದಿಗೆ ಆಯೋಜಿಸಿದ್ದ ಸಮಾರಂಭದಲ್ಲಿ ಸಿಐಐ ಮೈಸೂರು ಘಟಕದ ಅಧ್ಯಕ್ಷ ಸ್ಯಾಮ್ ಚೆರಿಯನ್ ನೇತೃತ್ವದಲ್ಲಿ ಸನ್ಮಾನಿಸಲಾಯಿತು.

ನಂತರ ಮಾತನಾಡಿದ ಅವರು, ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಕಲೆಗಳಿಗೆ ಹೆಚ್ಚು ಪ್ರೋತ್ಸಾಹ ದೊರಕುತ್ತಿದೆ. ಇದರಿಂದ ಮೈಸೂರಿನ ಕಲಾಕ್ಷೇತ್ರದ ಕೀರ್ತಿ ವಿಶ್ವದಲ್ಲಿ ಪರಿಚಿತವಾಗಿದೆ. ಹಿರಿಯ ನೃತ್ಯಪಟು ಡಾ.ವಸುಂಧರ ದೊರೆಸ್ವಾಮಿ ಅವರು ಹಲವು ವರ್ಷಗಳಿಂದ ದೇಶ–ವಿದೇಶಗಳಲ್ಲಿ ನೃತ್ಯ ಪ್ರದರ್ಶನ ನೀಡುತ್ತಾ ಭಾರತೀಯ ಕಲೆಗಳಿಗೆ ವಿಶ್ವಾದ್ಯಂತ ಮನ್ನಣೆ ದೊರಕಿಸಲು ಡಾ.ವಸುಂದರ ದೊರೆಸ್ವಾಮಿ ಹಾಗೂ ಸುಗಮ ಸಂಗೀತ ಕ್ಷೇತ್ರದಲ್ಲಿ ಹೆಚ್.ಆರ್. ಲೀಲಾವತಿ ಪಾತ್ರಮಹತ್ವದ್ದು ಎಂದು ತಿಳಿಸಿದರು.



ಮೈಸೂರು ಕಲೆ, ಸಾಹಿತ್ಯಕ್ಕೆ ಹೆಸರುವಾಸಿಯಾದ ನಗರ. ಇಲ್ಲಿನ ಕಲೆ, ಸಾಹಿತ್ಯಕ್ಕೆ ನೂರಾರು ವರ್ಷಗಳ ಇತಿಹಾಸವಿದೆ. ಇದನ್ನು ರಾಜಮಹಾರಾಜರ ಕಾಲದಿಂದಲೂ ಪೋಷಿಸಿ, ಬೆಳೆಸಿದ್ದಾರೆ. ಪ್ರಜಾಪ್ರಭುತ್ವದ ಆಡಳಿತ ನಂತರ ಜನರ ಪ್ರೋತ್ಸಾಹದಿಂದ ಕಲೆ, ಸಂಗೀತ, ಸಾಹಿತ್ಯ ವಿಶ್ವಮಟ್ಟದಲ್ಲಿ ಮನ್ನಣೆ ಪಡೆದು ಸಾಂಸ್ಕೃತಿಕ ನಗರಿ ಮೈಸೂರು ಬಿರುದಿಗೂ ಪಾತ್ರವಾಗಿದೆ ಎಂದರು.

ಈ ವೇಳೆ ಆಯುರ್ವೇದ ವೈದ್ಯ ಡಾ.ಅನಿಲ್ ಕುಮಾರ್ ದಿಕ್ಷಿತ್, ಉದ್ಯಮಿ ಬಿ.ಆರ್.ಪೈ ಉಪಸ್ಥಿತರಿದ್ದರು. ತದನಂತರ ಹಿರಿಯ ಕಲಾವಿದೆ ಡಾ.ವಸುಂಧರ ದೊರೆಸ್ವಾಮಿ ಅವರ ನೃತ್ಯ ಪ್ರದರ್ಶನ ಪ್ರೇಕ್ಷಕರ ಮನಗೆದ್ದಿತು.

ನೇಮಕ



ಮೈಸೂರು, ಏ. 29– ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿಯ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ತನ್ವೀರ್ ಸೇಠ್ ಅವರ ಚುನಾವಣಾ ವೀಕ್ಷಕರನ್ನಾಗಿ ಎಂ. ರಸೂಲ್ ಅವರನ್ನು ನೇಮಕ ಮಾಡಲಾಗಿದೆ.

ಶೇ.5ರ ರಿಯಾಯಿತಿಯೊಂದಿಗೆ ಆಸ್ತಿ ತೆರಿಗೆ ಪಾವತಿಸಲು ಇಂದು ಕಡೇ ದಿನ

ಭಾನುವಾರ ಪಾಲಿಕೆ ವಲಯ ಕಚೇರಿ ಕೌಂಟರ್ ಓಪನ್

ಮೈಸೂರು, ಏ. 29(ಆರ್‌ಕೆ)– ಶೇ. 5ರ ರಿಯಾಯಿತಿಯೊಂದಿಗೆ ಆಸ್ತಿ ತೆರಿಗೆ ಪಾವತಿಸಲು ನಾಳೆ (ಭಾನುವಾರ) ಕಡೇ ದಿನವಾಗಿದೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ಬರುತ್ತಿರುವುದರಿಂದ ನಾಳೆ (ಏ.30) ಭಾನುವಾರ ಮೈಸೂರು ಮಹಾ ನಗರ ಪಾಲಿಕೆಯ ಎಲ್ಲಾ 9 ವಲಯ ಕಚೇರಿಗಳಲ್ಲಿ ನಗದು ಕೌಂಟರ್‌ಗಳನ್ನು ತೆರೆಯಲಾಗಿದ್ದು, ಆಸ್ತಿ ತೆರಿಗೆಯನ್ನು ಪಾವತಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಪಾಲಿಕೆ ಆಯುಕ್ತ ಜಿ. ಲಕ್ಷ್ಮೀ ಕಾಂತ ರೆಡ್ಡಿ ತಿಳಿಸಿದ್ದಾರೆ.

ಶೇ. 5ರ ರಿಯಾಯಿತಿ ಅವಕಾಶ ಬಳಸಿ ಕೊಂಡು ಆಸ್ತಿ ತೆರಿಗೆ ಪಾವತಿಸಲು ರಜಾ ದಿನವಾದರೂ ಜನರು ಉತ್ಸುಕತೆಯಿಂದ ಪಾಲಿಕೆ ವಲಯ ಕಚೇರಿಗಳಿಗೆ ತೆರಳುತ್ತಿದ್ದಾರೆ. ಅದಕ್ಕಾಗಿ ನಾವು ಆಸನ ವ್ಯವಸ್ಥೆ, ಪೆಂಡಾಲ್, ಕುಡಿಯುವ ನೀರು, ಸಹಾಯ ಮಾಡಲು ಪಾಲಿಕೆ ಸಿಬ್ಬಂದಿ ನಿಯೋಜಿಸಿ ಸೌಲಭ್ಯ ಕಲ್ಪಿಸಿದ್ದೇವೆ ಎಂದು ಅವರು ತಿಳಿಸಿದರು. ಪ್ರತೀ ವರ್ಷ ಏಪ್ರಿಲ್ ಮಾಹೆ ಯಲ್ಲಿ ಆಸ್ತಿ ತೆರಿಗೆ ಪಾವತಿಸಲು ಶೇ. 5ರಷ್ಟು ರಿಯಾಯಿತಿ ನೀಡಲಿದ್ದು, ಹೆಚ್ಚು ಮಂದಿ ಅದರ ಪ್ರಯೋಜನ ಪಡೆಯಲಿ ದ್ದಾರೆ ಆದರೆ ಈ ಬಾರಿ ಪಾಲಿಕೆ ನಿರೀಕ್ಷೆ ಮೀರಿ ಜನರಿಂದ ಉತ್ತಮ ಪ್ರತಿಕ್ರಿಯೆ ಬರುತ್ತಿದ್ದು, ಅಧಿಕ ಮೊತ್ತದ ಹಣ ತೆರಿಗೆ ರೂಪದಲ್ಲಿ ಸಂದಾಯ ವಾದಂತಾಗಿದೆ. ನಾಳೆ (ಏ. 30) ಸಂಜೆ ಒಟ್ಟಾರೆ ಎಷ್ಟು ಹಣ ಪಾವತಿಯಾಗಿದೆ ಎಂಬುದನ್ನು ತಿಳಿಸಲಾಗುವುದು ಎಂದು ತಿಳಿಸಿದರು. ಆನ್‌ಲೈನ್‌ನಲ್ಲೂ ತೆರಿಗೆ ಪಾವತಿಸುವ ಅವಕಾಶವಿದ್ದು, ಆಸ್ತಿ ಮಾಲೀಕರು ತಾವಿರುವಲ್ಲೇ ಹಣ ಪಾವತಿಸುತ್ತಿದ್ದಾರೆ. ಉಳಿದವರು ಪಾಲಿಕೆ ವಲಯ ಕಚೇರಿ ಕ್ಯಾಷ್ ಕೌಂಟರ್‌ಗಳಲ್ಲಿ ಸಾಲಾಗಿ ನಿಂತು ಹಣ ಪಾವತಿಸುತ್ತಿದ್ದಾರೆ ಎಂದು ತಿಳಿಸಿದರು.



ನಾನು ಗಟ್ಟಿಮುಟ್ಟಾಗಿದ್ದೇನೆ; ಆರೋಗ್ಯದ ಬಗ್ಗೆ ಗಾಬರಿ ಪಡುವಂತಹದ್ದಿಲ್ಲ

■ ಮಾಜಿ ಸಿಎಂ ಸಿದ್ದರಾಮಯ್ಯ ಸ್ಪಷ್ಟನೆ ■ ಆಯಾಸದಿಂದ ಕಾರು ಹತ್ತುವಾಗ ಕಾಲು ಜಾರಿದ ವಿಷಯಕ್ಕೆ ಸ್ಪಷ್ಟನೆ

ಬೆಂಗಳೂರು, ಏ.29(ಕೆಎಂಶಿ)–ಆರೋಗ್ಯದ ಬಗ್ಗೆ ಗಾಬರಿಪಡುವಂತಹದ್ದಿಲ್ಲ. ನಾನು ಗಟ್ಟಿಮುಟ್ಟಾಗಿದ್ದೇನೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಟ್ವೀಟ್ ಮೂಲಕ ಸ್ಪಷ್ಟಪಡಿಸಿದ್ದಾರೆ. ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಕಾರಿನಿಂದ ಇಳಿಯುವಾಗ ಕುಸಿದರು ಎಂಬ ವರದಿ ಪ್ರಕಟಗೊಂಡ ಬೆನ್ನಲ್ಲೇ ಸರಣಿ ಟ್ವೀಟ್ ಮಾಡಿರುವ ಅವರು ನನ್ನ ನಿತ್ಯ ಓಡಾಡುವ ಕಾರು ಬದಲಾದ ಕಾರಣ ಕಾಲು ಜಾರಿ ಹಿಂದಕ್ಕೆ ಒರಗಿದೆ ಅಷ್ಟೆ. ಈಗ ಆರಾಮವಾಗಿದ್ದೇನೆ. ಇದನ್ನು ಅತೀ ರಂಜಿತ ರೀತಿಯಲ್ಲಿ ವರದಿ ಮಾಡಿ, ಜನ ಗಾಬರಿಪಡುವಂತೆ ಮಾಡಬೇಡಿ ಎಂದು ಮಾಧ್ಯಮದವರಲ್ಲಿ ವಿನಂತಿಸಿದ್ದಾರೆ. ಕಳೆದ ಕೆಲವು ದಿನಗಳಿಂದ ನಿರಂತರವಾಗಿ ಚುನಾವಣಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿರುವುದರಿಂದ ಸಿದ್ದರಾಮಯ್ಯನವರು ಆಯಾಸದಿಂದ ಹೀಗೆ ಒರಗಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ. ಗ್ಲುಕೋಸ್ ನೀರು ಕುಡಿದು ಸ್ವಲ್ಪ ವಿರಾಮದ ನಂತರ ಸುಧಾರಿಸಿಕೊಂಡು ಮತ್ತೆ ಎಂದಿನಂತೆ ಚುನಾವಣಾ ಪ್ರಚಾರದಲ್ಲಿ ತೊಡಗಿಸಿಕೊಂಡರು ಎಂದು ಇದೇ ಮೂಲಗಳು ಹೇಳಿವೆ.



ಚಾಮುಂಡೇಶ್ವರಿ ಕ್ಷೇತ್ರ ಸಮಗ್ರ ಅಭಿವೃದ್ಧಿ ನನ್ನ ಉದ್ದೇಶ: ಕವೀಶ್‌ಗೌಡ



ಮೈಸೂರು,ಏ.29(ಪಿಎಂ)– ಚಾಮುಂಡೇಶ್ವರಿ ಕ್ಷೇತ್ರದ ಸಮಗ್ರ–ಸಮರ್ಪಕ ಅಭಿವೃದ್ಧಿ ನನ್ನ ಉದ್ದೇಶ. ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರಗಳ ಜನಪರ ಯೋಜನೆಗಳನ್ನು ಕ್ಷೇತ್ರದ ಜನತೆ ಮುಂದಿಟ್ಟಿದ್ದೇನೆ. ಹೀಗಾಗಿ ಕ್ಷೇತ್ರದ ಜನ ಬೆಂಬಲ ನೀಡುತ್ತಾರೆ ಎಂದು ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ.ಕವೀಶ್‌ಗೌಡ ವಿಶ್ವಾಸ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ವಿಧಾನಸಭಾ ಚುನಾವಣೆ ಪ್ರಯುಕ್ತ ಸಂಘದ ಭವನದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಮಾಧ್ಯಮ ಸಂವಾದದಲ್ಲಿ ಹಲವು ವಿಷಯ ತಿಳಿಸಿದರು.

ಕ್ಷೇತ್ರದಲ್ಲಿ ಸಾಕಷ್ಟು ಗುಣಮಟ್ಟದ ಮೂಲ ಸೌಕರ್ಯಗಳು ಇಲ್ಲ. ಶುದ್ಧ ಕುಡಿಯುವ ನೀರು ಪೂರೈಕೆ ಹಾಗೂ ಒಳಚರಂಡಿ ವ್ಯವಸ್ಥೆಯಲ್ಲಿ ಸಾಕಷ್ಟು ಕೆಲಸಗಳು ಬಾಕಿ ಉಳಿದಿವೆ. ಕ್ಷೇತ್ರದಲ್ಲಿ ಇನ್ನು ಸಾಕಷ್ಟು ಹಳ್ಳಿಗಳಿಗೆ ಕೆಆರ್‌ಎಸ್–ಕಬಿನಿ ನೀರು ಕೊಡಲಾಗುತ್ತಿಲ್ಲ. ಕೇವಲ ಬೋರ್‌ವೆಲ್ ನೀರನ್ನೇ ಅವಲಂಬಿಸಲಾಗಿದೆ ಎಂದು ತಿಳಿಸಿದರು.

ಕ್ಷೇತ್ರದಲ್ಲಿ ಸರ್ಕಾರಿ ಶಾಲೆಗಳನ್ನು ಬಿಟ್ಟು ಖಾಸಗಿ ಶಾಲೆಗೆ ಹೋಗುವುದು ಹೆಚ್ಚಿದೆ. ಸರ್ಕಾರಿ ಶಾಲೆಗಳಿಗೆ ಸಮರ್ಪಕ ಮೂಲಸೌಲಭ್ಯ ಕಲ್ಪಿಸಿ ಉನ್ನತೀಕರಿಸಬೇಕಿದೆ. ಆರೋಗ್ಯ ಕೇಂದ್ರಗಳ ಸಂಖ್ಯೆ ಹೆಚ್ಚಿಸಬೇಕಿದೆ. ಕ್ರೀಡಾ ಚಟುವಟಿಕೆಗೆ ಉತ್ತೇಜನ ನೀಡಬೇಕಿದೆ. ಸಮಗ್ರ–ಸಮರ್ಪಕ ಅಭಿವೃದ್ಧಿ ನನ್ನ ಉದ್ದೇಶವಾಗಿದೆ. ಮೈಸೂರು ನಗರದಿಂದ ಕೇವಲ 15 ಕಿ.ಮೀ. ದೂರದಲ್ಲಿರುವ ಕ್ಷೇತ್ರದ ಹಳ್ಳಿಗಳಲ್ಲಿ ಸಮರ್ಪಕ ಮೂಲಭೂತ ಸೌಕರ್ಯಗಳು ಕೊರತೆ ಇದೆ. ಅಭಿವೃದ್ಧಿ ವಿಚಾರದಲ್ಲಿ ಸಾಕಷ್ಟು ಕೆಲಸ ಬಾಕಿ ಉಳಿದಿದೆ ಎಂದು ಹೇಳಿದರು.

ಹಾಲಿ ಶಾಸಕರು ಕ್ಷೇತ್ರ ಅಭಿವೃದ್ಧಿಪಡಿಸುವಲ್ಲಿ ವಿಫಲವಾಗಿದ್ದಾರೆಯೇ? ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ವಿಫಲ ಎಂದು ಹೇಳಲ್ಲ. ಆದರೆ ಗುಣಮಟ್ಟ, ಉನ್ನತೀ ಕರಣದ ಕೆಲಸಗಳು ಬಾಕಿ ಉಳಿದಿವೆ. ಯಾವುದೇ ಕೆಲಸವಾದರೂ ಕಾಲಕ್ಕೆ ತಕ್ಕಂತೆ ಉನ್ನತೀಕರಣ ಗೊಳ್ಳಬೇಕು. ಮುಂದಾಲೋಚನೆ ಮತ್ತು ವೈಜ್ಞಾನಿಕ ನೆಲೆಗಟ್ಟಿನಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡುವುದು ಮುಖ್ಯ ಎಂದು ತಿಳಿಸಿದರು.

ಕ್ಷೇತ್ರದ ಕೈಗಾರಿಕಾಭಿವೃದ್ಧಿ ಬಗ್ಗೆ ಪ್ರತಿಕ್ರಿಯಿಸಿದ ಅವರು, ಕ್ಷೇತ್ರದಲ್ಲಿ ಸಾಕಷ್ಟು ಕೈಗಾರಿಕೆಗಳಿವೆ. ಗುಡಿ ಕೈಗಾರಿಕೆಗಳೂ ಇವೆ. ಸಮರ್ಪಕ ವಿದ್ಯುತ್ ಪೂರೈಕೆ, ಅಗತ್ಯಕ್ಕೆ ತಕ್ಕಂತೆ ಮಾನವ ಸಂಪನ್ಮೂಲ ಸೇರಿದಂತೆ ಅವುಗಳಿಗೆ ಸಮರ್ಪಕ ಸೌಲಭ್ಯಗಳನ್ನು ಕಲ್ಪಿಸಬೇಕಿದೆ. ಜೊತೆಗೆ ಕ್ಷೇತ್ರದಲ್ಲಿ ತರಕಾರಿ ಬೆಳೆಯುವ ರೈತರು ಹೆಚ್ಚಿನ ಸಂಖ್ಯೆಯಲ್ಲಿದ್ದು, ಅವರಿಗೆ ಸೂಕ್ತ ಮಾರುಕಟ್ಟೆ ಹಾಗೂ ಶೇಖರಣಾ ವ್ಯವಸ್ಥೆ ಕಲ್ಪಿಸಬೇಕಿದೆ. ಈ ನಿಟ್ಟಿನಲ್ಲಿ ಫುಡ್ ಪ್ರೊಸೆಸಿಂಗ್ ಯೂನಿಟ್ ಮತ್ತು ಸ್ಟೋರೇಜ್ ಯೂನಿಟ್ ವ್ಯವಸ್ಥೆಗಳನ್ನು ಒದಗಿಸಿ ಕೊಟ್ಟರೆ ಅವರಿಗೆ ಅನುಕೂಲವಾಗಲಿದೆ ಎಂದು ಹೇಳಿದರು.

ಸಂಸದ ಪ್ರತಾಪ್ ಸಿಂಹ ಪ್ರಚಾರಕ್ಕೆ ಬರುತ್ತಾರೆ

ಸಂಸದ ಪ್ರತಾಪ್ ಸಿಂಹ ತಮ್ಮ ಕ್ಷೇತ್ರದಲ್ಲಿ ಪ್ರಚಾರಕ್ಕೆ ಬರುತ್ತಿಲ್ಲ. ಕೇವಲ ವರುಣ ಕ್ಷೇತ್ರಕ್ಕೆ ಸೀಮಿತವಾಗಿದ್ದಾರೆ ಎಂಬ ಆರೋಪವಿದೆ ಎಂಬ ಬಗ್ಗೆ ಪ್ರತಿಕ್ರಿಯಿಸಿ, ನಮ್ಮ ಪಕ್ಷ ಶಿಸ್ತು ಮತ್ತು ಕ್ರಮಬದ್ಧವಾಗಿ ಪ್ರಚಾರ ನಡೆಸಲು ಸಮಿತಿ ರಚಿಸಿದೆ. ಸಮಿತಿ ಸಿದ್ಧಪಡಿಸುವ ಪಟ್ಟಿಯಂತೆ ಪ್ರಚಾರದಲ್ಲಿ ಪಕ್ಷದ ನಾಯಕರು ಪಾಲ್ಗೊಳ್ಳಬೇಕಾಗುತ್ತದೆ. ಕ್ಷೇತ್ರದಲ್ಲಿ ಅವರು ಕಾಣಿಸದೇ ಇರಬಹುದು. ಆದರೆ ಕ್ಷೇತ್ರದಲ್ಲಿ ಪಕ್ಷ ಗೆಲ್ಲಿಸುವ ನಿಟ್ಟಿನಲ್ಲಿ ತಮ್ಮದೇ ಆದ ರೀತಿಯಲ್ಲಿ ಅವರು ಕೆಲಸ ಮಾಡುತ್ತಿದ್ದಾರೆ. ಇನ್ನು 12 ದಿನ ಬಾಕಿ ಉಳಿದಿದ್ದು, ಪ್ರಚಾರಕ್ಕೆ ಬರಲಿದ್ದಾರೆ ಎಂದು ಸ್ಪಷ್ಟಪಡಿಸಿದರು.

ಎದುರಾಳಿಗಳು ಘಟಾನುಘಟಿಗಳೇ ಇರಬಹುದು. ಆ ಬಗ್ಗೆ ಚಿಂತೆ ಇಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಜನಪರ ಯೋಜನೆಗಳನ್ನು ಕ್ಷೇತ್ರದ ಜನತೆ ಮುಂದಿಟ್ಟು ಮತ ಯಾಚಿಸುತ್ತಿದ್ದೇನೆ. ಕಿಸಾನ್ ಸಮ್ಮಾನ್, ಜಗಜೀವನ ಮಿಷನ್, ಉಜ್ವಲ್ ಯೋಜನೆ ಮೊದಲಾದ ಯೋಜನೆಗಳು ಜನತೆಗೆ ಸಾಕಷ್ಟು ಅನುಕೂಲ ತಂದುಕೊಟ್ಟಿವೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ತಂದೆಯಿಂದ ಕಲಿತಿದ್ದೇನೆ: ಕಳೆದ 10 ವರ್ಷಗಳಿಂದ ರಾಜಕೀಯದಲ್ಲಿ ನೇರವಾಗಿ ಭಾಗಿಯಾಗದಿದ್ದರೂ ತಂದೆಯವರೊಂದಿಗೆ (ಮಾಜಿ ಶಾಸಕ ವಾಸು) ಕೆಲಸ ಮಾಡಿದ್ದೇನೆ. ಅವರ ಅಭಿವೃದ್ಧಿ ಕಾರ್ಯ, ಜನಪರ ಕೆಲಸಗಳಲ್ಲಿ ಭಾಗಿಯಾಗಿದ್ದೇನೆ. ಹೀಗಾಗಿ ತಂದೆಯವರಿಂದ ಸಾಕಷ್ಟು ಕಲಿತಿದ್ದೇನೆ ಎಂದು ತಿಳಿಸಿದರು.

ಪ್ರಧಾನಿ ನರೇಂದ್ರ ಮೋದಿ ಸರ್ಕಾರದ ಜನಪರ ಯೋಜನೆಗಳು ಹಾಗೂ ಅವರ ನಾಯಕತ್ವದ ಮೇಲೆ ಅಪಾರ ಅಭಿಮಾನ ಹೊಂದಿ ಬಿಜೆಪಿ ಸೇರಿದೆ. ಈ ವೇಳೆ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಪಕ್ಷ ಸಂಘಟಿಸುವ ಜವಾಬ್ದಾರಿ ನೀಡಿದ್ದರು. ನಾನು ಟಿಕೆಟ್ ನಿರೀಕ್ಷೆ ಮಾಡದೇ ಸಂಘಟನೆಯಲ್ಲಿ ತೊಡಗಿದ್ದೆ. ಇದೀಗ ಟಿಕೆಟ್ ನೀಡಿ ದೊಡ್ಡ ಜವಾಬ್ದಾರಿ ನೀಡಿದ್ದಾರೆ. ಪಕ್ಷದ ರಾಷ್ಟ್ರ, ರಾಜ್ಯ ಹಾಗೂ ಜಿಲ್ಲಾ ಮಟ್ಟದ ವರಿಷ್ಠರಿಗೆ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರು.

ನನ್ನಂತಹ ಯುವ ಜನರಿಗೆ ಉತ್ತೇಜನ ಕೊಡುವ ಪಾರ್ಟಿ ಇದ್ದರೆ, ಅದು ಬಿಜೆಪಿ ಮಾತ್ರ 224 ಕ್ಷೇತ್ರದಲ್ಲಿ ಬೇರೆ ಪಕ್ಷಗಳು ಯುವ ಜನತೆಗೆ ಎಷ್ಟು ಅವಕಾಶ ಕೊಟ್ಟಿವೆ ಎಂಬುದನ್ನು ಗಮನಿಸಬೇಕು. ಬದಲಾವಣೆ ಮತ್ತು ಅಭಿವೃದ್ಧಿಯ ಹಿನ್ನೆಲೆಯಲ್ಲಿ ಜನಪರ ಮನಸ್ಸು ಹೊಂದಿರುವವರನ್ನು ಆಯ್ಕೆ ನಮ್ಮ ಪಕ್ಷ ಟಿಕೆಟ್ ನೀಡಿದೆ ಎಂದು ಹೇಳಿದರು.

ಕ್ಷೇತ್ರದ ಹಾಲಿ ಶಾಸಕರೂ ಆದ ಜೆಡಿಎಸ್ ಅಭ್ಯರ್ಥಿ ಜಿ.ಟಿ.ದೇವೇಗೌಡ ಹಾಗೂ ಕಾಂಗ್ರೆಸ್ ಅಭ್ಯರ್ಥಿ ಮಾವಿನಹಳ್ಳಿ ಸಿದ್ದೇಗೌಡ ಸಂವಾದಕ್ಕೆ ಗೈರು ಹಾಜರಿದ್ದರು. ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ ಹಾಜರಿದ್ದರು.

ಕಾಂಗ್ರೆಸ್ ಪ್ರಭಾವ ನನ್ನ ಮೇಲೆ ಉಂಟಾಗಲೇ ಇಲ್ಲ

ತಂದೆ ಕಾಂಗ್ರೆಸ್‌ನಲ್ಲಿ ಇದ್ದರೂ ಕಾಂಗ್ರೆಸ್ ತತ್ವ–ಸಿದ್ಧಾಂತದ ಪ್ರಭಾವ ನನ್ನ ಮೇಲೆ ಉಂಟಾಗಲೇ ಇಲ್ಲ ಎಂದು ವಿ.ಕವೀಶ್‌ಗೌಡ ತಿಳಿಸಿದರು. ತಂದೆಯವರೊಂದಿಗೆ ಕಳೆದ 10 ವರ್ಷಗಳಿಂದ ಕೆಲಸ ಮಾಡಿದ್ದೇನೆ ಎಂದು ಹೇಳಿದ್ದೀರಿ. ಅಷ್ಟು ಸಮಯದಲ್ಲಿ ಕಾಂಗ್ರೆಸ್ ಪಕ್ಷದ ಸಿದ್ಧಾಂತ ನಿಮ್ಮ ಮೇಲೆ ಪ್ರಭಾವ ಉಂಟು ಮಾಡಲಿಲ್ಲವೇ? ಎಂಬುದಕ್ಕೆ ಪ್ರತಿಕ್ರಿಯಿಸಿದ ಅವರು, ಇಲ್ಲ, ಇಲ್ಲವೇ ಇಲ್ಲ ಎಂದು ಹೇಳಿದರು.

ಕಾಂಗ್ರೆಸ್ ನನ್ನ ಮೇಲೆ ಪ್ರಭಾವ ಬೀರಲ್ಲೇ ಇಲ್ಲ. ಏಕೆಂದರೆ ಮಂಗಳೂರು, ಪುತ್ತೂರು, ಸುಳ್ಯ ಕಡೆಗಳಲ್ಲಿ ನನ್ನ ವಿದ್ಯಾಭ್ಯಾಸ ನಡೆಯಿತು. ಇಲ್ಲಿನ ಕರಾವಳಿ ಅಲೆಯ ಪ್ರಭಾವ ನನ್ನ ಮೇಲೆ ಜಾಸ್ತಿ ಇತ್ತು. ಇಲ್ಲೆಲ್ಲಾ ಬಿಜೆಪಿ ಪ್ರಭಾವ ಹೆಚ್ಚಿದ್ದು, ಹೀಗಾಗಿ ಧರ್ಮ, ಸಂಸ್ಕೃತಿ ರಕ್ಷಣೆ ವಿಚಾರ ನನ್ನ ಮೇಲೆ ಪ್ರಭಾವ ಉಂಟು ಮಾಡಿತು. ಬಿಜೆಪಿ ಜನಪರ ಕಾರ್ಯಗಳ ಬಗ್ಗೆ ನನಗೆ ಒಲವು ಜಾಸ್ತಿ ಇತ್ತು. ಆದರೆ ತಂದೆಯವರು ಸಕ್ರಿಯವಾಗಿ ಕಾಂಗ್ರೆಸ್‌ನಲ್ಲಿ ಇದ್ದರೂ ನಾನು ಕಾಂಗ್ರೆಸ್‌ನಲ್ಲಿ ಯಾವುದೇ ಜವಾಬ್ದಾರಿ ತೆಗೆದುಕೊಳ್ಳಲಿಲ್ಲ ಎಂದು ತಿಳಿಸಿದರು.


ಪ್ರಚಾರ ಮಾಡುವಂತೆ ತಂದೆಗೆ ಮನವಿ!

ತಮ್ಮ ಪರ ಪ್ರಚಾರ ಮಾಡುವಂತೆ ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ.ಕವೀಶ್‌ಗೌಡ, ತಮ್ಮ ತಂದೆ ಮಾಜಿ ಶಾಸಕ ವಾಸು ಅವರಲ್ಲಿ ಮನವಿ ಮಾಡಿದರು. ನಿಮ್ಮ ತಂದೆಯವರು ಕಾಂಗ್ರೆಸ್‌ನಲ್ಲಿದ್ದು, ಅವರು ನಿಮ್ಮ ಪರವಾಗಿ ಪ್ರಚಾರ ಮಾಡುತ್ತಾರೆಯೇ? ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ಈ ವೇದಿಕೆ ಮೂಲಕ ಅವರಲ್ಲಿ ನನ್ನ ಪರ ಪ್ರಚಾರ ಮಾಡುವಂತೆ ಮನವಿ ಮಾಡುತ್ತೇನೆ. ಇದಕ್ಕೆ ಒಪ್ಪುವುದು, ಬಿಡುವುದು ಅವರಿಗೆ ಸೇರಿದ್ದು ಎಂದು ತಿಳಿಸಿದರು.

ವರುಣ ವಿವಿಧೆಡೆ ಭಾರತೀಶಂಕರ್ ಮತಯಾಚನೆ

ತಿ.ನರಸೀಪುರ, ಏ.29– ವರುಣ ನನಗೆ ಪರಿಚಿತ ಕ್ಷೇತ್ರವಾಗಿದ್ದು, ಮತಯಾಚನೆ ವೇಳೆ ನಿರೀಕ್ಷೆಗೂ ಮೀರಿದ ಪ್ರೀತಿ ವಿಶ್ವಾಸ ದೊರೆಯುತ್ತಿದೆ ಎಂದು ಮಾಜಿ ಶಾಸಕ ಹಾಗೂ ವರುಣ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಡಾ.ಎನ್.ಎಲ್.ಭಾರತೀಶಂಕರ್ ತಿಳಿಸಿದರು.

ವರುಣ ಕ್ಷೇತ್ರ ವ್ಯಾಪ್ತಿಯ ಕೆಂಪಯ್ಯನ ಹುಂಡಿ, ರಾಯರಹುಂಡಿ, ಇಂಡವಾಳು, ಗರ್ಗೇಶ್ವರಿ ಹಾಗೂ ತಿರುಮಕೂಡಲು ಗ್ರಾಮಗಳಲ್ಲಿ ತಮ್ಮ ಬೆಂಬಲಿಗರೊಂದಿಗೆ ಮತಯಾಚಿಸಿ ಮಾತನಾಡಿದ ಅವರು, ಕಸಬಾ ಹೋಬಳಿಯಲ್ಲಿ ಪಾದಯಾತ್ರೆ ಮೂಲಕ ಮತಯಾಚಿಸುತ್ತಿದ್ದೇನೆ. ಇದು ನನಗೆ ಹಳೆಯ ಕ್ಷೇತ್ರ. ಕಸಬಾ ಹೋಬಳಿ, ಬಿಲಿಗೆರೆ, ಛತ್ರ ಹೋಬಳಿ, ವರುಣ ಸೇರಿದಂತೆ ಶೇ.75 ರಷ್ಟು ಭಾಗ ತಿ.ನರಸೀಪುರಕ್ಕೆ ಸೇರುವುದರಿಂದ ಜನತೆಯ ನೇರ ಸಂಪರ್ಕದಲ್ಲಿದ್ದೇನೆ. ಬಹುಶಃ ಕ್ಷೇತ್ರದಲ್ಲಿ ತ್ರಿಕೋನ ಸ್ಪರ್ಧೆ ನಡೆದು ಕೊನೆ ದಿನಗಳಲ್ಲಿ 1999 ರಲ್ಲಿ ಬಂದಂತೆ ಅಚ್ಚರಿ ಫಲಿತಾಂಶ ಬರಬಹುದಾಗಿದೆ. ಆದರೆ ನಾನು ಬಿಜೆಪಿ ಅಭ್ಯರ್ಥಿ ಸೋಮಣ್ಣ ಅವರೊಂದಿಗೆ



ಶಾಮೀಲಾಗಿದ್ದೇನೆ ಎಂದು ಸುಳ್ಳು ಸುದ್ದಿ ಹಬ್ಬಿಸುತ್ತಿದ್ದಾರೆ. ಇದರಿಂದ ನನಗೆ ಬರುವ ಮತಗಳನ್ನು ಬಿಜೆಪಿಯವರು ತಾವು ಪಡೆಯಬಹುದೆಂದು ಭಾವಿಸಿದ್ದಾರೆ. ಆದರೆ ಭಾರತೀ ಶಂಕರ್‌ಗೆ ಬೀಳುವ ಓಟು ಯಾವುದೇ ಕಾರಣಕ್ಕೂ ಬೇರೆಯವರು ಪಡೆಯಲು ಸಾಧ್ಯವಿಲ್ಲ. ಯಡಿಯೂರಪ್ಪ ಸೋತಾಗಲೂ ಈ ಕ್ಷೇತ್ರದಲ್ಲಿ ಜನ ನನ್ನನ್ನು ಗೆಲ್ಲಿಸಿದ್ದರು ಎಂದರೆ ನಾನು ಪಕ್ಷೇತರನಾಗಿ ಗೆದ್ದಂತೆ ಎಂದ ಅವರು ಯಾರೊಂದಿಗೂ ಶಾಮೀಲಾಗಿ ಯಾರನ್ನೋ ಗೆಲ್ಲಿಸುವುದು ನನ್ನ ರಕ್ತದಲ್ಲೇ ಇಲ್ಲ ಎಂದರು.

ನನ್ನ ಸಿದ್ದರಾಮಯ್ಯ ನಡುವೆ ಸ್ಪರ್ಧೆ: ಕಸಬಾ, ಛತ್ರ ಹಾಗೂ ಬಿಲಿಗೆರೆ ಹೋಬಳಿಗಳಲ್ಲಿ ಸಿದ್ದರಾಮಯ್ಯರಿಗಿಂತ 10 ವರ್ಷ ಮೊದಲೇ ಕ್ಷೇತ್ರದ ಜನತೆ ನನ್ನನ್ನು ಗೆಲ್ಲಿಸಿದ್ದಾರೆ. ವರುಣ ಹೋಬಳಿಯಲ್ಲಿ ಮಾತ್ರವೇ ಸಿದ್ದು ಹಳಬರಿರಬಹುದು. ಹಾಗಾಗಿ ನನ್ನ ಮತ್ತು ಸಿದ್ದರಾಮಯ್ಯ ನಡುವೆ ನೇರ ಸ್ಪರ್ಧೆ ನಡೆಯುತ್ತದೆಯೋ ಹೊರತು ಸೋಮಣ್ಣ ನಡುವೆಯಲ್ಲ. ಸೋಮಣ್ಣ ಕ್ಷೇತ್ರಕ್ಕೆ ಹೊಸಬರು. ಅವರು ಸೋಲಿಗೆ ಹೆದರಿ ಚಾಮರಾಜನಗರದಲ್ಲಿಯೂ ಸ್ಪರ್ಧಿಸಿದ್ದಾರೆ. ಅವರು ಇಲ್ಲಿ 3ನೇ ಸ್ಥಾನಕ್ಕೆ ತೃಪ್ತಿ ಪಟ್ಟುಕೊಳ್ಳಬೇಕಷ್ಟೆ. ಚಾಮರಾಜನಗರನಗರದಲ್ಲಿ 2ನೇ ಸ್ಥಾನಕ್ಕೆ ಬರಬಹುದು. ಗೋವಿಂದರಾಜನಗರದಲ್ಲಿ ಮತದಾರರಿಗೆ ಅನ್ಯಾಯ ಮಾಡಿ ಇಲ್ಲಿ ಬೇರೆಯವರ ಭವಿಷ್ಯ ಹಾಳು ಮಾಡಲು ಸ್ಪರ್ಧಿಸಿದ್ದಾರೆ ಎಂದು ಕಿಡಿಕಾರಿದರು.

ಸಿದ್ದು ಹಿಂಬಾಲಕರಿಂದ ಅಪಪ್ರಚಾರ: ಸಿದ್ದರಾಮಯ್ಯ ಕಡೆಯವರೂ ಸಹ ನಾನು ಸೋಮಣ್ಣರೊಂದಿಗೆ ಒಪ್ಪಂದ ಮಾಡಿಕೊಂಡಿದ್ದೇನೆ ಎಂದು ಅಪಪ್ರಚಾರ ಮಾಡುತ್ತಿದ್ದಾರೆ. ಭಾರತೀ ಶಂಕರ್, ಸೋಮಣ್ಣ ಒಂದಾದರೆ ಅವರಿಗೆ ಓಟ್ ಜಾಸ್ತಿಯಾಗಲ್ಲ. ಕಾಂಗ್ರೆಸ್ ಕಾರ್ಯಕರ್ತರು ಸುಳ್ಳು ಸುದ್ದಿ ಹಬ್ಬಿಸುವುದು ತರವಲ್ಲ ಎಂದರು.

ಮತಯಾಚನೆ ವೇಳೆ ಜೆಡಿಎಸ್ ರಾಜ್ಯ ವಕ್ತಾರ ತಾಯೂರು ಪ್ರಕಾಶ್, ಕೆಂಪಯ್ಯನ ಹುಂಡಿ ಬಸವರಾಜು, ಚನ್ನೇಗೌಡ, ಶಿವಪ್ರಸಾದ್, ಕಾರ್ಯಾಧ್ಯಕ್ಷ ಯಡದೊರೆ ಸತೀಶ್, ಅಬೀದ್, ಇಂಡವಾಳು ಸತೀಶ್, ಪ್ರಕಾಶ್, ಮಲ್ಲಿಕಾ, ಗ್ರಾಮದ ಯಜಮಾನರು ಭಾಗವಹಿಸಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	**ಪ್ರವೀಣ (ಕ)**: ಬೆ.10.30ಕ್ಕೆ, **ಗುರುದೇವ್ ಹೊಯ್ಸಳ (ಕ)**: ಮ.1.05ಕ್ಕೆ, **ದಸರಾ (ತೆ)**: ಮ.3.45ಕ್ಕೆ, **ರಾವಣಾಸುರ (ತೆ)**: ಸಂ.6.55ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 2	**ದಿ ಸೂಪರ್ ಮಾರಿಯೋ ಬ್ರದರ್ಸ್ ಮೂವಿ (3ಡಿ)(ಇಂ)**: ಬೆ.11ಕ್ಕೆ, ಮ.1.05ಕ್ಕೆ, ಮ.3.10ಕ್ಕೆ, **ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ)**: ಸಂ.5.10ಕ್ಕೆ, ರಾ.7.30ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	**ರಾಮಾಚಾರಿ 2.0 (ಕ)**: ಬೆ.10.45ಕ್ಕೆ, **ಆಗಸ್ಟ್ 16 1947(ತ)**: ಮ.1.30ಕ್ಕೆ, **ಪೆಂಟಗನ್ (ಕ)**: ಸಂ.4.20ಕ್ಕೆ, **ಗುಮ್ರಾಹ್ (ಹಿಂ)**: ರಾ.7.30ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 4	**ಗುರುದೇವ್ ಹೊಯ್ಸಳ (ಕ)**: ಬೆ.10.50ಕ್ಕೆ, ರಾ.7.40ಕ್ಕೆ, ರಾ.10.15ಕ್ಕೆ, **ವೀರಂ (ಕ)**: ಮ.1.30ಕ್ಕೆ, ಸಂ.4.35ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	**ಗುರುದೇವ್ ಹೊಯ್ಸಳ (ಕ)**: ಬೆ.10.20ಕ್ಕೆ, **ವೀರಂ (ಕ)**: ಮ.1.05ಕ್ಕೆ, ರಾ.7.15ಕ್ಕೆ, **ರಾವಣಾಸುರ (ತೆ)**: ಸಂ.4.20ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	**ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ)**: ಬೆ.10.25ಕ್ಕೆ, **ದಿ ಸೂಪರ್ ಮಾರಿಯೋ ಬ್ರದರ್ಸ್ ಮೂವಿ (3ಡಿ)(ಇಂ)**: ಮ.12.45ಕ್ಕೆ, ಸಂ.5.40ಕ್ಕೆ, ರಾ.7.50ಕ್ಕೆ, **ರಾಮಾಚಾರಿ 2.0(ಕ)**: ಮ.2.55ಕ್ಕೆ, **ದಸರಾ (ತೆ)**: ರಾ.10ಕ್ಕೆ.
ಸ್ಕ್ರೀನ್ 3	**ವೀರಂ (ಕ)**: ಬೆ.10.10ಕ್ಕೆ, **ರಾವಣಾಸುರ (ತೆ)**: ಮ.1.25ಕ್ಕೆ, **ಗುರುದೇವ ಹೊಯ್ಸಳ (ಕ)**: ಸಂ.4.20ಕ್ಕೆ, ರಾ.9.50ಕ್ಕೆ, **ನಮ್ ನಾಣಿ ಮದುವೆ ಪ್ರಸಂಗ (ಕ)**: ರಾ.7.05ಕ್ಕೆ.
ಸ್ಕ್ರೀನ್ 4	**ಪ್ರವೀಣ (ಕ)**: ಬೆ.11.10ಕ್ಕೆ, **ಗುರುದೇವ ಹೊಯ್ಸಳ (ಕ)**: ಮ.1.45ಕ್ಕೆ, **ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ)**: ಸಂ.4.30ಕ್ಕೆ, ರಾ.10.20ಕ್ಕೆ, **ಪೆಂಟಗನ್ (ಕ)**: ಸಂ.6.50ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, **1 ರಾಬರಿ ಕಥೆ (ಕ)**: ಸಂ.4.50ಕ್ಕೆ, **ಚೌಕಾಬಾರ (ಕ)**: ರಾ.7.50ಕ್ಕೆ, **ಕ್ರಿಡ್ 3 (ಇಂ)**: ಬೆ.11.35ಕ್ಕೆ, **ತು ಜೂಥಿ ಮೇನ್ ಮಕ್ಕರ್ (ಹಿಂ)**: ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, **ತು ಜೂಥಿ ಮೇನ್ ಮಕ್ಕರ್ (ಹಿಂ)**: ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, **ತುರಮುಖಂ (ಮ)**: ರಾ.10.30ಕ್ಕೆ, **ಅಜಿಲನ್ ಕಿಂಗ್ ಆಫ್ ದಿ ಓಷನ್ (ತ)**: ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, **ಸ್ಕ್ರೀಮ್ 6 (ಇಂ)**: ಮ.2.45ಕ್ಕೆ, ರಾ.7.45ಕ್ಕೆ, **65 (ಇಂ)**: ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಏಜೆಂಟ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರಾಘವೇಂದ್ರ ಸ್ಟೋರ್ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಓನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕಿಸಿಕಾ ಬೈ ಕಿಸಿಕಿ ಜಾನ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ರಾಘು (ಕ)	4 ಪ್ರದರ್ಶನಗಳು
ಗಾಯಿತ್ರಿ	
ಪಿಎಸ್–2 (ತ)	4 ಪ್ರದರ್ಶನಗಳು
ರಾಜ್‌ಕಮಲ್	
ಪಠಾಣ್ (ಹಿ)	4 ಪ್ರದರ್ಶನಗಳು
ಸಂಗಂ	
ಏಜೆಂಟ್ (ತೆ)	4 ಪ್ರದರ್ಶನಗಳು
ಲಿಡೋ	
ಉಂಡೆನಾಮ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ರುದ್ರಂ (ತ)	4 ಪ್ರದರ್ಶನಗಳು
ಪ್ರಭಾ	
ರಾಘು (ಕ)	4 ಪ್ರದರ್ಶನಗಳು

ಚಪ್ಪರದಹಳ್ಳಿಯಲ್ಲಿ ಕೆ.ವೆಂಕಟೇಶ್ ಪ್ರಚಾರ



ಬೆಟ್ಟದಪುರ, ಏ.29– ಇಲ್ಲಿಗೆ ಸಮೀಪದ ಚಪ್ಪರದಹಳ್ಳಿಯಲ್ಲಿ ಮಾಜಿ ಶಾಸಕ ಕೆ.ವೆಂಕಟೇಶ್ ಬಿರುಸಿನ ಪ್ರಚಾರ ನಡೆಸಿದರು. ಗ್ರಾಮದ ಮನೆ ಮನೆಗೆ ತೆರಳಿ ಮತಯಾಚಿಸಿ ಮಾತನಾಡಿದ ಅವರು, ನನ್ನ ಅಧಿಕಾರಾವಧಿಯಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸಿದ್ದೇನೆ. ಆದರೆ ಕೆಲವರು ನನ್ನ ವಿರುದ್ಧ ಅಪಪ್ರಚಾರ ನಡೆಸುತ್ತಿದ್ದಾರೆ. ಹೀಗಾಗಿ ಅವರು ನಾನು ಯಾವುದೇ ಅಭಿವೃದ್ಧಿ ಕಾರ್ಯ ಮಾಡಿಲ್ಲ ಎಂಬುದನ್ನು ಸಾಬೀತುಪಡಿಸಲಿ ಎಂದು ಸವಾಲು ಹಾಕಿದರು.

ಪಿರಿಯಾಪಟ್ಟಣ ತಾಲೂಕಿನ ಬೃಹತ್ ಯೋಜನೆಯಾದ 150 ಕೆರೆಗಳನ್ನು ತುಂಬಿಸುವ ಯೋಜನೆಗೆ ಚಾಲನೆ ನೀಡದೆ ಕೇವಲ ರಸ್ತೆ, ಚರಂಡಿ ಅಭಿವೃದ್ಧಿಗೊಳಿಸಿ ತಾಲೂಕನ್ನು ಅಭಿವೃದ್ಧಿಗೊಳಿಸಿದ್ದೇನೆ ಎಂದು ಸುಳ್ಳು ಹೇಳುತ್ತಿರುವ ವ್ಯಕ್ತಿಯನ್ನು ಯಾವುದೇ ಕಾರಣಕ್ಕೂ ಕ್ಷೇತ್ರದ ಜನತೆ ನಂಬುವುದಿಲ್ಲ. ಆದ್ದರಿಂದ ಈ ಬಾರಿ ತಾಲೂಕಿನ ಸಮಗ್ರ ಅಭಿವೃದ್ಧಿಯ ಹಿತದೃಷ್ಟಿಯಿಂದ ಕ್ಷೇತ್ರದ ಜನತೆ ನನ್ನನ್ನು ಅಧಿಕ ಮತಗಳಿಂದ ಗೆಲ್ಲಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಇದೇ ವೇಳೆ ಗ್ರಾಮದ ಹಾಲಿನ ಡೈರಿ ನಿರ್ದೇಶಕ ಮರೀಗೌಡ, ಜೆಡಿಎಸ್ ಮುಖಂಡ ತಾಂಡವಮೂರ್ತಿ ಮಾಜಿ ಶಾಸಕ ಕೆ.ವೆಂಕಟೇಶ್ ನೇತೃತ್ವದಲ್ಲಿ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರ್ಪಡೆಗೊಂಡರು. ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಲೋಕೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರೆಹಮತ್ ಜಾನ್‌ಬಾಬು, ಮುಖಂಡರಾದ ಆಂಜನೇಯಗೌಡ, ರಾಜೇಶ್, ಗ್ರಾಪಂ ಸದಸ್ಯ ರಾಜು ಸೇರಿದಂತೆ ಇನ್ನಿತರರಿದ್ದರು.

ದರ್ಶನ್ ಪರ ಸಂಸದ ಎಂ.ಕೆ.ರಾಘವನ್ ಮನವಿ

ನಂಜನಗೂಡು, ಏ.29– ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ದುಡ್ಡು ಮಾಡಿಲ್ಲ. ಬದಲಿಗೆ ಜನರ ಪ್ರೀತಿ, ವಿಶ್ವಾಸ ಸಂಪಾದಿಸಿ ಹೋಗಿದ್ದಾರೆ. ಅದೇ ಅವರ ಮಗ ದರ್ಶನ್‌ರನ್ನು ಕಾಪಾಡಲಿದೆ. ಹೀಗಾಗಿ ಅವರನ್ನು 50 ಸಾವಿರ ಮತಗಳ ಅಂತರದಿಂದ ಗೆಲ್ಲಿಸಿ. ನಿಮ್ಮ ಸೇವೆ ಮಾಡಲು ಅವಕಾಶ ಕಲ್ಪಿಸಿ ಎಂದು ಕ್ಯಾಲಿಕಟ್ ಸಂಸದ ಎಂ.ಕೆ.ರಾಘವನ್ ಮನವಿ ಮಾಡಿದರು.



ತಾಲೂಕಿನ ಹೆಗ್ಗಡಹಳ್ಳಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ದರ್ಶನ್ ಜೊತೆಗೂಡಿ ಪ್ರಚಾರ ನಡೆಸಿ ಮಾತನಾಡಿದ ಅವರು, ಧ್ರುವನಾರಾಯಣ್ ಅವರು ನಾನು ಒಟ್ಟಿಗೆ ಸಂಸದರಾಗಿ ಕೆಲಸ ಮಾಡಿದ್ದೇವೆ. ಅವರ ಪ್ರಾಮಾಣಿಕತೆ, ನಿಷ್ಠೆ, ಜನಸೇವೆ ಮೆಚ್ಚುವಂತದ್ದು. ಅವರು ಅಗಲುವ ವಾರದ ಮುಂಚೆ ಭೇಟಿಯಾಗಿ ನೀವು ಲೋಕಸಭೆಗಿಂತ ವಿಧಾನಸಭೆಗೆ ಸ್ಪರ್ಧಿಸುವಂತೆ ಸಲಹೆ ನೀಡಿದ್ದೆ. ಅದಕ್ಕೆ ಅವರು ಒಪ್ಪಿಗೆ ನೀಡಿದ್ದರು. ಚುನಾವಣೆಗಾಗಿ ತಯಾರಿ ನಡೆಸಿದ್ದರು. ವಿಧಿ ಅವರನ್ನು ನಮ್ಮಿಂದ ಬೇರೆ ಮಾಡಿತು. ಆದರೆ ಅವರ ಕುಡಿ ತಂದೆ, ತಾಯಿ ಇಬ್ಬರನ್ನೂ ಕಳೆದುಕೊಂಡು ನಿಮ್ಮ ಮಡಿಲಿಗೆ ಬಂದಿದೆ. ನೀವು ಅವರನ್ನು ಕೈ ಬಿಡದೆ 50 ಸಾವಿರ ಮತಗಳ ಅಂತರದಿಂದ ಗೆಲ್ಲಿಸಿದಲ್ಲಿ ನಿಮಗೆ ಋಣಿಯಾಗಿ ನಿಮ್ಮ ಸಮಸ್ಯೆಗಳಿಗೆ ಸ್ಪಂದಿಸಿ ಅಭಿವೃದ್ಧಿ ಕೆಲಸ ಮಾಡಲಿದ್ದಾರೆ ಎಂದರು.

ಅಭ್ಯರ್ಥಿ ದರ್ಶನ್ ಧ್ರುವನಾರಾಯಣ್ ಮಾತನಾಡಿ, ತಂದೆ–ತಾಯಿ ಅಗಲಿಕೆ ನೋವಿನ ನಡುವೆ ಅಭಿಮಾನಿಗಳ ಒತ್ತಾಯದ ಮೇರೆಗೆ ಚುನಾವಣೆಗೆ ಸ್ಪರ್ಧಿಸಿದ್ದೇನೆ. ಇದು ನಾನು ಬಯಸಿದ ಚುನಾವಣೆಯಲ್ಲ. ನೀವು ಬಯಸಿದ ನಿಮ್ಮಗಳ ಚುನಾವಣೆ. ನಿಮ್ಮ ಸೇವೆ ಮಾಡಿ ನನ್ನ ತಂದೆ ಆಸೆ, ಕನಸನ್ನು ನೆರವೇರಿಸಲು ಈ ಬಾರಿ ಆಶೀರ್ವದಿಸಿ ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ಹರತಲೆ, ಹೊಸಪುರ, ಬ್ಯಾಳಾರುಹುಂಡಿ, ನವಿಲೂರು, ಸಿಂಧುವಳ್ಳಿ ಗ್ರಾಮಗಳಿಗೆ ತೆರಳಿ ಅಬ್ಬರದ ಪ್ರಚಾರ ನಡೆಸಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಶ್ರೀಕಂಠನಾಯಕ, ಜಿಪಂ ಮಾಜಿ ಸದಸ್ಯೆ ಲತಾ, ಮುಖಂಡರಾದ ರುದ್ರ, ಪ್ರಕಾಶ್, ಹುಚ್ಚಯ್ಯ, ಶಂಕರಪ್ಪ, ಮಹದೇವು, ಯುವ ಕಾಂಗ್ರೆಸ್ ಅಧ್ಯಕ್ಷ ಅಶೋಕ್, ಮಾಜಿ ಸಚಿವ ದಿ.ಎಂ.ಮಹದೇವ್ ಪುತ್ರ ವಿದ್ಯಾಲಂಕಾರ್, ರಾಜೇಶ್ ಇದ್ದರು.

ಚುನಾವಣೆಯಲ್ಲಿ ಡಿ.ರವಿಶಂಕರ್ ಬೆಂಬಲಿಸಿ: ಹೆಚ್.ವಿಶ್ವನಾಥ್ ಕರೆ



ಭೇರ್ಯ, ಏ.29– ಚುನಾವಣೆಯಲ್ಲಿ ಕೆ.ಆರ್.ನಗರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ರವಿಶಂಕರ್ ಬೆಂಬಲಿಸುವಂತೆ ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ತಮ್ಮ ಬೆಂಬಲಿಗರಿಗೆ ಕರೆ ನೀಡಿದರು.

ಸಾಲಿಗ್ರಾಮ ತಾಲೂಕಿನ ಭೇರ್ಯ ಗ್ರಾಮದ ಎ.ಎಲ್.ಕಲ್ಯಾಣ ಮಂಟಪದಲ್ಲಿ ನಡೆದ ತಮ್ಮ ಬೆಂಬಲಿಗರ ಸಭೆಯಲ್ಲಿ ಮಾತನಾಡಿದ ಅವರು, ಮಾಜಿ ಮುಖ್ಯಮಂತ್ರಿ ದಿವಂಗತ ಡಿ.ದೇವರಾಜ ಅರಸ್ ಅವರ ಕಾಲದಿಂದಲೂ ಕಾಂಗ್ರೆಸ್ ಪಕ್ಷದಲ್ಲಿ ನಡೆದು ಬಂದ ತಮ್ಮ ಹಾದಿ ಬಗ್ಗೆ ವಿಶ್ಲೇಷಿಸಿ ಮಾತನಾಡಿದರು.

ಕಾಂಗ್ರೆಸ್ ಪಕ್ಷ ಮಾಜಿ ಪ್ರಧಾನಿ ಇಂದಿರಾ ಗಾಂಧಿ ಕಾಲದಿಂದಲೂ ಹಿಂದುಳಿದ ವರ್ಗಗಳಿಗೆ ಸಾಮಾಜಿಕ ನ್ಯಾಯ, ಸೂರಿಲ್ಲದವರಿಗೆ ಸೂರು, ಮನೆ ಕಟ್ಟಲು ನಿವೇಶನ, ಜಮೀನು ಸೇರಿದಂತೆ ಅನೇಕ ಸೌಲಭ್ಯಗಳನ್ನು ನೀಡಿದೆ ಎಂದರು.

ಈ ವೇಳೆ ನೀವು ಕಾಂಗ್ರೆಸ್‌ಗೆ ಸೇರ್ಪಡೆಯಾಗಿ ಚುನಾವಣೆಗೆ ಸ್ಪರ್ಧಿಸುತ್ತೀರಾ ಎಂದು ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ವಿಶ್ವನಾಥ್, ಕೆ.ಆರ್.ನಗರ ಕ್ಷೇತ್ರದಲ್ಲಿ ಆರೇಳು ಬಾರಿ ಕಾಂಗ್ರೆಸ್ ಪಕ್ಷದಿಂದ ಚುನಾವಣೆ ಎದುರಿಸಿದ್ದೇನೆ. ನನ್ನ ಪ್ರತಿಸ್ಪರ್ಧಿ ದಿ.ಎಸ್.ನಂಜಪ್ಪ ಅವರ ನನ್ನ ಬಾಂಧವ್ಯ ಬಹಳ ಚೆನ್ನಾಗಿತ್ತು. ನನ್ನ ಕಿರಿಯ ಮಗನ ಮದುವೆಗೆ ತಾಳಿ ಅವರೇ ಕೊಟ್ಟಿದ್ದು, ಇವಾಗ ಎಲ್ಲಿದೆ ಬಾಂಧವ್ಯ. ಇವಾಗ ನಡೆಯುತ್ತಿರುವ ಚುನಾವಣೆ ಭರಾಟೆಯಲ್ಲಿ ನಾವು ಕೊಚ್ಚಿ ಹೋಗುತ್ತೇವೆ ಎಂದರು.

ನಾನು ಎಲ್ಲಿದ್ದರೂ, ನನ್ನ ಮನಸ್ಸು ಮಾತ್ರ ಕಾಂಗ್ರೆಸ್. ಆದ್ದರಿಂದ ನಿಮ್ಮನ್ನೆಲ್ಲ ಕರೆದು ಒಮ್ಮೆ ಸಭೆ ಮಾಡೋಣ ಎನಿಸಿತು. ಹೀಗಾಗಿ ಗ್ರಾಮದಲ್ಲಿ ಸಭೆ ಆಯೋಜಿಸಿದ್ದು, ಕಾಂಗ್ರೆಸ್ ಪಕ್ಷದ ನನ್ನ ಹಳೆಯ ಸ್ನೇಹಿತರೆಲ್ಲಾ ಸಭೆಗೆ ಬಂದಿದ್ದಾರೆ. ತುಂಬಾ ಸಂತೋಷವಾಯಿತು ಎಂದರು. ಇದೇ ವೇಳೆ ಚುನಾವಣೆಯಲ್ಲಿ ಡಿ.ರವಿಶಂಕರ್ ಬೆಂಬಲಿಸುವಂತೆ ಮನವಿ ಮಾಡಿದರು.

ಸಭೆಯಲ್ಲಿ ಕಾಂಗ್ರೆಸ್ ಮುಖಂಡರಾದ ಸಿ.ಪಿ.ರಮೇಶ್, ಜಿ.ಆರ್.ರಾಮೇಗೌಡ, ಎಸ್.ಸಿದ್ದೇಗೌಡ, ಜಿಪಂ ಮಾಜಿ ಸದಸ್ಯ ಸಿದ್ದಪ್ಪ, ಶಿವರಾಂ, ಜಯರಾಮೇಗೌಡ, ಎ.ಟಿ.ಗೋಪಾಲ್, ಪರಶುರಾಮ್, ತಾಪಂ ಮಾಜಿ ಅಧ್ಯಕ್ಷ ಮಂಜಪ್ಪ, ತಾಲೂಕು ಉಪ್ಪಾರ ಸಮಾಜದ ಅಧ್ಯಕ್ಷ ಡಿ.ತಮ್ಮಯ್ಯ, ಎಸ್.ಪೀರ್‌ಖಾನ್, ಬಿ.ಎಲ್.ರಾಜಶೇಖರ, ಬಿ.ಹೆಚ್.ಮಹದೇವ್, ಸಾಲಿಗ್ರಾಮ ಎಪಿಎಂಸಿ ಮಾಜಿ ಅಧ್ಯಕ್ಷ ರಮೇಶ್, ಗುಣಪಾಲ್ ಜೈನ್, ಎಸ್.ಬಿ.ಶೇಖರ್, ಪೂರ್ಣಚಂದ್ರ, ರಾಜಶೇಖರ್, ಚಂದ್ರೇಗೌಡ, ಗಂಧನಹಳ್ಳಿ ಯಜಮಾನ ರಘು, ತಾಪಂ ಮಾಜಿ ಸದಸ್ಯ ಮಂಜುನಾಥ್, ಖಾಲೀದ್ ಪಾಷ, ಅಣ್ಣಾಜಿ ಶಿವಕುಮಾರ್, ಎಲ್‌ಐಸಿ ರಾಮಚಂದ್ರ, ಗ್ರಾಪಂ ಸದಸ್ಯ ಹೆಚ್.ಎಂ.ರಾಮಚಂದ್ರ, ನಾಡಗೌಡ ಕುಮಾರ ಸ್ವಾಮಿ ಸೇರಿದಂತೆ ಅನೇಕರಿದ್ದರು.

ಕುರ್ಣೇಗಾಲದಲ್ಲಿ ಕೃಷ್ಣನಾಯಕ ಪರ ಪ್ರಚಾರ

ಸರಗೂರು, ಏ.29– ಬಿಜೆಪಿಯಿಂದ ಮಾತ್ರ ಅಭಿವೃದ್ಧಿ ಸಾಧ್ಯ ಎಂದು ರಾಜ್ಯ ಬಿಜೆಪಿ ಕಾರ್ಯಕಾರಿಣಿ ಸದಸ್ಯೆ ಸುನಂದರಾಜು ತಿಳಿಸಿದರು. ತಾಲೂಕಿನ ಕುರ್ಣೇಗಾಲ ಗ್ರಾಮದಲ್ಲಿ ಬಿಜೆಪಿ ಅಭ್ಯರ್ಥಿ ಕೆಎಂ.ಕೃಷ್ಣನಾಯಕ ಪರ ಮತಯಾಚಿಸಿ ಮಾತನಾಡಿದ ಅವರು, ಚುನಾವಣೆಯಲ್ಲಿ ಕ್ಷೇತ್ರದ ಅಭ್ಯರ್ಥಿ ಗೆಲುವಿಗೆ ಬೂತ್ ಸಮಿತಿ ಸದಸ್ಯರು ದುಡಿಯಬೇಕು. ಕೋಟೆಯಲ್ಲಿ ಪ್ರಥಮ ಬಾರಿಗೆ ಕಮಲ ಅರಳಿಸಲು ಎಲ್ಲರೂ ಒಗ್ಗೂಡಿ ಶ್ರಮಿಸುವ ಮೂಲಕ ಕೃಷ್ಣನಾಯಕರ ಕೈ ಬಲಪಡಿಸಬೇಕು ಎಂದು ಮನವಿ ಮಾಡಿದರು.

ಪಪಂ ಅಧ್ಯಕ್ಷೆ ರಾಧಿಕಾ ಮಾತನಾಡಿ, ಹೆಚ್.ಡಿ.ಕೋಟೆ ಕ್ಷೇತ್ರ ವಿಸ್ತೀರ್ಣದಲ್ಲಿ ವಿಶಾಲವಾಗಿದ್ದು, ಬಿಜೆಪಿ ಅಧಿಕಾರಕ್ಕೆ ಬಂದರೆ ಹೆಚ್ಚಿನ ಅನುದಾನ ತಂದು ಅಭಿವೃದ್ಧಿಗೊಳಿಸಲು ಅನುಕೂಲವಾಗುತ್ತದೆ. ಹೀಗಾಗಿ ಪಕ್ಷದ ಅಭ್ಯರ್ಥಿ ಕೃಷ್ಣನಾಯಕ ಅವರ ಕಮಲದ ಗುರುತಿಗೆ ಮತ ಹಾಕಿಸಲು ಎಲ್ಲರು ಶ್ರಮಿಸಬೇಕು ಎಂದರು.

ಗ್ರಾಮದ ಮಹಿಳಾ ಕಾರ್ಯಕರ್ತೆಯರಾದ ಸುಶೀಲಮ್ಮ, ಭಾಗ್ಯಮ್ಮ, ಜಯಮ್ಮ, ನಾಗರತ್ನಮ್ಮ, ಶಾಂತಮ್ಮ, ಮಲ್ಲಮ್ಮ, ಕಾಶಮ್ಮ, ಹೇಮಾವತಿ, ಸುಮ, ರವಿ, ಸ್ವಾಮಿ ಇನ್ನಿತರರಿದ್ದರು.



ಮೇ 2, ಬ್ರಹ್ಮ ರಥೋತ್ಸವ

ಮೂಗೂರು, ಏ.29– ಗ್ರಾಮದ ಶ್ರೀದೇಶೇಶ್ವರ ಸ್ವಾಮಿ ಹಾಗೂ ಪಾರ್ವತಿ ಅಮ್ಮನವರ ಗಿರಿಜಾ ಕಲ್ಯಾಣ ಅಂಗವಾಗಿ ಮೇ 2ರಂದು ಮದ್ದಿವ್ಯ ಬ್ರಹ್ಮ ರಥೋತ್ಸವ ನಡೆಯಲಿದೆ. ದೇವೇಶಗಿರಿ ಎಂದೇ ಹೆಸರಾಗಿರುವ ಧಾರ್ಮಿಕ ಹಿನ್ನೆಲೆಯುಳ್ಳ ಗ್ರಾಮದ ಶ್ರೀದೇಶೇಶ್ವರ ಸ್ವಾಮಿ ದೇವಾಲಯದಲ್ಲಿ ಹಲವು ವರ್ಷಗಳಿಂದ ಸ್ಥಗಿತಗೊಂಡಿದ್ದ ಉತ್ಸವಕ್ಕೆ ಮರು ಚಾಲನೆ ನೀಡಲಾಗಿದ್ದು, ಶನಿವಾರ ದೇವಾಲಯದ ಆವರಣದಲ್ಲಿ ಧ್ವಜಾರೋಹಣದ ಮೂಲಕ ಗಿರಿಜಾ ಕಲ್ಯಾಣಕ್ಕೆ ಚಾಲನೆ ನೀಡಲಾಯಿತು. ಏ.30ರಂದು ವೃಷಭ ವಾಹನೋತ್ಸವ, ಮೇ 1ರಂದು ಗಿರಿಜಾ ಕಲ್ಯಾಣ, ಮೇ 2ರಂದು ಶ್ರೀದೇಶೇಶ್ವರ ಸ್ವಾಮಿ ಹಾಗೂ ಪಾರ್ವತಿ ಅಮ್ಮನವರ ದಿವ್ಯ ಮಹಾ ರಥೋತ್ಸವ, ಮೇ 3ರಂದು ಬುಧವಾರ ರಾತ್ರಿ ದೇಗುಲದಲ್ಲಿ ಶಯನೋತ್ಸವ, ಮೇ 4ರಂದು ತೀರ್ಥ ಸ್ನಾನ ನಂತರ ಪಲ್ಲಕ್ಕಿಯಲ್ಲಿ ಉತ್ಸವಮೂರ್ತಿಯ ಮೆರವಣಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ನಡೆಯಲಿದೆ ಎಂದು ದೇವಾಲಯದ ಪ್ರಧಾನ ಅರ್ಚಕರಾದ ಸುಬ್ರಹ್ಮಣ್ಯ, ಅಜೇಯ ಶಾಸ್ತ್ರಿ ತಿಳಿಸಿದ್ದಾರೆ.



ಜೆಡಿಎಸ್ ಪಕ್ಷದ ತತ್ವ ಸಿದ್ಧಾಂತ, ಹುಣಸೂರು ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಜಿ.ಡಿ.ಹರೀಶ್‌ಗೌಡರ ನಾಯಕತ್ವ ಒಪ್ಪಿ ಉದ್ದೂರು ಗ್ರಾಪಂ ಮಾಜಿ ಸದಸ್ಯ ಮಾದೇಗೌಡ, ಮಾಜಿ ಉಪಾಧ್ಯಕ್ಷ ಶಿವಣ್ಣೇಗೌಡ, ಸಣ್ಣ ಸ್ವಾಮಿಗೌಡ, ಶಿವು, ಮಹದೇವು ಕಾಂಗ್ರೆಸ್ ತೊರೆದು ಹರೀಶ್‌ಗೌಡರ ನೇತೃತ್ವದಲ್ಲಿ ಜೆಡಿಎಸ್ ಸೇರ್ಪಡೆಗೊಂಡರು. ಈ ವೇಳೆ ಜಿಪಂ ಮಾಜಿ ಸದಸ್ಯ ಸುರೇಂದ್ರ ಮತ್ತು ಪಕ್ಷದ ಮುಖಂಡರು ಹಾಜರಿದ್ದರು.

ಎಲ್ಲರ ಹಿತ ಕಾಯುವ ಕಾಂಗ್ರೆಸ್ ಅಧಿಕಾರಕ್ಕೆ ತನ್ನಿ

ಬಾಬೂಜಿ ಮೊಮ್ಮಗ, ರಾಷ್ಟ್ರೀಯ ಕಾಂಗ್ರೆಸ್ ವಕ್ತಾರ ಡಾ. ಅನ್ಸುಲ್ ಅವಿಜಿತ್



ಹೆಚ್.ಡಿ.ಕೋಟೆ, ಏ.29– ರಾಜ್ಯದಲ್ಲಿ ಎಲ್ಲಾ ಸಮುದಾಯಗಳ ಹಿತ ಕಾಯುವ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಬೇಕು ಎಂದು ಬಾಬು ಜಗಜೀವನ್ ರಾಂ ಅವರ ಮೊಮ್ಮಗ, ರಾಷ್ಟ್ರೀಯ ಕಾಂಗ್ರೆಸ್ ವಕ್ತಾರ ಡಾ. ಅನ್ಸುಲ್ ಅವಿಜಿತ್ ತಿಳಿಸಿದರು.

ಪಟ್ಟಣದ ಹ್ಯಾಂಡ್‌ಪೋಸ್ಟ್‌ನಲ್ಲಿರುವ ಖಾಸಗಿ ಕಲ್ಯಾಣ ಮಂಟಪದಲ್ಲಿ ನಡೆದ ಮಾದಿಗ ಸಮುದಾಯದ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯ ಮತ್ತು ದೇಶದಲ್ಲಿ ಕಾಂಗ್ರೆಸ್ ಆಡಳಿತದ ವೇಳೆ ದಲಿತ ಸಮುದಾಯ ನೆಮ್ಮದಿಯ ಜೀವನ ನಡೆಸಿಕೊಂಡು ಬಂದಿದ್ದು, ಪ್ರಸ್ತುತ ಬಿಜೆಪಿ ಸರ್ಕಾರದ ದುರಾಡಳಿತ ಹಾಗೂ ಕೋಮುಗಲಭೆ, ಭ್ರಷ್ಟಾಚಾರದಿಂದಾಗಿ ದಲಿತ ಸೇರಿದಂತೆ ಎಲ್ಲಾ ಸಮುದಾಯಗಳು ಜೀವನ ನಡೆಸುವುದೇ ಕಷ್ಟವಾಗಿದೆ. ರಾಜ್ಯ ಮತ್ತು ಕೋಟೆ ಕ್ಷೇತ್ರದಲ್ಲಿ ಬಿಜೆಪಿ ಕಿತ್ತೊಗೆಯುವ ಕೆಲಸವನ್ನು ಮಾದಿಗ ಸಮುದಾಯ ಮಾಡಬೇಕು ಎಂದರು.

ಈ ಬಾರಿಯ ಕಾಂಗ್ರೆಸ್ ಪ್ರಣಾಳಿಕೆ ಪ್ರತಿಯೊಂದು ವರ್ಗಗಳ ಏಳಿಗೆ, ರಾಜ್ಯ ಅಭಿವೃದ್ಧಿಗೆ ಪೂರಕವಾಗಿದೆ. ದೇಶದಲ್ಲಿ ಬಾಬು ಜಗಜೀವನ್ ರಾಂ ಅವರು ನಡೆಸಿದ ಹಸಿರು ಕ್ರಾಂತಿಗೆ ಕಾಂಗ್ರೆಸ್ ಪಕ್ಷ ಬೆಂಬಲವಾಗಿತ್ತು. ಇಂಥ ಪಕ್ಷದಲ್ಲಿ ನಮ್ಮಂತ ಸಮುದಾಯದ ಅನೇಕ ಮಹನೀಯರು ಸಾಧನೆ ಮಾಡಲು ಸಾಧ್ಯವಾಗಿದೆ ಎಂದರು.

ತಾಲೂಕಿನಲ್ಲಿ ದಲಿತ ಸಮುದಾಯದ ಏಳಿಗೆಗಾಗಿ ಶಾಸಕ ಅನಿಲ್ ಚಿಕ್ಕಮಾದು ಹೆಚ್ಚು ಒತ್ತು ನೀಡಿದ್ದು, ಯಾವುದೇ ಕೋಮು ಗಲಭೆ ನಡೆಯದ ಹಾಗೆ ಉತ್ತಮ ಆಡಳಿತ ನಡೆಸಿದ್ದಾರೆ. ಹೀಗಾಗಿ ಅವರನ್ನು ಮತ್ತೆ ಶಾಸಕರಾಗಿ ಆಯ್ಕೆ ಮಾಡಿದರೆ ಕ್ಷೇತ್ರದಲ್ಲಿ ಸಮುದಾಯ ಉಳಿಯಲು ಸಾಧ್ಯ ಎಂದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ಮಾದಿಗ ಸಮುದಾಯ ವಾಸಿಸುವ ಗ್ರಾಮಗಳಿಗೆ 38 ಕೋಟಿಗೂ ಹೆಚ್ಚು ಅಭಿವೃದ್ಧಿ ಕೆಲಸ ಮಾಡಿದ್ದೇನೆ. ಮುಂಬರುವ ಜಿಪಂ, ತಾಪಂ ಚುನಾವಣೆಯಲ್ಲಿ ಈ ಸಮುದಾಯಗಳಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಲಾಗುವುದು. ನಾನು ಮಾಡಿರುವ ಕ್ಷೇತ್ರದ ಅಭಿವೃದ್ಧಿ ಮತ್ತು ತಾಲೂಕಿನ ಹಿತಕ್ಕಾಗಿ ಮತ ನೀಡಿದರೆ ಮತ್ತಷ್ಟು ಅಭಿವೃದ್ಧಿ ಕೆಲಸ ಮಾಡಲು ಸಾಧ್ಯವಾಗಲಿದೆ ಎಂದರು.

ಸಭೆಯಲ್ಲಿ ವಿಧಾನಪರಿಷತ್ ಸದಸ್ಯ ಡಿ.ತಿಮ್ಮಯ್ಯ, ಸರಗೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಾದಪ್ಪ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ವಿಜಯಕುಮಾರ್, ಬಾಬು ಜಗಜೀವನ್ ರಾಂ ವಿಚಾರ ವೇದಿಕೆ ಮಾಜಿ ಅಧ್ಯಕ್ಷ ಪಿ.ನಾಗರಾಜ್, ಡಿಸಿಸಿ ಸದಸ್ಯ ಪರಶಿವಮೂರ್ತಿ, ಜಿಪಂ ಮಾಜಿ ಉಪಾಧ್ಯಕ್ಷೆ ನಂದಿನಿ, ಪುರಸಭಾ ಸದಸ್ಯೆ ಶಾಂತಮ್ಮ, ಮುಖಂಡರಾದ ಗೋವಿಂದರಾಜು, ಮಹೇಂದ್ರ, ಚೆಲುವರಾಜು, ರಾಜೇಂದ್ರ ವೈಕುಂಠಯ್ಯ, ಶಿವರಾಜ್, ಸ್ವಾಮಿ, ವೆಂಕಟಯ್ಯ, ತಿಮ್ಮರಾಜು, ಮಹಿಳೆಯರು, ಕಾರ್ಯಕರ್ತರು, ಮುಖಂಡರು ಭಾಗವಹಿಸಿದ್ದರು.

ವಿಪಕ್ಷಗಳ ಮಾತಿಗೆ ಕಿವಿಗೊಡದೆ ಕಾಂಗ್ರೆಸ್ ಬೆಂಬಲಿಸಿ

ರಾಜ್ಯ ಒಕ್ಕಲಿಗರ ಸಂಘದ ಮಾಜಿ ನಿರ್ದೇಶಕ ಡಾ.ಕೆ.ಮಹದೇವ್ ಕರೆ

ತಿ.ನರಸೀಪುರ, ಏ.29– ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿ ಬಡವರು ಮತ್ತು ಮಧ್ಯಮ ವರ್ಗದವರ ಬದುಕಿನ ಮೇಲೆ ಬರೆ ಎಳೆದು ವ್ಯಾಪಕ ಭ್ರಷ್ಟಾಚಾರ ನಡೆಸುತ್ತಿರುವ ಬಿಜೆಪಿ ಸರ್ಕಾರವನ್ನು ಅಧಿಕಾರದಿಂದ ಕಿತ್ತೊಗೆಯಬೇಕು ಎಂದು ರಾಜ್ಯ ಒಕ್ಕಲಿಗರ ಸಂಘದ ಮಾಜಿ ನಿರ್ದೇಶಕ ಡಾ.ಕೆ.ಮಹದೇವ್ ಕರೆ ನೀಡಿದರು.

ಕ್ಷೇತ್ರದ ಕಗ್ಗಲಿಪುರ ಗ್ರಾಮದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಡಾ.ಹೆಚ್.ಸಿ.ಮಹದೇವಪ್ಪ ಪರ ಮತಯಾಚಿಸಿ ಮಾತನಾಡಿದ ಅವರು, ಜೆಡಿಎಸ್ ಸ್ವಂತ ಬಲದ ಮೇಲೆ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ. ಈಗಿನ ಶಾಸಕರು 5 ವರ್ಷಗಳಲ್ಲಿ ತಾವು ಕ್ಷೇತ್ರಕ್ಕೆ ತಂದಿರುವ ಅನುದಾನ ಹಾಗೂ ಯೋಜನೆಗಳ ಬಗ್ಗೆ ಕೇಳಿದರೆ ಇದುವರೆವಿಗೂ ಬಾಯ್ಬಿಟ್ಟಿಲ್ಲ. ಮಹದೇವಪ್ಪ ಅವರನ್ನು ರಾಜಕೀಯವಾಗಿ ಕೈ ಹಿಡಿದ ಈ ಭಾಗದ ಜನರು ಈ ಬಾರಿಯೂ ಕೈ ಹಿಡಿದು ಬೆಂಬಲಿಸಿದರೆ ರಾಜ್ಯದಲ್ಲಿ ಅಧಿಕಾರಕ್ಕೆ ಬರಲಿರುವ ಕಾಂಗ್ರೆಸ್ ಸರ್ಕಾರದಲ್ಲಿ ಜವಾಬ್ದಾರಿಯುತ ಸ್ಥಾನ ನಿರ್ವಹಿಸಲಿದ್ದಾರೆ. ಕ್ಷೇತ್ರದ ಜನರು ವಿಪಕ್ಷಗಳ ಮಾತಿಗೆ ಕಿವಿಗೊಡದೆ ಕಾಂಗ್ರೆಸ್ ಪಕ್ಷ ಬೆಂಬಲಿಸಿ, ಮಹದೇವಪ್ಪ ಅವರನ್ನೇ ಆಯ್ಕೆ ಮಾಡಬೇಕು ಎಂದು ಮನವಿ ಮಾಡಿದರು.

> ನರಸೀಪುರ ಕ್ಷೇತ್ರದ ಜನರು ತೀರಿಸಲಾಗದ ಋಣದಲ್ಲಿ ನನ್ನನ್ನು ಇಟ್ಟಿದ್ದಾರೆ. 1985ರಿಂದ ನಿರಂತರವಾಗಿ ರಾಜಕೀಯ ಅಧಿಕಾರ ಕೊಟ್ಟಿದ್ದರಿಂದ ಬೀದರ್‌ನಿಂದ ಚಾಮರಾಜನಗರದವರೆಗೆ ಮಹದೇವಪ್ಪ ಶಾಸಕ, ಸಚಿವ ಎಂದು ಗುರುತಿಸಿಕೊಳ್ಳಲು ಸಾಧ್ಯವಾಯಿತು.
> – ಡಾ.ಹೆಚ್.ಸಿ.ಮಹದೇವಪ್ಪ, ಕಾಂಗ್ರೆಸ್ ಅಭ್ಯರ್ಥಿ.


ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ಪುಟ್ಟೇಗೌಡ ಮಾತನಾಡಿ, ಜನಪರವಾಗಿದ್ದು ಅಭಿವೃದ್ಧಿ ಮಾಡುವುದು, ಜನರ ಕೆಲಸ ಮಾಡುವುದು ಪ್ರತಿಯೊಬ್ಬ ಜನಪ್ರತಿನಿಧಿ ಕರ್ತವ್ಯ. ಹಳ್ಳಿಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಿ, ಜನರ ಬದುಕನ್ನು ಹಸನುಗೊಳಿಸುವ ಯೋಗ್ಯರು, ಸಮರ್ಥರು ಹಾಗೂ ವಿವೇಚನಾವುಳ್ಳವರ ಕೈಗೆ ರಾಜಕೀಯ ಅಧಿಕಾರ ಕೊಡಬೇಕು ಎಂದು. ಗ್ರಾಮಕ್ಕೆ ಆಗಮಿಸಿದ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಪುಷ್ಪವೃಷ್ಟಿಗೈದು ಕಾರ್ಯಕರ್ತರು ಅದ್ದೂರಿ ಸ್ವಾಗತ ನೀಡಿ ಬರಮಾಡಿಕೊಂಡರು.

ಈ ವೇಳೆ ಕಾಂಗ್ರೆಸ್ ಮುಖಂಡ ಸುನೀಲ್ ಬೋಸ್, ಮಾಜಿ ಶಾಸಕಿ ಸುನೀತಾ ವೀರಪ್ಪಗೌಡ, ಜಿಪಂ ಸದಸ್ಯೆ ಸುಧಾ ಮಹದೇವಯ್ಯ, ಮೈಮುಲ್ ನಿರ್ದೇಶಕ ಆರ್.ಚೆಲುವರಾಜ್, ಎಪಿಎಂಸಿ ಮಾಜಿ ಅಧ್ಯಕ್ಷ ಎಂ.ರಾಜಣ್ಣ, ಮಹದೇಶ್ವರ ಬಸ್ ಮಾಲೀಕ ಕೆ.ನಾಗೇಂದ್ರ, ಮುಖಂಡರಾದ ಧ್ರುವಕೃಷ್ಣ ನ್ಯಾಯಬೆಲೆ ಅಂಗಡಿ ನಾಗೇಂದ್ರ, ಪದ್ಮನಾಭ, ಪ್ರಭಾಕರ್, ವರದರಾಜ್, ರಾಜಣ್ಣ ಗುತ್ತಿಗೆದಾರ ಮಧುಕುಮಾರ್, ಕಪಾಲಿ ಮಂಜು, ಸಂದೀಪ, ಮಹದೇವಸ್ವಾಮಿ, ಇಂದ್ರೇಶ, ಗ್ರಾಮಸ್ಥರು ಹಾಜರಿದ್ದರು.



ಪ್ರಧಾನಿ ಮೋದಿ ರೋಡ್ ಶೋ ಹಿನ್ನೆಲೆ: ನಿಗದಿತ ಮಾರ್ಗದಲ್ಲಿ

ಪ್ರಧಾನಿ ಭದ್ರತಾ ಬೆಂಗಾವಲು ಪಡೆಯ ಪೂರ್ವಾಭ್ಯಾಸ











ಪ್ರಧಾನಿ ಮೋದಿ ರೋಡ್ ಶೋ ಹಿನ್ನೆಲೆ ಸಯ್ಯಾಜಿರಾವ್ ರಸ್ತೆ ಕೇಸರಿಮಯವಾಗಿದೆ. ಗನ್‌ಹೌಸ್ ವೃತ್ತದಲ್ಲಿ ಪ್ರಧಾನಿ ಮೋದಿ ಅವರ 5–15 ಅಡಿ ಎತ್ತರದವರೆಗಿನ ಕಟೌಟ್‌ಗಳನ್ನು ಅಳವಡಿಸಲಾಗಿದೆ. ವೃತ್ತದ ಎರಡು ಕಡೆ ಸ್ವಾಗತ ಕಮಾನು ನಿರ್ಮಾಣ ಮಾಡಲಾಗಿದೆ. ಮಾರ್ಗದ ಎರಡೂ ಬದಿಯಲ್ಲಿ ಅಳವಡಿಸಿರುವ ಬ್ಯಾರಿಕೇಡ್‌ನಲ್ಲಿ ಕೇಸರಿ ಬಣ್ಣದ ಬಾವುಟ ಅಳವಡಿಸಲಾಗಿದೆ. ಹಾಗೆಯೇ ಹೆಜ್ಜೆ ಹೆಜ್ಜೆಗೆ ಬಿಜೆಪಿ ಬಾವುಟಗಳು, ಬಂಟಿಂಗ್ಸ್‌ಗಳು ರಾರಾಜಿಸುತ್ತಿದ್ದು, ಗನ್‌ಹೌಸ್‌ನಿಂದ ಎಲ್‌ಐಸಿ ವೃತ್ತದವರೆಗೆ ಕೇಸರಿಮಯವಾಗಿದೆ.

ಮೈಸೂರು, ಏ.29(ಎಂಕೆ)– ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಭಾನುವಾರ ಪ್ರಧಾನಿ ನರೇಂದ್ರ ಮೋದಿ ಅವರ ರೋಡ್ ಶೋ ಹಿನ್ನೆಲೆ ಭದ್ರತಾ ಬೆಂಗಾವಲು ಪಡೆಯ ಪೂರ್ವಾಭ್ಯಾಸ(ಕಾನ್ವಾಯ್ ತಾಲೀಮು) ನಡೆಸಲಾಯಿತು. ವಿಶೇಷ ಭದ್ರತಾ ಪಡೆಯ (ಎಸ್‌ಪಿಜಿ) ಅಧಿಕಾರಿಗಳ ಮಾರ್ಗಸೂಚಿಯನ್ವಯ ವ್ಯಾಪಕ ಬಿಗಿ ಭದ್ರತೆಯೊಂದಿಗೆ ತಾಲೀಮು ನಡೆಸಲಾಯಿತು. ಸಂಜೆ 5.30ಕ್ಕೆ ಓವಲ್ ಮೈದಾನ(ತಾತ್ಕಾಲಿಕ ಹೆಲಿಪ್ಯಾಡ್)ದಲ್ಲಿ ಪರಿಶೀಲನೆ ನಡೆಸಿದ ಭದ್ರತಾ ಅಧಿಕಾರಿಗಳು, 5.45ಕ್ಕೆ ಗನ್‌ಹೌಸ್ ವೃತ್ತಕ್ಕೆ ಆಗಮಿಸಿದರು.

ಎಲ್ಲಾ ಕಡೆಯಿಂದಲೂ ಪೊಲೀಸರಿಂದ ಸುತ್ತುವರಿದಿದ್ದ ಗನ್‌ಹೌಸ್ ವೃತ್ತದಿಂದ ಸಂಜೆ 6 ಗಂಟೆಗೆ ಹೊರಟ ಭದ್ರತಾ ವಾಹನಗಳು, ನಿಧಾನಗತಿಯಲ್ಲಿ ಸರದಿ ಸಾಲಿನಲ್ಲಿ ಸಾಗಿದವು. ಪ್ರಧಾನಿಗಳು ಸಂಚರಿಸುವ ವಾಹನದ ಹಿಂದೆ ಯಾವ್ಯಾವ ವಾಹನಗಳು ಸಂಚರಿಸಬೇಕು. ಸುರಕ್ಷತೆ ದೃಷ್ಟಿಯಿಂದ ರಸ್ತೆ ಮಧ್ಯದಲ್ಲಿ ವಾಹನಗಳು ಸಾಗಬೇಕು ಹಾಗೂ ಭದ್ರತಾ ವಾಹನಗಳ ಹಿಂದೆ ರೋಪ್(ಹಗ್ಗ) ಹಿಡಿದ ಪೊಲೀಸ್ ಸಿಬ್ಬಂದಿಗಳ ಭದ್ರತೆ ಸೇರಿದಂತೆ ಪ್ರತಿಯೊಂದು ಮುಂಜಾಗ್ರತಾ ಕ್ರಮಗಳನ್ನು ವಹಿಸಲಾಯಿತು.

ನಂತರ ಸಯ್ಯಾಜಿರಾವ್ ರಸ್ತೆ ಮಾರ್ಗದಲ್ಲಿ ತಾಲೀಮು ನಡೆಸಿದ ಬೆಂಗಾವಲು ಪಡೆಯ ವಾಹನಗಳು, ಕೆ.ಆರ್.ವೃತ್ತ, ಆಯುರ್ವೇದಿಕ್ ಸರ್ಕಲ್, ಹೈವೇ ವೃತ್ತ ಹಾಗೂ ಎಲ್‌ಐಸಿ ವೃತ್ತದವರೆಗೆ ಸಾಗಿತು. ಬೆಂಗಾವಲು ಪಡೆಯಲ್ಲಿ ಪ್ರಧಾನಿ ಮೋದಿ ಅವರ ಕಾರು, ಆಂಟೆನಾ ಹೊಂದಿರುವ ಕಾರು ಸೇರಿ 2 ಭದ್ರತಾ ಪಡೆಯ ಕಾರುಗಳು, ಮೈಸೂರು ನಗರ ಪೊಲೀಸ್ ಆಯುಕ್ತರ ಕಾರು, ಆಂಬ್ಯುಲೆನ್ಸ್ ಸೇರಿದಂತೆ 20ಕ್ಕೂ ಅಧಿಕ ವಾಹನಗಳಿದ್ದವು. ಮುಖ್ಯವಾಗಿ ಬೆಂಗಾವಲು ಪಡೆಯ ವಾಹನಗಳ ಬಳಿ ಯಾರೂ ಸುಳಿಯದಂತೆ ಕಟ್ಟೆಚ್ಚರ ವಹಿಸಲಾಗಿತ್ತು.

ಭಾರೀ ಭದ್ರತೆ: ಪ್ರಧಾನಿ ಮೋದಿ ಅವರ ರೋಡ್ ಶೋ ನಡೆಯುವ ಸಯ್ಯಾಜಿರಾವ್ ರಸ್ತೆ ಮಾರ್ಗದುದ್ದಕ್ಕೂ ಭಾರೀ ಭದ್ರತೆ ಒದಗಿಸಲಾಗಿತ್ತು. ರಸ್ತೆಯ ಎರಡು ಬದಿಯಲ್ಲಿಯೂ ಪೊಲೀಸರು ಭದ್ರತೆ ನೀಡಿದರೆ, ಬೆಂಗಾವಲು ವಾಹನಗಳನ್ನು ಸಿಎಆರ್ ಸಿಬ್ಬಂದಿ ಸುತ್ತುವರಿದಿದ್ದರು. ಸುಮಾರು 3 ಸಾವಿರಕ್ಕೂ ಹೆಚ್ಚು ಪೊಲೀಸರನ್ನು ನಿಯೋಜಿಸಲಾಗಿದ್ದು, ರೋಡ್ ಶೋ ವೇಳೆ ರಸ್ತೆಗೆ ಯಾರೂ ಇಳಿಯದಂತೆ ಸೂಕ್ತ ಭದ್ರತೆ ವಹಿಸಲಾಯಿತು.

ವಾಹನಗಳ ಸಂಚಾರ ಬಂದ್: ಚಾಮರಾಜ ಜೋಡಿ ರಸ್ತೆ, ಬೆಂಗಳೂರು–ಮೈಸೂರು ನೀಲಗಿರಿ ರಸ್ತೆ ನಂಜನಗೂಡು ಹಾಗೂ ಅಗ್ರಹಾರದ ಕಡೆಯಿಂದ ಗನ್‌ಹೌಸ್ ವೃತ್ತದ ಕಡೆಗೆ ಬರುವ ವಾಹನಗಳನ್ನು ಬಂದ್ ಮಾಡಲಾಗಿತ್ತು. ವೃತ್ತದ ಸುತ್ತಲೂ ಬ್ಯಾರಿಕೇಡ್‌ಗಳನ್ನು ಅಳವಡಿಸಲಾಗಿತ್ತು. ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಡಿಸಿಪಿಗಳಾದ ಮುತ್ತುರಾಜ್, ಜಾಹ್ನವಿ ಸೇರಿದಂತೆ ಗುಪ್ತಚರ ಇಲಾಖೆ ಅಧಿಕಾರಿಗಳು ತಾಲೀಮಿನಲ್ಲಿ ಭಾಗವಹಿಸಿದ್ದಲ್ಲದೆ ಭದ್ರತೆಯಲ್ಲಿ ಲೋಪವಾಗದಂತೆ ಮುಂಜಾಗ್ರತೆ ವಹಿಸಿದರು.

ಸ್ಥಳಕ್ಕೆ ಶಾಸಕ ರಾಮದಾಸ್, ಸಂಸದ ಪ್ರತಾಪ್ ಸಿಂಹ ಭೇಟಿ: ಭದ್ರತಾ ಬೆಂಗಾವಲು ಪಡೆಯ ಪೂರ್ವಭ್ಯಾಸದ ವೇಳೆ ಗನ್‌ಹೌಸ್ ವೃತ್ತಕ್ಕೆ ಭೇಟಿ ನೀಡಿದ ಶಾಸಕ ಎಸ್.ಎ.ರಾಮದಾಸ್, ಸಂಸದ ಪ್ರತಾಪ್ ಸಿಂಹ, ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್, ರೋಡ್ ಶೋ ಸಮಿತಿಯ ಡಾ.ಚಂದ್ರಶೇಖರ್, ಬಿಜೆಪಿ ಮುಖಂಡ ವೈ.ವಿ.ರವಿಶಂಕರ್ ಮತ್ತಿತರರು ಸಿದ್ಧತೆಗಳ ಪರಿಶೀಲನೆ ನಡೆಸಿದರು. ಈ ವೇಳೆ ವೃತ್ತದ ಬದಿಯಲ್ಲಿ ವೇದಿಕೆ ನಿರ್ಮಾಣ, ಕಟೌಟ್‌ಗಳ ಅಳವಡಿಕೆ, ಸ್ವಾಗತ ಕಮಾನು ನಿರ್ಮಾಣದ ಕುರಿತು ಮಾಹಿತಿ ಪಡೆದರಲ್ಲದೆ ಎಲ್ಲಾ ಸಿದ್ಧತಾ ಕಾರ್ಯಗಳನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಸಂಬಂಧಪಟ್ಟವರಿಗೆ ಸೂಚನೆ ನೀಡಿದರು.

ದಕ್ಷಿಣ ಭಾರತದ ಮೇಲೆ ಉತ್ತರ ಭಾರತದ ಯಜಮಾನಿಕೆ ಹೆಚ್ಚಾಗುತ್ತಿದೆ



ಮೈಸೂರು,ಏ.29(ಪಿಎಂ)– ಕರ್ನಾಟಕ ಸೇರಿದಂತೆ ದಕ್ಷಿಣ ಭಾರತದ ಮೇಲೆ ಉತ್ತರ ಭಾರತದ (ಕೇಂದ್ರ ಸರ್ಕಾರ) ಯಜಮಾನಿಕೆ ಹೆಚ್ಚಾಗುತ್ತಿದೆ ಎಂದು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್, ಬಿಜೆಪಿ ಪ್ರಸ್ತುತದ ತನ್ನ ತತ್ವ–ಸಿದ್ಧಾಂತಗಳ ನೆಲೆ ಮೇಲೆ ದಕ್ಷಿಣ ಭಾರತದಲ್ಲಿ ಯಾವ ಕಾರಣಕ್ಕೂ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ ಎಂದು ಪ್ರತಿಪಾದಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದಕ್ಷಿಣ ಭಾರತದ ಮೇಲೆ ಉತ್ತರ ಭಾರತದ ಯಜಮಾನಿಕೆ ಹೆಚ್ಚಾಗುತ್ತಿದೆ. ಕೇಂದ್ರದ ಯಜಮಾನಿಕೆ ಕರ್ನಾಟಕದ ಮೇಲೆ ಜಾಸ್ತಿಯಾಗುತ್ತಿದೆ. ನಮ್ಮ ಜಿಎಸ್‌ಟಿ ಪಾಲು ಬರಬೇಕಿರುವಷ್ಟು ಬರುತ್ತಿಲ್ಲ. ಬಿಜೆಪಿ ನಾಯಕರ ಗುಲಾಮಗಿರಿ ಮನಸಿನಿಂದ ನಮ್ಮ ಜಿಎಸ್‌ಟಿ ಪಾಲು ತರುತ್ತಿಲ್ಲ. ಅತೀ ಹೆಚ್ಚು ಜಿಎಸ್‌ಟಿ ಪಾವತಿಯು ಕರ್ನಾಟಕದಿಂದ ಆಗುತ್ತಿದೆ. ಇತ್ತ ಜನ ಬೆಲೆ ಏರಿಕೆಯಿಂದ ತತ್ತರಿಸಿದ್ದಾರೆ ಎಂದು ಕಿಡಿಕಾರಿದರು.

ದಕ್ಷಿಣದ ಹಣ ಉತ್ತರಕ್ಕೆ ಹರಿದು ಹೋಗುತ್ತಿದೆ. ಕರ್ನಾಟಕದವರು ಕಟ್ಟಿ ಬೆಳೆಸಿದ ಬ್ಯಾಂಕ್‌ಗಳು ಉತ್ತರ ಆಡಳಿತಕ್ಕೆ ಹೋಗುತ್ತಿವೆ. ನಂದಿನಿಯನ್ನು ತೆಕ್ಕೆಗೆ ತೆಗೆದುಕೊಳ್ಳಲು ಪ್ರಯತ್ನಿಸಲಾಗುತ್ತಿದೆ. ಇದಕ್ಕೆ ಇವರಿಗೆ ಅಧಿಕಾರ ಕೊಡಬೇಕೇ ಎಂದು ಪ್ರಶ್ನಿಸಿದರು. ದೇಶದಲ್ಲಿ 26 ಮಂದಿ ಬ್ಯಾಂಕಿಗೆ ವಂಚಿಸಿದವರು ಇದ್ದಾರೆ. ಈ ಪೈಕಿ 25 ಮಂದಿ ಗುಜರಾತ್‌ನವರೇ ಆಗಿದ್ದಾರೆ. ಪ್ರಧಾನಿ ಮೋದಿಯವರಿಗೆ ಇದು ಗೊತ್ತಿಲ್ಲವೇ. ಬಡವರು, ಕಾರ್ಮಿಕರು ಹಣ ಇರುವ ಎಲ್‌ಐಸಿ ಅನ್ನೂ ದಿವಾಳಿ ಮಾಡಲಾಗುತ್ತಿದೆ. ಮೋದಿಯವರು ಮೈಸೂರಿಗೆ ಬರುತ್ತಿದ್ದಾರೆ. ಮೋದಿ ಯವರೇ ನಾನು ಕೂಡ ಬಿಜೆಪಿಯಲ್ಲಿ ಇದ್ದವನು. ಇಲ್ಲಿ ಸರ್ಕಾರ ತರುವುದಕ್ಕೂ ಕಾರಣವಾದವನು. 'ಕರ್ನಾಟಕ ಬಿಜೆಪಿ' ಚಾರಿತ್ರಿಕ ಭ್ರಷ್ಟಾಚಾರದಲ್ಲಿ ಸಿಲುಕಿ ಕಸದ ತೊಟ್ಟಿಯಾಗಿದೆ. ಅದನ್ನು ತೊಳೆದು ಬನ್ನಿ ಎಂದು ಒತ್ತಾಯಿಸಿದರು.

ಮಹಾರಾಜರ ಕಾಲದಿಂದ ಇರುವ ಮೀಸಲಾತಿ ಅರ್ಥವನ್ನೇ ಬಸವರಾಜ ಬೊಮ್ಮಾಯಿ ಹಾಳು ಮಾಡಿದರು. 40 ಪರ್ಸೆಂಟ್ ವಿರುದ್ಧ ಕೊಟ್ಟ ಅರ್ಜಿ ಏನಾಯಿತು ಮೋದಿಯವರೇ? ನೀವು ಗುಜರಾತಿನಲ್ಲಿ ಮುಸಲ್ಮಾನರನ್ನು ಪ್ರೀತಿ ಮಾಡುತ್ತೀರಾ ಎಂಬುದು ನನಗೆ ಗೊತ್ತು. ಅದು ಇಲ್ಲೇಕೆ ಆಗುತ್ತಿಲ್ಲ. 'ನೀವು ಬಿಜೆಪಿಗೆ ಓಟು ಹಾಕದಿದ್ದರೆ ಮೋದಿಯವರ ಆಶೀರ್ವಾದ ಸಿಗುವುದಿಲ್ಲ' ಎಂದು ಜೆ.ಪಿ.ನಡ್ಡಾ ಹೇಳಿಕೆ ನೀಡಿದ್ದಾರೆ. ನಮ್ಮದೆಲ್ಲವನ್ನೂ ಕಿತ್ತುಕೊಳ್ಳುವ ಮೋದಿಯವರ ಆಶೀರ್ವಾದ ನಮಗೇಕೆ ಎಂದು ಪ್ರಶ್ನಿಸಿದರು.

ನರೇಂದ್ರ ಮೋದಿಯವರು ನಮ್ಮ ಪ್ರಧಾನಿಗಳು. ಅವರು ರಾಜ್ಯಕ್ಕೆ ಬರಲಿ. ಸ್ವಾಗತ ಮಾಡುತ್ತೇವೆ. ಆದರೆ ಸುಮ್ಮನೆ ಬಂದು ಹೋಗುವುದಲ್ಲ. ನಮ್ಮಿಂದ ಕಿತ್ತುಕೊಂಡಿರುವುದನ್ನು ವಾಪಸ್ಸು ಕೊಡಬೇಕು. ಸುಮ್ಮನೆ ಬಂದು ಎಷ್ಟು ಭಾಷಣ ಮಾಡಿದರೂ ಇಲ್ಲಿ ಪ್ರಯೋಜನವಾಗಲ್ಲ ಎಂದರು.

ಸಂಸದರ ವಿರುದ್ಧ ಕಿಡಿ: ವರುಣ ಕ್ಷೇತ್ರದ ಸಿದ್ದರಾಮನಹುಂಡಿಯಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಕಾರ್ಯಕರ್ತರ ಘರ್ಷಣೆ ಸಂಬಂಧ ಸಂಸದ ಪ್ರತಾಪ್ ಸಿಂಹ ಹೇಳಿಕೆ ವಿರುದ್ಧ ಕಿಡಿಕಾರಿದರು. ಸಂಸದರೇ ನಿಮ್ಮ ಪ್ರತಾಪ ತೋರಲು ಹೋಗಬೇಡಿ ಎಂದು ಕಿಡಿಕಾರಿದರು.

ವಿ.ಸೋಮಣ್ಣ ಮತ್ತು ಸಿದ್ದರಾಮಯ್ಯ ಇಬ್ಬರು ನೆಲದಿಂದ ಮೇಲಕ್ಕೆ ಬಂದವರು. ಒಬ್ಬರಿಗೊಬ್ಬರಿಗೆ ಯಾರೂ ಕಡಿಮೆ ಇಲ್ಲ. ಇಬ್ಬರು ಜನರ ಮಧ್ಯದಿಂದ ಮೇಲೆ ಬಂದವರು. ಸಮಾಜದ ಕಷ್ಟ–ಸುಖ ಗೊತ್ತಿರುವವರು. ನಿಮಗೇನು ಗೊತ್ತು. ಯಾರನ್ನು ಆಯ್ಕೆ ಮಾಡಬೇಕೆಂದು ಜನ ತೀರ್ಮಾನ ಮಾಡುತ್ತಾರೆ ಎಂದು ವಾಗ್ದಾಳಿ ನಡೆಸಿದರು.

ಬಿಜೆಪಿ ವಿರುದ್ಧ ಎ.ಹೆಚ್.ವಿಶ್ವನಾಥ್ ವಾಗ್ದಾಳಿ

> "ದಕ್ಷಿಣ ಭಾರತದಲ್ಲಿ ಬಿಜೆಪಿ ಯಾವ ಕಾರಣಕ್ಕೂ ಅಧಿಕಾರಕ್ಕೆ ಬರುವುದಿಲ್ಲ. ಈಗ ಬಂದಿದ್ದೆಲ್ಲಾ ಸ್ವಂತ ಶಕ್ತಿ ಮೇಲೆ ಅಲ್ಲ. ಯಾರೋ ನಮ್ಮಂತವರು ಹಾಗೂ ಕುಮಾರಸ್ವಾಮಿ ಸಹಾಯದಿಂದ ಬಂದಿದ್ದಷ್ಟೇ. ಈಗಲೂ ಬರಲ್ಲ. ಇವರು (ಬಿಜೆಪಿ) ಹೇಳುವ ಧರ್ಮ, ಆಧ್ಯಾತ್ಮ ಈ ಎಲ್ಲಾ ಪ್ರಯೋಗಗಳು ಇಲ್ಲಿ ನಡೆದು ಹೋಗಿವೆ. ಇದೆಲ್ಲಾ ಹಳೇ ಕಥೆಗಳು. -ಎ.ಹೆಚ್.ವಿಶ್ವನಾಥ್

ನೆಕ್ಸಸ್ ಸೆಂಟರ್ ಸಿಟಿ ಮಾಲ್‌ನಲ್ಲಿ ವಿಶಿಷ್ಟ ರೀತಿ ಮತದಾನ ಜಾಗೃತಿ



ಮೈಸೂರು, ಏ.29(ಎಂಕೆ)– ನಗರದ ನೆಕ್ಸಸ್ ಸೆಂಟರ್ ಸಿಟಿ ಮಾಲ್‌ನಲ್ಲಿ ಹಾಡು, ಭರತನಾಟ್ಯದ ಮೂಲಕ ಮತದಾನ ಜಾಗೃತಿ ಮೂಡಿಸಲಾಯಿತು.

ಜಿಲ್ಲಾಡಳಿತ, ನಗರಪಾಲಿಕೆ, ಜಿಪಂ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ಸಹಯೋಗದೊಂದಿಗೆ ಆಯೋಜಿಸಿದ್ದ ಜಾಗೃತಿ ಕಾರ್ಯಕ್ರಮದಲ್ಲಿ ನೃತ್ಯ ವಿದ್ಯಾಪೀಠದ ಭರತನಾಟ್ಯ ಕಲಾವಿದರು ವಿಶೇಷ ನೃತ್ಯದ ಮೂಲಕ ಮತದಾನದ ಅರಿವು ಮೂಡಿಸಿದರು. ನಂತರ ವಸಿಷ್ಠಗಾನ ತಂಡದ ಕಲಾವಿದ ವಿಜಯ್ ಸೂರ್ಯ, ಕೊಳಲು ವಾದನದ ಮೂಲಕ ತಮ್ಮದೇ ರಚನೆಯ ಹಾಡೊಂದನ್ನು ನುಡಿಸುವ ಮೂಲಕ ಪ್ರತಿಯೊಬ್ಬರು ಮತದಾನ ಮಾಡುವಂತೆ ಮನವಿ ಮಾಡಿದರು.

ಮತದಾನ ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿದ ಜಿಪಂ ಸಿಇಓ ಕೆ.ಎಂ.ಗಾಯತ್ರಿ ಮಾತನಾಡಿ, ಮೇ.10 ರಂದು ನಡೆಯುವ ರಾಜ್ಯ ವಿಧಾನಸಭಾ ಚುನಾವಣೆಯ ಮತದಾನ ಪ್ರಕ್ರಿಯೆಯಲ್ಲಿ ಪ್ರತಿಯೊಬ್ಬ ಮತದಾರರು ಭಾಗವಹಿಸಬೇಕು. ದೇಶದ ಹಿತಕ್ಕಾಗಿ ಓಟ್ ಮಾಡುವುದು ಅವಶ್ಯಕವಾಗಿದೆ ಎಂದು ತಿಳಿಹೇಳಿದರು. ನಗರಪಾಲಿಕೆ ಕಾರ್ಯಪಾಲಕ ಇಂಜಿನಿಯರ್ ಡಿ.ನಾಗರಾಜು, ಪರಿಸರ ಇಂಜಿನಿಯರ್ ಎಸ್.ಮೈತ್ರಿ, ಶ್ರೀದೇವಿ, ನಗರಪಾಲಿಕೆ ಸ್ವೀಪ್ ತಂಡದ ಸದಸ್ಯರು ಉಪಸ್ಥಿತರಿದ್ದರು.

2ನೇ ವರ್ಷದ ಸವಿನೆನಪು



ರೇಣುಕಾ.ಹೆಚ್

ಜನನ: 31.07.1963 ಮರಣ: 30.04.2021

ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು: ಕುಟುಂಬವರ್ಗ

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು, ನನ್ನ ಕಕ್ಷಿದಾರರು ಅದರ ಮಾಲೀಕರಾದ, ನಂಬರ್: 78, ವಾಣಿವಿಲಾಸ ಬಡಾವಣೆ, ಹೆಬ್ಬಾಳ, ವಿಜಯನಗರ 2ನೇ ಹಂತ, ದೇವರಾಜ ಮೊಹಲ್ಲಾ, ಮೈಸೂರು–570 017, ಇಲ್ಲಿನ ನಿವಾಸಿಯಾದ, ಶ್ರೀಮತಿ ಹೆಚ್.ಬಿ. ಶೋಭ ಕೋಂ: ರಮೇಶ್ ಆರ್. ಇವರಿಂದ ಖರೀದಿ ಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಪರಬಾರೆಯ ವಿಚಾರದಲ್ಲಿ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಹದಿನೈದು (15) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್

ಮೈಸೂರು ನಗರ, ದೇವರಾಜ ಮೊಹಲ್ಲಾ, ವಿಜಯನಗರ 4ನೇ ಹಂತ, 2ನೇ ಫೇಸ್, ಇಲ್ಲಿರುವ ಪೂರ್ವ–ಪಶ್ಚಿಮ: 12 ಮೀಟರ್, ಉತ್ತರ–ದಕ್ಷಿಣ: 09 ಮೀಟರ್, ಒಟ್ಟು ವಿಸ್ತೀರ್ಣ: 108 ಚದರ ಮೀಟರ್ ಅಳತೆಯ ಆಸ್ತಿ ಸಂಖ್ಯೆ: 6302 ಮತ್ತು ಇದರಲ್ಲಿ ಕಟ್ಟಿರುವ ಮನೆ, ಇದಕ್ಕೆ ಚಕ್ಕುಬಂದಿ – ಪೂರ್ವಕ್ಕೆ: ರಸ್ತೆ ; ಪಶ್ಚಿಮಕ್ಕೆ: ನಿವೇಶನ ಸಂಖ್ಯೆ: 6925 ; ಉತ್ತರಕ್ಕೆ: ನಿವೇಶನ ಸಂಖ್ಯೆ: 6301 ; ದಕ್ಷಿಣಕ್ಕೆ: ನಿವೇಶನ ಸಂಖ್ಯೆ: 6303.

Sd/- M.N. Prakash Kalappa,
Advocate & Legal Consultant,
KAR 1996-2000, #67/7A, P.R.I. Complex,
No. 2 & 3, 1st Floor, New Sayyaji Rao Road, Fort Mohalla, Mysuru-570 004.
Mob: 93431 12535.
Email: mnprakashkalappa@gmail.com
ಮೈಸೂರು: 28–4–2023

36ನೇ ವರ್ಷದ ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



ಶ್ರೀಮತಿ ಬಿ.ಸುಶೀಲ ಮತ್ತು ಎಸ್.ಸಿ.ಬಸವರಾಜು(ಆನಂದ್)

ಶುಭಕೋರುವವರು

ಹೆಣ್ಣು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು ಸಿಂಧುವಳ್ಳಿ ಮೈಸೂರು ತಾಲ್ಲೂಕು

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಶ್ರೀ ನಾಗರಾಜ ರಾವ್, ಚಾರ್ಟರ್ಡ್ ಅಕೌಂಟೆಂಟ್, ಮೈಸೂರು ಇವರ ಇರಾದೆ ಮೇರೆ: (ಶ್ರೀ ಸಿ. ಹನುಮಂತರಾವ್ (ಸಿ.ಹೆಚ್. ರಾವ್) ರವರ ಮಗ)

1) ಗುರುರಾಜ ರಾವ್ ಎಂಬಾತನು, ಕಾನೂನಿನ ಮೇರೆ ಶ್ರೀ ಹೆಚ್. ಸುಬ್ಬರಾವ್ ಇವರ ಮಗನಾಗಿದ್ದರೂ ನನ್ನ ಕಕ್ಷಿದಾರರ ತಂದೆಯಾದ ಲೇಟ್ ಶ್ರೀ ಸಿ.ಹೆಚ್. ರಾವ್ ಇವರನ್ನೇ ತಂದೆಯೆಂದು ಹೇಳಿಕೊಳ್ಳುತ್ತಾ ಸದರಿ ಸಿ.ಹೆಚ್. ರಾವ್ ಅವರ ವಂಶವೃಕ್ಷದಲ್ಲಿ ತನ್ನ ಹೆಸರನ್ನು ಸುಳ್ಳು ಅಫಿಡವಿಟ್ ಕೊಟ್ಟು ಸೇರಿಸಿಕೊಂಡಿರುತ್ತಾನೆ.

2) ಅಲ್ಲದೆ ಇನ್ನು ಅನೇಕ ದಾಖಲೆಗಳಲ್ಲಿ ಅದೇ ರೀತಿ ಸುಳ್ಳಾಗಿ ತೋರಿಸಿಕೊಂಡಿರುತ್ತಾನೆ.

3) ಸದರೀ ಶ್ರೀ ಸಿ.ಹೆಚ್. ರಾವ್ ಅವರ ಕುಟುಂಬ ಆಸ್ತಿಯಾದ ಮನೆ ನಂಬರ್ 1247, ಕೆ.ಎಂ. ಪುರಂ, ಮೈಸೂರು – ಈ ಆಸ್ತಿಯೂ ಮೇ 2015 ರಿಂದ ನನ್ನ ಕಕ್ಷಿದಾರರ ಸುಪರ್ದಿನದಲ್ಲಿದ್ದು, ಅವರು ಅಲ್ಲಿ 2015 ರಿಂದಲೂ ವಾಸಿಸುತ್ತಿದ್ದರೂ ಸದರಿ ಗುರುರಾಜ ರಾವ್, ಅಲ್ಲಿ ವಾಸವಿಲ್ಲದೇ ತನ್ನ ಕುಟುಂಬ ಜೊತೆ 2015 ರಿಂದ ಬೇರೆ ಕಡೆ ವಾಸಿಸುತ್ತಿದ್ದರೂ ಈತನು ಮನೆ ನಂಬರ್ 1247 ತನ್ನ ಸುಪರ್ದಿನಲ್ಲಿದೆಯೆಂದು ಸುಳ್ಳು ವ್ಯವಹರಿಸುತ್ತಾ, ಪ್ಯಾನ್ ಕಾರ್ಡ್ ಮೊದಲಾದ ಅನೇಕ ದಾಖಲೆಗಳಲ್ಲಿ ಆ ವಿಳಾಸವೇ ತನ್ನದೆಂದು ಸುಳ್ಳಾಗಿ ಕೊಟ್ಟಿರುತ್ತಾನೆ. ನನ್ನ ಕಕ್ಷಿದಾರರು ಆತನಿಗೆ ವಿಳಾಸ ದಾಖಲೆ ತಿದ್ದುಪಡಿ ಮಾಡಿಕೊಳ್ಳುವಂತೆ ವಕೀಲರ ನೋಟೀಸ್ ಇತ್ಯಾದಿ ಕೊಟ್ಟಿದ್ದರೂ ಇಲ್ಲಿವರೆಗೆ ಆತನು ಆ ರೀತಿ ನಡೆದುಕೊಂಡಂತೆ ಕಂಡಿರುವುದಿಲ್ಲ.

4) ಅನೇಕರು ಸದರಿ ಗುರುರಾಜ ರಾವ್ ರವರನ್ನು ಕೇಳಿಕೊಂಡು ನನ್ನ ಕಕ್ಷಿದಾರರು ವಾಸವಿರುವ ಮನೆಗೆ ಬರುತ್ತಿದ್ದು, ಇದರಿಂದ ತೊಂದರೆಯಾಗಿದೆ. ಮೇಲ್ಕಂಡ ಮನೆಯ ವಿಚಾರವಾಗಿ ಯಾವುದೇ ರೀತಿಯ ವ್ಯವಹಾರವನ್ನು ಯಾರೂ ಗುರುರಾಜ ರಾವ್‌ರೊಡನೆ ಮಾಡಬಾರದೆಂದು, ಒಂದು ವೇಳೆ ಯಾರಾದರೂ ಸದರಿ ಸ್ವತ್ತಿನ ಬಗ್ಗೆ ಗುರುರಾಜ ರಾವ್ ರವರೊಂದಿಗೆ ವ್ಯವಹರಿಸಿದ್ದಲ್ಲಿ ಅದಕ್ಕೆ ನನ್ನ ಕಕ್ಷಿದಾರರು ಜವಾಬ್ದಾರರಾಗುವುದಿಲ್ಲ.

5) ಸದರಿ ಗುರುರಾಜ ರಾವ್‌ಗೆ ದಾಖಲೆ ಇತ್ಯಾದಿಗಳನ್ನು ಯಥಾರ್ಥ ರೀತ್ಯಾ ಒಂದು ವಾರದೊಳಗೆ ತಿದ್ದುಪಡಿಮಾಡಿಸಿಕೊಳ್ಳಲು ಈ ಮೂಲಕ ಸೂಚಿಸಿ, ಒಂದು ಪಕ್ಷ ಆ ರೀತಿ ನಡೆಯದಿದ್ದರೆ ಸೂಕ್ತ ಕ್ರಿಮಿನಲ್ ಕ್ರಮ ಜರುಗಿಸುವುದಾಗಿ ತಿಳಿಸಲಾಗಿದೆ.

Sd/- S.V. Nagendra
Advocate & Notary
29-4-2023 Thyagaraja Road, Mysore.